# ಶ್ರೀಸುಧಾ

SRISUDHA – KANNADA –MONTHLY

-ಃ ಸಂಸ್ಥಾಪಕರು ಃ-

**ಪರಮಪೂಜ್ಯ ಶ್ರೀ ಶ್ರೀ 1008 ಶ್ರೀಸತ್ಯಪ್ರಮೋದತೀರ್ಥಶ್ರೀಪಾದಂಗಳವರು**

**ಶ್ರೀಮತ್ಸತ್ಯಾತ್ಮತೀರ್ಥಾನಾಂ ಕರುಣಾರಸಪೋಷಿತಾ ।**
**ಸೇವ್ಯತಾಂ ರಸಿಕೈರ್ಮಾಧ್ವೈಃ ಶ್ರೀಸುಧಾಮಾಸಪತ್ರಿಕಾ ॥**

## ಜಯನಾಮಸಂವತ್ಸರ ಆಶ್ವಿನ ಮಾಸ ಅಕ್ಟೋಬರ್ 2014


**ಶ್ರೀಸುಧಾ ಸಂಪಾದಕೀಯ ಸಲಹಾ ಮಂಡಳಿ**

ಪಂ. ರಾಮಾಚಾರ್ಯ ಕಟ್ಟಿ (ಶ್ರೀಪಾದಪುತ್ರರು) ಪಂ. ರಂಗಾಚಾರ್ಯ ಗುತ್ತಲ (ಶ್ರೀಪಾದಪುತ್ರರು)
ಪಂ. ವಿದ್ಯಾಸಿಂಹಾಚಾರ್ಯ ಮಾಹುಲಿ ಪಂ. ಪಂಢರೀನಾಥಾಚಾರ್ಯ ಗಲಗಲಿ
ಪಂ. ವಿ. ಪ್ರಭಂಜನಾಚಾರ್ಯ ಪಂ. ಮಧ್ವಾಚಾರ್ಯ ಮೊಖಾಶಿ
ಪಂ. ಸತ್ಯಧ್ಯಾನಾಚಾರ್ಯ ಕಟ್ಟಿ

**ಗೌರವ ಸಂಪಾದಕರು ಃ ಪಂ. ಜಯತೀರ್ಥಾಚಾರ್ಯ ಮಳಗಿ**

**ಸಂಪಾದಕರು ಃ ಪಂ. ವಿದ್ಯಾಧೀಶಾಚಾರ್ಯ ಗುತ್ತಲ**

**ನಿರ್ವಹಣೆ ಃ ಶ್ರೀ ಎ. ಬಿ. ಶ್ಯಾಮಾಚಾರ್ಯ**

**ಜಯಸತ್ಯಪ್ರಮೋದನಿಧಿಯ ಧರ್ಮದರ್ಶಿಮಂಡಲಿ**

ಡಾ॥ಎಂ.ಎಂ.ಜೋಶಿ,ಅಧ್ಯಕ್ಷರು ಶ್ರೀ ವೆಂಕಟರಾವ್ ಕಾರ್ಯದರ್ಶಿ
ಶ್ರೀ ಎನ್.ಬಿ.ಹೆಚ್.ಕುಲಕರ್ಣಿ ಶ್ರೀ ಟಿ.ಎಸ್.ರಾಘವೇಂದ್ರನ್

ಸಲಹೆಗಾರರು - ಶ್ರೀ ಕೆ.ಆರ್. ಗಂಡಮಾಲಿ



**ಸಂಪುಟ 63** ಮುಖಪುಟವಿನ್ಯಾಸ **ಸಂಪುಟ 18**
**ಸಂಚಿಕೆ 10** ಗೋಪಾಲಕೃಷ್ಣ ದಾವಣಗೇರಿ **ಸಂಚಿಕೆ 07**

# ವಿಷಯಾನುಕ್ರಮಣಿಕಾ


| | | | |
|---|---|---|---|
| 1 | ಶ್ರುತಿಸುಧಾ/ವ್ಯಾಸಸುಧಾ/ದಾಸಸುಧಾ | | 3 |
| 2 | ಸತ್ಯಾತ್ಮವಾಣಿ | ಡಾ. ಕಾಂತೇಶಾಚಾರ್ಯ ಕದರಮಂಡಲಗಿ | 4 |
| 3 | ನುಡಿಮುತ್ತು | ಡಾ.ಸತ್ಯಧ್ಯಾನಾಚಾರ್ಯ ಕಟ್ಟಿ | 8 |
| 4 | ಶ್ರೀಕೃಷ್ಣ - 56 | ಪಂ. ಮಳಗಿ ಜಯತೀರ್ಥಾಚಾರ್ಯ | 9 |
| 5 | 'ಉಪಾಕರ್ಮ' ಏನು ? ಏಕೆ ? ಹೇಗೆ ?-20 | ಪಂ. ಶ್ರೀನಿವಾಸಾಚಾರ್ಯ ನಾಗರಹಳ್ಳಿ | 12 |
| 6 | ಸಿದ್ಧಿವಿಘ್ನಮುಖದೋಷಭೇಷಜ | ಪಂ. ಸಗ್ರಿ ರಾಘವೇಂದ್ರ ಉಪಾಧ್ಯಾಯ | 15 |
| 7 | ವಿಷ್ಣುವಿಗೆ ಪ್ರಿಯರಾದವರು ಯಾರು ? | ಪಂ. ವೆಂಕಟಗಿರೀಶಾಚಾರ್ಯ ಅನಂತಪುರ | 18 |
| 8 | ವಿಷ್ಣುಸಹಸ್ರನಾಮ | ಪಂ. ಪದ್ಮನಾಭಾಚಾರ್ಯ ಚಿಟಗುಪ್ಪ | 20 |
| 9 | ಸನಾತನ ಸಂಸ್ಕಾರಗಳು-23 | ಪಂ. ವೆಂಕಟೇಶಾಚಾರ್ಯ ಬಿ.ಆರ್ | 22 |
| 10 | ಮಹಾಭಾರತದ ಉಪಕಥೆಗಳು | ಪಂ. ಪುರಂದರಾಚಾರ್ಯ ಹಯಗ್ರೀವ | 25 |
| 11 | ಶ್ರಾದ್ಧ - ನೂರಾರು ಪ್ರಶ್ನೆಗಳು - 21 | ಪಂ. ವಾದಿರಾಜಾಚಾರ್ಯ ಕರಣಮ್ | 31 |
| 12 | ದಾಸಸಾಹಿತ್ಯ ಪ್ರಶ್ನೋತ್ತರಗಳು- 72 | ಶ್ರೀ. ಎ.ಬಿ.ಶ್ಯಾಮಾಚಾರ್ಯ | 36 |
| 13 | ಐತಿಹಾಸಿಕ ಚಾತುರ್ಮಾಸ್ಯದ ಸಮಾರೋಪದ ವೈಭವ | | 37 |


## ಶ್ರೀಸುಧಾ ಓದುಗರಿಗೆ ದೀಪಾವಳಿ ಶುಭಾಶಯಗಳು

ಜಯನಾಮಸಂವತ್ಸರದ ದೀಪಾವಳಿಯು ಮನೆ ತುಂಬ ದೀಪವನ್ನು ಬೆಳಗುವ ಮೂಲಕ ಜ್ಞಾನ, ಭಕ್ತಿ , ಶ್ರದ್ಧೆ, ಪರೋಪಕಾರ, ವಿವೇಕ, ಪ್ರೀತಿ, ಆದರ, ಸ್ನೇಹ, ಶಾಂತಿ, ಸೌಹಾರ್ದಗಳ ದೀಪವನ್ನು ಮನ-ಮನೆಗಳಲ್ಲಿ ಬೆಳಗುವಂತಾಗಲಿ.

ಜಗದುದರ ತಾನೆಂದು ತೋರಿದ
ಯದುಕುಲಾಧಿಪನೊಲುಮೆಯಿಂದಲಿ
ದೀರ್ಘವಾಗಲಿ ಬೆಳಕಿನಂದದಿ ಅರಿವು ಆಯುಷ್ಯ
ಪಾಪಕತ್ತಲು ದೂರಸರಿಯಲಿ
ವಸುಧೆಯೊಳು ಅವತಾರತಾಳಿದ ಗಾ-
ಳಿದೇವರ ಕರುಣೆಯಿಂದಲಿ ತತ್ವ ಸಿದ್ಧಿಸಲಿ.

## ... ಶ್ರುತಿಸುಧಾ ...

**ಪರೋ ಮಾತ್ರಯಾ ತನ್ವಾ ವೃಧಾನ  ನ ತೇ ಮಹಿತ್ವಂ ಅನ್ವಶ್ನುವಂತಿ ।**
**ಉಭೇ ತೇ ವಿದ್ಮ ರಜಸೀ ಪೃಥಿವ್ಯಾ ವಿಷ್ಣೋ ದೇವ ತ್ವಂ ಪರಮಸ್ಯ ವಿತ್ಸೇ ॥**

**ಋಗ್ವೇದ 7-99-1**

ಯಾವ ಅಳತೆಗೆ ಸಿಗದ ಬೆಳೆದ ದೇಹವುಳ್ಳ, ತನ್ನ ಮಹಿಮೆಯನ್ನು ಯಾರೂ ಗ್ರಹಿಸಲಾಗದ, ಭೂಮಿಸ್ವರ್ಗವನ್ನು ತಿಳಿದರೂ- ಹೇ ವಿಷ್ಣುವೇ ! ನೀನು ಎಲ್ಲವನ್ನೂ ಮೀರಿದವನಾಗಿ ಇರುವಿ. ಎಲ್ಲವನ್ನೂ ತಿಳಿದ ನೀನು ನಮ್ಮನ್ನು ಉದ್ಧರಿಸು.

## ... ವ್ಯಾಸಸುಧಾ ...

**ಜ್ಞಾತಯಃ ಪಿತರೌ ಪುತ್ರಾ, ಭ್ರಾತರಃ ಸುಹೃದೋಽಪರೇ ।**
**ಯದ್ವದಂತಿ ಯದಿಚ್ಛಂತಿ ಅನುಮೋದೇತ ನಿರ್ಮಮಃ ॥**

**-ಭಾಗವತ 7-15-7**

ಜ್ಞಾತಿಗಳು, ಮಾತಾಪಿತೃಗಳು, ಮಕ್ಕಳು, ಅಣ್ಣತಮ್ಮಂದಿರು, ಆಪ್ತರು-ಮಿತ್ರರು ಮೊದಲಾದವರು ಏನನ್ನೇ ಹೇಳಿದರೂ, ಇಚ್ಛಿಸಿದರೂ ಯೋಗ್ಯವಾಗಿದ್ದಲ್ಲಿ ಕಪಟತನ ಬಿಟ್ಟು, ಹಠ ಮಾಡದೇ ಹೊಂದಾಣಿಕೆಯೊಂದಿಗೆ ಅನುಸರಿಸಬೇಕು.

## ... ದಾಸಸುಧಾ ...

**ಬರ ಬಂದರೇನು ಬಾರದಿದ್ದರೆ ಏನು**
**ಧರೆಯೆಲ್ಲ ಇಂದು ಕರಗಿಪೋದರೆ ಏನು**
**ಅರಸಾಗಿದ್ದವರ ಕರುಣ ತಪ್ಪಿದರೇನು**
**ವರುಷಂಗಳು ತಡೆದು ಇರಲಿ ಇದ್ದರೆ ಏನು**
**ಗಿರಿಸಮುದಾಯಗಳು ತೆರಳಿ ಬಂದರೆ ಏನು**
**ಹರಿದು ಮುಗಿಲು ಮೇಲು ಒರಗಿದರೇನು**
**ಧರಣಿಪಾಲಕ ರಂಗ ವಿಜಯವಿಠಲರೇಯ**
**ಪರಮಪುರುಷ ಹರಿಯ ಶರಣಗೆ ಭಯವೇನು ॥**

-ಶ್ರೀವಿಜಯದಾಸರು

**ಸತ್ಯಾತ್ಮವಾಣಿ**

# ಪರೋಪಕಾರಃ ಪುಣ್ಯಾಯ

**✍ ಡಾ|| ಕಾಂತೇಶಾಚಾರ್ಯ ಕದರಮಂಡಲಗಿ**

ಜೀವನದ ಪ್ರತಿಯೊಂದು ಕ್ಷಣದಲ್ಲಿಯೂ ಸಾಧನೆ ಮಾಡಲು ಅವಕಾಶವಿದೆ. ಜೀವನದ ಪ್ರತಿಯೊಂದು ಘಟನೆಯನ್ನೂ ಭಗವಂತನಿಗೆ ಅರ್ಪಿಸಿ, ಸಾಧನೆಯ ರೀತಿಯಲ್ಲಿ ಅದನ್ನು ನಮಗೆ ಪುಣ್ಯದ ಲಾಭ ಆಗುವಂತೆ ಮಾಡಿಕೊಳ್ಳುವ ಸಂಭವ ಉಂಟು.

ಮಹಾಭಾರತ ಇದರ ಬಗ್ಗೆ ಬೆಳಕು ಚೆಲ್ಲುತ್ತದೆ. ದೇವಸ್ಥಾನಗಳಿಗೆ ಹೋದಾಗ, ಗರ್ಭಗುಡಿಯ ಒಳಗೆ ಹೋದಾಗ, ದೇವರ ಪ್ರತಿಮೆಯ ಎದುರು ನಿಂತಾಗ ಮಾತ್ರ ದೇವರಿಗೆ ನಮಸ್ಕಾರ-ಪ್ರದಕ್ಷಿಣೆಗಳನ್ನು ಮಾಡುವ ಪ್ರಸಂಗ ಇರುತ್ತದೆ ಎಂದು ತಿಳಿಯಬೇಡಿ. ಜೀವನದಲ್ಲಿ ಭಗವಂತನಿಗೆ ನಮಸ್ಕಾರ ಮಾಡುವ ಪ್ರಸಂಗ ನಮಗೆ ಅನೇಕಬಾರಿ ಎದುರಾಗುತ್ತದೆ. ಉದಾಹರಣೆಗೆ ಃ-

ಒಂದು ಗೋ. ಆಕಳು ಪರಮಪವಿತ್ರವಾದ ಪ್ರಾಣಿ. ತಮ್ಮ ಮಕ್ಕಳಿಗೆ ಮಾತ್ರ ಹಾಲು ಕುಡಿಸುವ ತಾಯಂದಿರು ಅದು ಮಾನವರ ತಾಯಂದಿರಾದರೆ ''**ಗಾವೋ ವಿಶ್ವಸ್ಯ ಮಾತರಃ**'' ಎಲ್ಲರ ಮಕ್ಕಳಿಗೂ ಹಾಲು ಕುಡಿಸುವ ತಾಯ್ತನವನ್ನು ತೋರುವ ಹಿರಿಮೆ ಗೋವುಗಳಿಗೆ ಇದೆ. ಹೀಗಾಗಿಯೇ 33 ಕೋಟಿ ದೇವತೆಗಳ ಸನ್ನಿಧಾನ, ಮಹಾಲಕ್ಷ್ಮಿಯ ಸನ್ನಿಧಾನ, ಗೋಪಾಲಕೃಷ್ಣನ ವಿಶೇಷ ಸನ್ನಿಧಾನ ಗೋವುಗಳಲ್ಲಿ ಇರುತ್ತದೆ.

**ಪರೋಪಕಾರ ಪರಮಾತ್ಮನಿಗೆ ಪ್ರೀತಿಕರ**

ದೇವ-ದೇವತೆಗಳು ತಮ್ಮ ಪರಿಪೂರ್ಣವಾದ ಸನ್ನಿಧಾನವನ್ನು ಆ ಗೋವಿನಲ್ಲಿ ಇಡುವುದಕ್ಕೆ ಕಾರಣ - ಕೇವಲ ಪರೋಪಕಾರಕ್ಕಾಗಿಯೇ ತನ್ನನ್ನು ಪರಿಪೂರ್ಣವಾಗಿ ಸಮರ್ಪಿಸಿಕೊಳ್ಳುವ ಸಾಧುಪ್ರಾಣಿಯಾಗಿದೆ ಗೋ. ಪರೋಪಕಾರ ಅದು ಭಗವಂತನಿಗೆ ಪರಮಪ್ರೀತಿಕರವಾದದ್ದು. ಅಷ್ಟಾದಶಪುರಾಣಗಳ ಸಾರವನ್ನು ಹೇಳಿ ಎಂಬುದಾಗಿ ಕೇಳಿದಾಗ-

**ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಮ್ ।**

ಎಂದು ಹೇಳುತ್ತಾರೆ ವೇದವ್ಯಾಸದೇವರು. ಜ್ಞಾನ-ಅನ್ನ-ವಸ್ತ್ರ-ಅಭಯ ಹೀಗೆ ಅನೇಕ ರೀತಿಗಳಲ್ಲಿ ದಾನಗಳನ್ನು ಮಾಡುವ ಮೂಲಕ ಪರೋಪಕಾರ ಮಾಡುವುದು

ನಮ್ಮ ಜೀವನದಲ್ಲಿ ಪುಣ್ಯಸಾಧನ. ಜ್ಞಾನದ ದೃಷ್ಟಿಯಲ್ಲಿ, ಮಾನದ ದೃಷ್ಟಿಯಲ್ಲಿ, ಅನ್ನ-ವಸ್ತ್ರಾದಿಗಳ ದೃಷ್ಟಿಯಲ್ಲಿ ಯಾವುದೇ ರೀತಿಯಲ್ಲಿ ಮತ್ತೊಬ್ಬರಿಗೆ ಅಪಕಾರ ಮಾಡುವುದು ಅದೊಂದು ದೊಡ್ಡ ಪಾಪಸಾಧನವಾಗಿದೆ. ಆದ್ದರಿಂದ ಶಕ್ತಿಯಿರುವಷ್ಟು ಪರೋಪಕಾರ ಮಾಡಿ. ಅಪಕಾರವನ್ನು ಎಂದಿಗೂ ಮಾಡಬೇಡಿ ಎಂಬುದಾಗಿ ಭಗವಂತ ಪುರಾಣಗಳಲ್ಲಿ ಇತಿಹಾಸದಲ್ಲಿ ಸಾರಿ ಹೇಳಿದ್ದಾನೆ.

**ಪರೋಪಕಾರಿಗಳಾದ ವೃಕ್ಷಗಳು 'ಉತ್‌ಸ್ರೋತಸಃ'**

ಹಾಗಾದರೆ ಯಾರು ಶಕ್ತಿಯಿರುವಷ್ಟು ಪರೋಪಕಾರ ಮಾಡುತ್ತಾರೆ, ಪರೋಪಕಾರಕ್ಕಾಗಿಯೇ ಜೀವನವನ್ನು ಮೀಸಲಾಗಿ ಇಡುತ್ತಾರೆ, ಅಂತಹ ವ್ಯಕ್ತಿಗಳಲ್ಲಿ ಭಗವಂತ ತನ್ನ ವಿಶೇಷಸನ್ನಿಧಾನ ಇಡುತ್ತಾನೆ. ಮತ್ತು ಅಂತಹವರಿಗೆ ಉನ್ನತವಾದ ಸ್ಥಾನವನ್ನು ನೀಡುತ್ತಾನೆ.

ವೃಕ್ಷಗಳು ಪರೋಪಕಾರವನ್ನು ಮಾಡುತ್ತವೆ. ಅದು ಎಷ್ಟರಮಟ್ಟಿಗೆ ?

**''ಪರೋಪಕಾರಾಯ ಫಲಂತಿ ವೃಕ್ಷಾಃ''** (ಸುಭಾಷಿತ ಸೂಕ್ತಿ)

ರುಚಿಕರವಾದ ಹಣ್ಣುಗಳನ್ನು ಕೊಡುವ ಮೂಲಕ, ತಂಪು ನೀಡುವ ನೆರಳನ್ನು ಕೊಡುವ ಮೂಲಕ, ಸುವಾಸನೆಯಿಂದ ಆನಂದ ನೀಡುವ ಹೂವುಗಳನ್ನು ಕೊಡುವ ಮೂಲಕ ವೃಕ್ಷಗಳು ಪರೋಪಕಾರ ಮಾಡುತ್ತವೆ. ಅನ್ನುವುದಕ್ಕಾಗಿ ವೃಕ್ಷಗಳನ್ನು ''ಉತ್‌ಸ್ರೋತಸಃ'' ಎಂದು ಕರೆದಿದ್ದಾರೆ. ಯಾಕೆ ? ಪರೋಪಕಾರಕ್ಕಾಗಿಯೇ ತಮ್ಮ ಇಡೀ ಜೀವನವನ್ನು ಮೀಸಲಿಡುವ ಸ್ಥಾವರಜೀವಗಳಿಗೆ (ವೃಕ್ಷಗಳಿಗೆ) ಭಗವಂತ ಬಹಳ ಉನ್ನತವಾದ ಸ್ಥಾನವನ್ನು ನೀಡುತ್ತಾನಂತೆ. ತಾವು ಬಿಸಿನಲ್ಲಿ ನಿಂತು ನಮಗೆಲ್ಲ ನೆರಳು ನೀಡುತ್ತವೆ. ಮಣ್ಣು-ಗೊಬ್ಬರ-ನೀರು ಇವುಗಳನ್ನು ತಾವು ಸ್ವೀಕರಿಸಿ ನಮಗೆ ಮಾತ್ರ ರುಚಿ-ರುಚಿಯಾದ ಹಣ್ಣುಗಳನ್ನು ನೀಡುತ್ತವೆ. ದುರ್ಗಂಧಯುಕ್ತವಾದ ಗೊಬ್ಬರವನ್ನು ಹಾಕಿದರೂ ನಮಗೆ ಮಾತ್ರ ಸುವಾಸನಾಭರಿತವಾದಂತಹ ಹೂವುಗಳನ್ನು ನೀಡುತ್ತವೆ. ಹೀಗೆ ಪ್ರಾಯಃ ಎಲ್ಲ ವೃಕ್ಷಗಳೂ ನಾನಾರೀತಿಗಳಿಂದ ಪರೋಪಕಾರ ಮಾಡುತ್ತಲೇ ಜೀವಿಸುತ್ತವೆಯಾದ್ದರಿಂದ ಆ ಸ್ಥಾವರಜೀವರನ್ನು ಭಾಗವತದ ಭಾಷೆಯಲ್ಲಿ 'ಉತ್‌ಸ್ರೋತಸಃ' ಎಂದು ಕರೆದಿದ್ದಾರೆ. ಉನ್ನತಸ್ಥಾನವನ್ನು ಪಡೆಯುವಂತಹ ಜೀವರಾಶಿಗಳು ಅವು.

**ಪರೋಪಕಾರಿಗಳಾಗಿ ಪರಮಾತ್ಮನಿಗೆ ಪ್ರೀತಿಪಾತ್ರರಾಗೋಣ**

ಹಾಗಾದರೆ ಪರೋಪಕಾರ ಅದು ಭಗವಂತನಿಗೆ ಬಹಳ ಪ್ರೀತಿಕರವಾದ ವಸ್ತು. ಹೀಗಾಗಿ ಪರೋಪಕಾರ ಮಾಡುವ, ಪರೋಪಕಾರಕ್ಕಾಗಿಯೇ ಬದುಕುವ ಸಾಧುಪ್ರಾಣಿ ಎಂಬ ಕಾರಣಕ್ಕೆ ಭಗವಂತ ಗೋವುಗಳಲ್ಲಿ ಬಹಳ ವಿಶೇಷವಾದ ಸನ್ನಿಧಾನವನ್ನು ಇಟ್ಟಿದ್ದಾನಂತೆ. ಈ ಹಿನ್ನೆಲೆಯಲ್ಲಿ ನಾವೂ ಪರೋಪಕಾರ ಮಾಡಿದರೆ, ಪರೋಪಕಾರಕ್ಕಾಗಿ

ಜೀವನವನ್ನು ಮೀಸಲಿಟ್ಟರೆ, ನಾವೂ ಸಹ ಭಗವಂತನ ವಿಶೇಷ ಸನ್ನಿಧಾನಕ್ಕೆ ಪಾತ್ರರಾಗಬಹುದು. ಪರೋಪಕಾರ ಮಾಡಿದ್ದಕ್ಕಾಗಿ ಉನ್ನತಸ್ಥಾನವನ್ನು ಪಡೆಯಬಹುದು. ಜಗತ್ತಿನಲ್ಲಿ ಮಾನವನ್ನೂ ಪಡೆಯಬಹುದು. ಈ ಮೂಲಕ ಶಾಸ್ತ್ರ ನಮಗೆ ಈ ಒಂದು ಸಂದೇಶವನ್ನು ನೀಡುತ್ತಿದೆ.

**ಗುಣಮಟ್ಟ ಗಮನಿಸಿ ಗೌರವಿಸಬೇಕು**

ಮಾನ ಬೇಕು ಎಂಬುದಾಗಿ ಮಾನದ ಬೆನ್ನುಹತ್ತಿ ನಾವು ಹೋಗಬೇಕಾಗಿಲ್ಲ. ನಮ್ಮ ಕರ್ತವ್ಯಕರ್ಮಗಳನ್ನು ನಾವು ಚೆನ್ನಾಗಿ ಮಾಡುತ್ತಾ ಹೋದರೆ, ಉತ್ತಮಗುಣವಂತರಾದದ್ದೇ ಆದರೆ ಮಾನವೇ ನಮ್ಮ ಬೆನ್ನುಹತ್ತಿ ಬರುತ್ತದೆ. ಅದರಲ್ಲಿ ದೊಡ್ಡಸ್ತಿಕೆ ಇರುವುದು. ನನಗೆ ಮಾನ ಕೊಡಬೇಕು, ಗೌರವ ಸಲ್ಲಿಸಬೇಕು ಎಂಬುದಾಗಿ ಹಠ ಮಾಡಿ ಬಲವಂತವಾಗಿ ಗೌರವ ಪಡೆಯುವುದಲ್ಲ. ಜನರು ತಾವಾಗಿಯೇ ತಲೆಬಾಗಿ ಗೌರವ ನೀಡಬೇಕು. ಆ ತರಹದ ಗುಣಮಟ್ಟವನ್ನು ನಮ್ಮಲ್ಲಿ ಬೆಳೆಸಿಕೊಳ್ಳಬೇಕು. ಹಠಮಾಡಿ ಗೌರವ ಪಡೆಯುವುದಾದರೆ ನಾವು ಇದ್ದಲ್ಲಿಯೇ ಇರುತ್ತೇವೆ. ನಮ್ಮಲ್ಲಿ ದೊಡ್ಡಸ್ತಿಕೆ ಏನೂ ಬಂದಿರುವುದಿಲ್ಲ. ತಾನೇ ತಾನಾಗಿ ಮಾನ ನಮ್ಮಲ್ಲಿಗೆ ಬರಬೇಕಾದರೆ ನಮ್ಮ ಗುಣಮಟ್ಟ ಬಹಳ ಮೇಲ್ಮಟ್ಟಕ್ಕೆ ಹೋಗಬೇಕಾಗುತ್ತದೆ. ಹಾಗಾದರೆ ಯಾವುದು ಉತ್ತಮ ? ನಮ್ಮ ಗುಣಮಟ್ಟವನ್ನು ಬೆಳೆಸಿಕೊಳ್ಳುವುದು ಉತ್ತಮ ಅಲ್ಲವೇ ? ನಮ್ಮ ಗುಣಮಟ್ಟವನ್ನು ಗಮನಿಸಿ ಜನರೇ ಸಹಜವಾಗಿ ತಲೆಬಾಗಿ ಮಾನ ನೀಡುವುದು ಉತ್ತಮ ಅಲ್ಲವೇ ? ಆ ವಿಧವಾಗಿ ಗುಣಮಟ್ಟ ಬೆಳೆಯಬೇಕೆಂದು ಅಪೇಕ್ಷೆ ಪಡಬೇಕು. ಗುಣಶೀಲರಾಗಬೇಕು. ಆಗ ಭಗವಂತನ ವಿಶೇಷಸನ್ನಿಧಾನ ನಮ್ಮಲ್ಲಿ ಬರಲು ಸಾಧ್ಯ .

ಗೋವುಗಳನ್ನು ಕಂಡಾಗ, ಗೋವುಗಳನ್ನು ನಮಸ್ಕರಿಸುವಾಗ ''ಆ ಗೋವಿನಲ್ಲಿರುವ ಸಮಸ್ತದೇವತೆಗಳ ವಾಯುದೇವರ ಮಹಾಲಕ್ಷ್ಮಿಯ ಗೋಪಾಲಕೃಷ್ಣನ ಅನುಗ್ರಹ ನಮಗೆ ಆಗಲಿ'' ಎಂಬ ಭಾವನೆ ಒಂದು ಕಡೆಯಾದರೆ, ಗೋವನ್ನು ಕಂಡು ಜೀವನದಲ್ಲಿ ಅದರಿಂದ ಕಲಿಯಬೇಕಾದ ಪಾಠ ಏನು ? ಎಂಬುದರ ಕಡೆಗೂ ನಮ್ಮ ಗಮನ ಇರಿಸಬೇಕು.

**ಗೋವುಗಳಂತೆ ನಾವು ಪರೋಪಕಾರಕ್ಕಾಗಿ ಜೀವಿಸೋಣ**

ನಾವು ಮಾನವರು ಬಹಳ ಪ್ರಗತಿಶೀಲರಾದವರು ಎಂಬುದಾಗಿ ಭಾವಿಸುತ್ತೇವೆ. ಆದರೆ ಒಂದು ಗೋ. ಕೇವಲ ಒಂದು ಪಶು. ಅದು ನಮಗಿಂತ ಎಷ್ಟರಮಟ್ಟಿಗೆ ಉತ್ತಮವಾಗಿದೆ ! ಎಂಬ ಕಲ್ಪನೆ ನಮಗೆ ಬರಬೇಕು. ಗೋ ಅದರ ಪುಚ್ಛವನ್ನು ಮೈಮೇಲೆ ಆಡಿಸಿಕೊಂಡರೆ ನಾವು ಪವಿತ್ರರಾದೆವು ಎಂದು ಭಾವಿಸುತ್ತೇವೆ. ಅಷ್ಟೇ ಏಕೆ ? ಅದರ ಮಲ-ಮೂತ್ರಗಳನ್ನು (ಗೋಮಯ-ಗೋಮೂತ್ರಗಳನ್ನು) ಸೇವಿಸಿ,

**ಯತ್ತ್ವಗಸ್ಥಿಗತಂ ಪಾಪಂ ದೇಹೇ ತಿಷ್ಠತಿ ಮಾಮಕೇ ।**
**ಪ್ರಾಶನಂ ಪಂಚಗವ್ಯಸ್ಯ ದಹತ್ಯಗ್ನಿರಿವೇಂಧನಮ್ ॥**

ಅಗ್ನಿಯು ಕಟ್ಟಿಗೆಯನ್ನು ಸುಡುವಂತೆ ಪಂಚಗವ್ಯಪ್ರಾಶನ ನಮ್ಮ ಸಾವಿರಾರು ಪಾಪಗಳನ್ನು ಸುಟ್ಟು ಭಸ್ಮಮಾಡಿಬಿಡುತ್ತದೆ ಎಂದು ಭಾವಿಸುತ್ತೇವೆ.

ಹಾಗಾದರೆ ಏನು ಇದರ ವೈಶಿಷ್ಟ್ಯ ? 33 ಕೋಟಿ ದೇವತೆಗಳ ಸನ್ನಿಧಾನ, ಗೋಪಾಲಕೃಷ್ಣನ ವಿಶೇಷ ಸನ್ನಿಧಾನ ಇರುವುದೇ ಅದರ ವೈಶಿಷ್ಟ್ಯ. ಹೌದು, ಇತರ ಪಶು-ಮಾನವರಲ್ಲಿ ಇಲ್ಲದ ವಿಶೇಷ ಸನ್ನಿಧಾನ ಇದರಲ್ಲಿ ಮಾತ್ರ ಏಕೆ ? ಈ ಗೋ ಪರೋಪಕಾರಕ್ಕಾಗಿಯೇ ಜೀವನವನ್ನು ಮೀಸಲಿಟ್ಟ ಪ್ರಾಣಿ. ಸ್ವಾರ್ಥ ಮಾತ್ರ ಇಟ್ಟುಕೊಳ್ಳದೇ, ತನ್ನ ಮಕ್ಕಳಿಗೆ ಮಾತ್ರ ಈ ಹಾಲು ಎಂಬ ಭಾವನೆ ಇಟ್ಟುಕೊಳ್ಳದೇ, ಎಲ್ಲರ ಮಕ್ಕಳಿಗೂ ಹಾಲುಣಿಸಬೇಕು. ಎಲ್ಲರನ್ನೂ ಸಾಕಿ ಸಲಹಬೇಕು. ಹಾಲು-ಮೊಸರು-ತುಪ್ಪ-ಗೋಮಯ-ಗೋಮೂತ್ರ ತನ್ನ ದೇಹದ ಎಲ್ಲ ವಸ್ತುಗಳೂ ಎಲ್ಲರಿಗೂ ಉಪಯೋಗವಾಗಬೇಕು ಎಂಬ ನಿಸ್ವಾರ್ಥಭಾವನೆಯುಳ್ಳ ಪರೋಪಕಾರಸ್ವರೂಪಭೂತವಾದ ಪಶುಗಳು ಅದು ಗೋವುಗಳು.

ಹಾಗಾದರೆ ಈ ಕಾರಣಕ್ಕಾಗಿ (ಪರೋಪಕಾರಕ್ಕಾಗಿಯೇ ಜೀವಿಸುವ ಕಾರಣಕ್ಕೆ) ದೇವತೆಗಳ-ಭಗವಂತನ ವಿಶೇಷ ಸನ್ನಿಧಾನಕ್ಕೆ ಗೋವುಗಳು ಪಾತ್ರವಾಗುವುದಾದರೆ, ನಾವೂ ಸಹ ಪರೋಪಕಾರಕ್ಕಾಗಿಯೇ ಜೀವನ ನಡೆಸಬೇಕು, ನಿಸ್ವಾರ್ಥಜೀವನ ನಡೆಸಬೇಕು, ಆ ಮೂಲಕ ಭಗವಂತನ ವಿಶೇಷ ಸನ್ನಿಧಾನ ಉಳ್ಳವರಾಗಬೇಕು ಎಂಬ ಪ್ರಜ್ಞೆ ಗೋವುಗಳ ಬಳಿಗೆ ಹೋದಾಗ ನಮಗೆ ಜಾಗೃತವಾಗಬೇಕು. **...ಸಶೇಷ...**

## ಶ್ರೀಸುಧಾ ಪೋಷಕರು :

1) **ಶ್ರೀ ಶಶಿಕಾಂತ ಕೌಜಲಗಿ** ಬೆಂಗಳೂರು
2) **ಶ್ರೀ ಪಡ್ನಿಸ್ ಎಂ ಆರ್** ಬೆಂಗಳೂರು
3) **ಶ್ರೀ ಭೀಮಾಚಾರ್ಯ ಆರ್ ಗೋಠೆ** ಹಲಗಣಿ
4) **ಶ್ರೀ ಮಲ್ಲಿಕಾರ್ಜುನ್ ಎಸ್ ಬೆಲ್ಲುರ** ಮೈಸೂರು
5) **ಶ್ರೀ ಆನಂದ ಜೋಶಿ** ಧಾರವಾಡ
6) **ಶ್ರೀ ಗುರುರಾಜ ಆರ್ ಕಟ್ಟಿ** ಬೆಳಗಾವ
7) **ಶ್ರೀ ರಾಘವೇಂದ್ರ ಹರಿದಾಸ** ಕಾಖಂಡಕಿ
8) **ಶ್ರೀ ಡಾ.ಪ್ರಕಾಶ** ಶಿವಮೊಗ್ಗ
9) **ಶ್ರೀ ಜಿ ಜಿ ಕುಲಕರ್ಣಿ** ಶಿವಮೊಗ್ಗ

ಇವರು ಶ್ರೀಸುಧಾಪತ್ರಿಕೆಯ ಮೇಲಿನ ಅಭಿಮಾನದಿಂದ ಪೋಷಕರಾಗಿರುವರು.
ಹರಿ-ವಾಯು-ಗುರುಗಳು ಅವರಿಗೂ, ಅವರ ಕುಟುಂಬಕ್ಕೂ
ಜ್ಞಾನಭಕ್ತಿ-ಆಯು- ಆರೋಗ್ಯಾದಿಗಳನ್ನು ಕರುಣಿಸಲೆಂದು ಪ್ರಾರ್ಥಿಸುವೆವು. -ಸಂ.




# ದಾನದ ಪ್ರತಿಫಲ

✍ ಡಾ|| ಸತ್ಯಧ್ಯಾನಾಚಾರ್ಯ ಕಟ್ಟಿ

ಬಹಳ ಹಿಂದೆ ಇಂದ್ರದ್ಯುಮ್ನ ಎಂಬ ರಾಜ ರಾಜ್ಯವನ್ನು ಆಳುತ್ತಿದ್ದ. ಅನಂತರ ಮೃತನಾಗಿ ಸ್ವರ್ಗವನ್ನು ಸೇರಿದ. ಸ್ವರ್ಗದಲ್ಲಿ ನೂರಾರು ವರ್ಷ ಕಳೆದ. ನಂತರ ಒಂದು ದಿವಸ ದೇವದೂತ ಬಂದು ಸ್ವಾಮಿ ! ನಿಮ್ಮ ಪುಣ್ಯ ಖಾಲಿಯಾಗಿದೆ. ನೀವಿನ್ನು ಭೂಲೋಕಕ್ಕೆ ಹೊರಡಲು ತಯಾರಾಗಿ ಎಂದ. ಇಂದ್ರದ್ಯುಮ್ನ ಗಾಬರಿಯಿಂದ ಕೇಳಿದ 'ನಾನು ರಾಜನಾದಾಗ ಲೆಕ್ಕವಿಲ್ಲದಷ್ಟು ದಾನ ಧರ್ಮಗಳನ್ನು ಮಾಡಿದ್ದೇನೆ. ಅದೆಲ್ಲದರ ಪುಣ್ಯ ಇಷ್ಟು ಬೇಗನೇ ತೀರಿ ಹೋಯಿತೇ ?' ಅದಕ್ಕೆ ದೇವದೂತ - ಸ್ವಾಮಿ ಸ್ವರ್ಗದಲ್ಲಿ ಒಂದು ಪದ್ಧತಿ ಇದೆ. ಭೂಮಿಯ ಮೇಲೆ ನೀವು ಮಾಡಿದ ಪುಣ್ಯಕರ್ಮಗಳನ್ನು ಎಲ್ಲಿಯವರೆಗೂ ಜನರು ನೆನೆಸಿಕೊಳ್ಳುತ್ತಾರೋ ಅಲ್ಲಿಯವರೆಗೂ ಇರಬಹುದು. ನೆನೆಸಿಕೊಳ್ಳುವವರು ಭೂಮಿಯಲ್ಲಿ ಇಲ್ಲ ಎಂದರೆ ನೀವು ಸ್ವರ್ಗದಿಂದ ಹೋಗುವುದು. ಅದರಿಂದ ಸಣ್ಣಪುಟ್ಟ ಉಪಕಾರ ಮಾಡಿದವರು ಕೆಲವು ಕಾಲ ಇರುತ್ತಾರೆ. ಶಾಶ್ವತವಾದ ಕಾರ್ಯ ಮಾಡಿದವರು ಮಾತ್ರ ಇಲ್ಲಿಯೇ ಉಳಿಯುತ್ತಾರೆ. ಈಗ ನಿಮ್ಮ ಕಾರ್ಯಗಳನ್ನು ಕೃತಜ್ಞತೆಯಿಂದ ಸ್ಮರಿಸುವವರು ಯಾರೂ ಭೂಮಿಯಲ್ಲಿ ಇಲ್ಲ. ಬೇಕಾದರೆ ನೀವು ಭೂಮಿಗೆ ಹೋಗಿ ನಿಮ್ಮ ಕಾರ್ಯಗಳನ್ನು ನೆನೆಸುವವರು ಇದ್ದರೆ ತಿಳಿಸಿ. ಆಗ ನಿಮ್ಮ ಸ್ವರ್ಗದ ಅವಧಿ ಹೆಚ್ಚಾದೀತು ಎಂದ.

ಇಂದ್ರದ್ಯುಮ್ನ ಭೂಮಿಗೆ ಬಂದ.ಅವನಿಗೆ ಯಾರೂ ಗುರುತು ಸಿಗದಂತೆ ಇತ್ತು . ಅವನಿಗೆ ಆಘಾತವಾದ ವಿಷಯವೆಂದರೆ ಅವನ ರಾಜ್ಯದಲ್ಲಿ ಒಬ್ಬರಿಗೂ ಇಂದ್ರದ್ಯುಮ್ನ ಎಂಬ ರಾಜನ ಹೆಸರೇ ತಿಳಿದಿರಲಿಲ್ಲ. ಯಾರಿಗೋಸ್ಕರ ನಾನು ಇಷ್ಟೊಂದು ದಾನ, ಧರ್ಮ, ಯಜ್ಞ, ಯಾಗಗಳನ್ನು ಮಾಡಿದೆನೋ ಅವರೆಲ್ಲ ತನ್ನನ್ನು ಮರೆತು ಬಿಟ್ಟಿದ್ದಾರೆ ಎಂದು ನೊಂದುಕೊಂಡ. ಅತ್ಯಂತ ಹಿರಿಯ ವ್ಯಕ್ತಿ ಯಾರಾದರೂ ಇದ್ದರೆ ಅವರು ನನ್ನ ಹೆಸರನ್ನು ನೆನಪಿನಲ್ಲಿ ಇಟ್ಟಿರಬಹುದೆಂದು ಭಾವಿಸಿ ಹುಡುಕಿ ಹುಡುಕಿ ಅವರ ಮನೆಗೆ ಹೋದ. ಆ ಹಣ್ಣು ಹಣ್ಣು ಮುದುಕನಿಗೂ ಇವನ ಹೆಸರು ಗೊತ್ತಿರಲಿಲ್ಲ. ಆ ಮುದುಕ ಒಂದು ಮಾತು ಹೇಳಿದ. ನನಗಿಂತ ಹಳೆಯದಾದ ಒಂದು ಗೂಬೆ ಇದೆ ಅದನ್ನು ಕೇಳು ಎಂದು. ಗೂಬೆಯನ್ನು ಕೇಳಿದ. ಗೊತ್ತಿಲ್ಲ ಎಂದಿತು. ಆ ಗೂಬೆ ನನಗಿಂತ ಹಳೆಯದಾದ ಒಂದು ಆಮೆ ಇದೆ ಅದನ್ನು ಕೇಳು ಎಂದಿತು. ರಾಜ ಆಮೆಯನ್ನು ಹುಡುಕಿದ. ಆ ಆಮೆ ಹೇಳಿತು ನನಗೆ ಗೊತ್ತು ಇಂದ್ರದ್ಯುಮ್ನ ರಾಜನ ಹೆಸರು. ನಾನು ವಾಸ ಮಾಡುವ ಈ ಕೆರೆಯನ್ನು ಅವನೇ ಕಟ್ಟಿದ್ದು. ನನ್ನಜ್ಜ ನನಗೆ ಇದನ್ನು ಹೇಳುತ್ತಿದ್ದ. ಇಂದ್ರದ್ಯುಮ್ನ ಹೇಳಿದ. ನಾನೇ ಇಂದ್ರದ್ಯುಮ್ನ ಆದರೆ ನಾನು ಈ ಕೆರೆಯನ್ನು ಕಟ್ಟಿಸಿಯೇ ಇಲ್ಲ. ಆಮೆ ಹೇಳಿತು. ನನ್ನಜ್ಜ ಸುಳ್ಳು ಹೇಳುವವನಲ್ಲ. ಈ ರಾಜ ಸ್ವರ್ಗದ ಆಸೆಗಾಗಿ ಸಾವಿರಾರು ಹಸುಗಳನ್ನು ದಾನ ಮಾಡುತ್ತಿದ್ದನಂತೆ. ಆ ಹಸುಗಳು ಊರಹೊರಗೆ ಬಂದಾಗ ಮುಂದೆ ಹೋಗದೇ ನಿಂತುಬಿಡುತ್ತಿದ್ದವಂತೆ. ದಾನವನ್ನು ಪಡೆದವರು ಅವುಗಳನ್ನು ಎಳೆದಾಡಿ ಕರೆದುಕೊಂಡು ಹೋಗುವವರು. ಹೀಗೆ ಹಸುಗಳ ಎಳೆದಾಟದಲ್ಲಿ ಅವು ಖುರದಿಂದ ನೆಲ ಕೆದರಿ ದೊಡ್ಡ ತೆಗ್ಗು ಆಯಿತು.ಅದರಲ್ಲಿ ಮಳೆ ಬಂದಾಗ ನೀರು ನಿಂತು ಕೆರೆಯಾಯಿತು. ರಾಜನ ಕೃಪೆಯಿಂದ ಆದ ಕೆರೆ ಇದು ಎಂದು ನಾವೆಲ್ಲ ಇಂದು ನೆನೆಯುತ್ತೇವೆ. ಆಗ ಸರಿಯಾಗಿ ದೇವದೂತ ಬಂದು, ಸ್ವಾಮಿ ಇನ್ನೂ ನಿಮ್ಮನ್ನು ನೆನೆಯುವವರು ಭೂಮಿಯಮೇಲೆ ಇರುವದರಿಂದ ಸ್ವರ್ಗದ ಅವಧಿ ಮುಗಿದಿಲ್ಲ ಎಂದು ಕರೆದೊಯ್ದರು.

**ಇದರಿಂದ ತಿಳಿಯುವ ನೀತಿ** : ಸ್ವರ್ಗದ ಆಸೆಯಿಂದ ಮಾಡಿದ ಕೆಲಸಗಳು ಸ್ವರ್ಗದಲ್ಲಿ ಉಳಿಸಲಿಲ್ಲ. ಆದರೆ ಅವನಿಗೆ ಅರಿವಿಲ್ಲದೇ ದಾನದ ಅನಿರೀಕ್ಷಿತ ಪ್ರಸಿದ್ಧಿಯಿಂದ ಸ್ವರ್ಗ ಮತ್ತೆ ಸಿಕ್ಕಿತು. ಲಾಭದ, ಮೆಚ್ಚುಗೆಯ ಆಸೆಗೋಸ್ಕರ ಮಾಡಿದ ಕೆಲಸ ಸ್ಥಿರವಲ್ಲ. ಅನಪೇಕ್ಷಿತವಾಗಿ ಪ್ರೇಮದಿಂದ ಮಾಡಿದ ಕೆಲಸ ಶಾಶ್ವತವಾಗಿ ನಮ್ಮನ್ನು ಕಾಯುತ್ತದೆ. ★ ★ ★

# ಶ್ರೀಕೃಷ್ಣ - ೫೬

✍ಪಂ. ಮಳಗಿ ಜಯತೀರ್ಥಾಚಾರ್ಯ

ನಂದನಿಗೆ ಮಗ ಹುಟ್ಟಿದ ಆನಂದ. ಮಧುರೆಗೆ ಹೋದಾಗ ಅಣ್ಣ ವಸುದೇವ ಅಂದ ಮಾತು - ''ಸಂತಿ ಉತ್ಪಾತಾಶ್ಚ ಗೋಕುಲೇ'' ಗೋಕುಲದಲ್ಲಿ ಉತ್ಪಾತ, ಆಪತ್ತು ಬಹಳ ಬೇಗ ಹೋಗು ಎಂದ ವಸುದೇವನ ಮಾತಿನಲ್ಲಿ ಸದಾ ತಥ್ಯವಿರುವದು. ಅವನು ಕಶ್ಯಪ. ಪಶ್ಯತೀ ಇತಿ ಪಶ್ಯಕ ಎಲ್ಲವನ್ನೂ ಜ್ಞಾನದಿಂದ ತಿಳಿಯುವವ. ಪಶ್ಯಕನೇ ಕಶ್ಯಪ. ಕಶ್ಯಪನೇ ವಸುದೇವ. ಅವನ ಮಾತು ಸುಳ್ಳಾಗದು. ನಾನು ಗೋಕುಲ ಬಿಟ್ಟು ಕಂಸನ ಬಳಿ ಬಂದೆ. ಇದೇ ಸಮಯ ಸಾಧಿಸಿ ಗೋಕುಲದಲ್ಲಿ ಏನು ಅನಾಹುತ ಮಾಡುವನೋ ಎಂದು ಬೆದರಿದ. ಬರುವ ಭಯಕೆ ಗಾಬರಿ. ದೇವರನ್ನು ಬೇಡಿದ.

**ಹರಿಂ ಜಗಾಮ ಶರಣಂ ಉತ್ಪಾತಾಗಮಶಂಕಿತಃ ॥ (ಭಾಗ 10-7-1)**

ಏನೂ ತೊಂದರೆ ಆಗದಿರಲಿ ಎಂದು ಹರಿಯಲ್ಲಿ ಕೇಳಿದ. ಗೋಕುಲಕ್ಕೆ ಹೊರಟ. ಆದರೂ ಒಂದು ಸಮಾಧಾನ. ಶಾಸ್ತ್ರದ ಭರವಸೆ. ಜ್ಞಾನಿಗಳ ಅನುಭವ. ದೇವರ ಆಶ್ವಾಸನೆ. ಹರಿ ಇರುವ ತಾಣ. ಅಲ್ಲಿ ಅಸುರರು ನಿತ್ರಾಣ. ಭಕ್ತರಿಗೆ ಅದು ಪಂಚಪ್ರಾಣ.

**ನ ಯತ್ರ ಶ್ರವಣಾದೀನಿ ರಕ್ಷೋಘ್ನಾನಿ ಸ್ವಕರ್ಮಸು ।**
**ಕುರ್ವಂತಿ ಸಾತ್ವತಾಂ ಭರ್ತುಃ ಯಾತುಧಾನ್ಯಶ್ಚ ತತ್ರ ಹಿ ॥ (ಭಾಗ.10-7-3)**

ಪ್ರತಿದಿನ ಎಲ್ಲರೂ ತಮ್ಮ ಕರ್ಮಗಳನ್ನು ಮಾಡುವಾಗ ಕೃಷ್ಣ ಕಥೆ ಕೇಳುತ್ತಿರಬೇಕು. ಮಂತ್ರ ಜಪಿಸುತ್ತಿರಬೇಕು. ಮನದಲ್ಲಿ ಧ್ಯಾನಿಸುತ್ತಿರಬೇಕು. ಇಲ್ಲದಲ್ಲಿ ಅಲ್ಲಿ ತಾಮಸಶಕ್ತಿ ಬೆಳೆಯುವದು. ಕ್ರೋಧ, ಹಿಂಸೆ, ಹೆಚ್ಚುವದು. ರಾಕ್ಷಸರು ಸಂಚರಿಸುವರು. ಇನ್ನು ಶ್ರೀಕೃಷ್ಣನಿದ್ದಲ್ಲಿ ರಾಕ್ಷಸರಾಟ ಎಲ್ಲಿ ನಡೆಯುವದು ? ಅಂತೆಯೇ ಗೋಕುಲಕ್ಕೆ ಬಂದ ಅಸುರರೆಲ್ಲ ಸಾಯುವರು. ಇದೇ ಕೃಷ್ಣನ ಬಾಲಲೀಲೆ. ಅಸುರಸಂಹಾರ ಲೀಲೆ. ಎಲ್ಲೆಡೆ ಪಾಪಪೂರೈಸಿ ಸಾಯಲು ಗೋಕುಲಕ್ಕೆ ಅಸುರರು ಬರುವರು. ಶ್ರಾವಣ ಕೃಷ್ಣ ತ್ರಯೋದಶಿ. ನಂದ ಮಧುರೆಗೆ ತೆರಳಿದ. ಚತುರ್ದಶಿ ಆಶ್ಲೇಷಾ ನಕ್ಷತ್ರ. ವಿಷಮ ಘಳಿಗೆ. ಶ್ರೀಕೃಷ್ಣ ಹುಟ್ಟಿ ಏಳನೇ ದಿನ. ಮೃತ್ಯುಯೋಗ. ಕತ್ತಲೆ ತುಂಬಿತು. ರಾತ್ರಿ ಅಸುರಶಕ್ತಿ ಬೆಳೆವ ಕಾಲ. ತಾಮಸಶಕ್ತಿಗೆ ಆಗ ಸಮೃದ್ಧಿ. ದೈವೀಶಕ್ತಿಗೆ ಹಗಲು ವೃದ್ಧಿ. ಧರೆಯ ಭಾರ ಕಳೆಯುವವ ಶ್ರೀಕೃಷ್ಣ. ಭೂಮಿಯ ಭಾರ ಇಳಿಸಲು ಬರುವವರು ಹರಿಯ ಬಂಟರು. ಭೂಮಿಯ ಭಾರ ಬೆಳೆಸುವವನು ಕಂಸ. ಅವನ ಬಂಟರದೂ ದೊಡ್ಡ ಹಿಂಡು. ಅಸುರರ ದಂಡು. ಅವರಲ್ಲಿ ಪ್ರಮುಖಳು ಮಹಿಳಾಮಣಿ. ಅಸುರ ಕುಲವರ್ಧಿನಿ. ಕ್ರೂರಕಾರ್ಯ ಶಿಖಾಮಣಿ. ಪೂತನೆ. ಕೃಷ್ಣನಿದ್ದಲ್ಲಿ ಅಸುರರು ಹೇಗೆ ಬರುವರು ? ಅಂತೆಯೇ ಅವಳು

ಪೂತನಾ. ಸಾ ಕಿಂ ಪೂತಾ ? ಅವಳು ಪವಿತ್ರಳೇನು ? ನ ನ ಪೂತಾ ಇಲ್ಲ ಇಲ್ಲ ಅವಳು ಪವಿತ್ರಳಲ್ಲ. ಅಪವಿತ್ರಳು. ಅದಕ್ಕೆ ಪೂತಾನಾ ''ನ ಹಿ ಜ್ಞಾನೇನ ಸದೃಶಂ ಪವಿತ್ರಂ'' (ಗೀತಾ 4-38) ಜ್ಞಾನ ಪವಿತ್ರವಾದದ್ದು. ಅಜ್ಞಾನ, ಅವಿದ್ಯಾ ಅಪವಿತ್ರ . ಕಂಸ ಪೂತನೆಯನ್ನು ಮೊದಲು ಗೋಕುಲಕ್ಕೆ ಕಳಿಸಿದ.

**ಕಂಸೇನ ಪ್ರಹಿತಾ ಘೋರಾ ಪೂತನಾ ಬಾಲಘಾತಿನೀ ।**
**ಶಿಶೂಂಶ್ಚಚಾರ ನಿಘ್ನಂತೀ ಪುರಗ್ರಾಮವ್ರಜಾದಿಷು ॥ (ಭಾಗ 10-7-2)**

ಕಂಸ ಬಾಲಕರನ್ನು ಕೊಲ್ಲುವ ಪೂತನೆಯನ್ನು ಗೋಕುಲಕ್ಕೆ ಕಳಿಸಿದ. ಅವಳು ಎಲ್ಲ ಪುರ, ಗ್ರಾಮ, ವ್ರಜಗಳಲ್ಲಿ ಮಕ್ಕಳನ್ನು ಕೊಲ್ಲುತ್ತ ಕೃಷ್ಣನ ಬಳಿ ಬಂದಳು. ಇದು ಭಾಗವತದ ಆಧ್ಯಾತ್ಮಿಕ ಮಾತು. ''ಕಂಸ'' ''ಕಸಿ ಹಿಂಸಾಯಾಂ'' ಹಿಂಸೆ, ಕೊಲ್ಲುವುದು, ಕತ್ತರಿಸುವುದು ಎಂದು ಕಂಸಶಬ್ದಾರ್ಥ. ಕಸಿ ಧಾತುವಿನಿಂದ ಕಸಾಯಿ ಎಂಬ ಶಬ್ದ. ಕೊಲ್ಲುವದು ಹಿಂಸಿಸುವದೇ ಕಂಸ. ಅವಳನ್ನು ಇಂದ್ರಿಯಗಳ ಸಮುದಾಯ (ಗೋ-ಕುಲ) ಉಳ್ಳ 'ಪುರ' ಗ್ರಾಮಗಳಿಗೆ (ನವದ್ವಾರೇ ಪುರೇ ದೇಹೇ-ಭಾಗ) ದೇಹವೆಂಬ ಪುರ, ಪಟ್ಟಣಗಳಿಗೆ ಕಳಿಸಿದ. ಬುದ್ಧಿ ಮನಸ್ಸು, ಮುಗ್ಧ ಶಿಶುಗಳಂತಿರುವ ಇಂದ್ರಿಯಗಳನ್ನು, ಇಲ್ಲಿರುವ ಶುದ್ಧ ಭಾವನೆಗಳನ್ನು ಕೊಲ್ಲಲು, ಹಿಂಸಿಸಲು ಪೂತನೆಯನ್ನು (ಅಜ್ಞಾನವನ್ನು) ಕಳುಹಿಸಿದ. 'ಪೂತಾನಪಿ ನಯತಿ ಇತಿ ಪೂತನಾ' ಶುದ್ಧವಾದ ಪವಿತ್ರವಾದ ಬುದ್ಧಿ, ಹೃದಯ, ಮನಸ್ಸುಗಳನ್ನೂ, ಇವಳು (ನಯತಿ) ಎತ್ತಿ ಭೋಗದ ಕಡೆಗೆ ಒಯ್ಯುವಳು. 'ಪೂತನೆ, ಇದು ಸಂಜ್ಞೆಯಲ್ಲ. ಕ್ರಿಯೆ. ಅವಿದ್ಯಾ ಅಜ್ಞಾನದ ಬೀಜವಿದು. (ಪುನಾತಿ, ಪುನೀತಃ) ಪೂತವಾದ ಶುದ್ಧವಾದದ್ದನ್ನೂ ಕೆಟ್ಟಕಡೆಗೆ ಒಯ್ಯುವವಳೇ ಪೂತನೆ. ಇದು ಅಪವಿತ್ರ . ಅಜ್ಞಾನ. ಇದರಿಂದಲೇ ವಾಸನಾ, ವ್ಯಸನಗಳ ಜನ್ಮ. ಅವಳು ಚತುರ್ದಶವಾಗಿ ಚತುರ್ದಶಿ ಬರುವಳು. ಪಂಚಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ, ಬುದ್ಧಿ ಮನಸ್ಸು, ಚಿತ್ತ , ಅಹಂಕಾರ ಈ ಹದಿನಾಲ್ಕರಲ್ಲಿ ಬರುವಳು. ಅವಿದ್ಯಾ , ವಾಸನಾ, ವ್ಯಸನಗಳು ನೆಲೆಸುವ ಸ್ಥಾನಗಳು. ಪೂತನೆ ಕಣ್ಣಿನಲ್ಲಿ ಕುಳಿತು, ಕಣ್ಣನ್ನು (ನಯತಿ) ಪರಸ್ತ್ರೀ , ಪರವಸ್ತುಗಳ ಕಡೆಗೆ ಒಯ್ಯುವಳು. ಮನಸ್ಸಿನಲ್ಲಿ, ಇಂದ್ರಿಯಗಳಲ್ಲಿ ಇದ್ದು ಕಾಮ, ಕ್ರೋಧ, ಲೋಭ ಹುಟ್ಟಿಸುವಳು. ಹಿಂಸಿಸುವಳು. ಇಂದ್ರಿಯ, ಮನಸ್ಸುಗಳು ಪೂತನೆಯ ಕೈಯಲ್ಲಿ ಸಿಕ್ಕರೆ ಆ ಕಣ್ಣು, ನಾಲಿಗೆ, ಕಿವಿಗಳನ್ನು ನಿಷಿದ್ಧ ಆಚಾರ, ಆಹಾರ, ವಿಹಾರದೆಡೆಗೆ ಒಯ್ಯುವಳು. ಅದೇ ಈ ಬುದ್ಧಿ, ಮನಸ್ಸು, ಇಂದ್ರಿಯಗಳ ಸಮೂಹದ ಗೋಕುಲದಲ್ಲಿ ಜ್ಞಾನ ಬಂದರೆ ಕೃಷ್ಣ ಬಂದರೆ ಅವು ಶುದ್ಧ, ವಿಚಾರ, ಆಚಾರ ಹೊಂದುವವು. ಈ ಪೂತನೆ ಮೂರುವರ್ಷದವರೆಗಿನ ಮಕ್ಕಳನ್ನು ಪೀಡಿಸುವಳು. ಜಾಗ್ರತ್, ಸ್ವಪ್ನ, ಸುಷುಪ್ತಿ , ತ್ರಿಗುಣಗಳಾದ ಸತ್ತ್ವ, ರಜಸ್ಸು, ತಮಸ್ಸುಗಳ ವಿಕಾರ, ಪರಿಣಾಮಕ್ಕೆ ಒಳಗಾಗುವವರನ್ನೇ ಅವಳು ಪೀಡಿಸುವಳು. ಪೂತನೆ (ಅಜ್ಞಾನ) ಗೋಕುಲಕ್ಕೆ ಬಂದಾಗ ಗೋವುಗಳು (ಇಂದ್ರಿಯಗಳು) ವಿಷಯಭೋಗದ ವನಕ್ಕೆ ಆಹಾರಕ್ಕಾಗಿ ಹೋಗಿದ್ದವು. ಆಗಲೇ ಅಜ್ಞಾನ ಮನದಲ್ಲಿ ತಳ ಊರಿತು. 'ನಂದ'

ಸುಖಚಿತ್‌ರೂಪಿ ಜೀವ. ಅಂತೆಯೇ ನಂದಗೋಕುಲಕ್ಕೆ, ಹೃದಯಮಂದಿರಕ್ಕೆ ಶ್ರೀಕೃಷ್ಣ ಬಂದಾಗ ಈ ಜೀವ (ನಂದ) ದೇವರನ್ನು ಬಿಟ್ಟು ಹೊರಗೆ ನಡೆದ. ಭೋಗದೆಡೆಗೆ ಪಯಣ. ಮಥುರೆಗೆ ಗಮನ. ಕಂಸನಿಗೆ ಕಪ್ಪ ನೀಡಲು. ಇಂದ್ರಿಯಗಳು ಮೇಯಲು ವನಕ್ಕೆ ಹೋದವು. ಆಗ ಪೂತನಾ ಗೋಕುಲಕ್ಕೆ (ಎಲ್ಲರ ಬದುಕಿನಲ್ಲಿ) ಪ್ರವೇಶಿಸಿದಳು.

ಆಸುರೀ ಸಮಯ. ರಾತ್ರಿಯ ವೇಳೆ. ರಾಕ್ಷಸೀ ಆಕಾಶದಲ್ಲಿ ಹಾರುತ್ತ ಗೋಕುಲಕ್ಕೆ ಆಗಮಿಸಿದಳು. ಅದು ಬೃಹದ್ವನ ನದಿಯ ದಡ. ಬಟ್ಟೆಯ ಮನೆ. ಅರಿವೆಯ ಹೊದಿಕೆಯ ಮಂಟಪ. ಕೇಸರೀಧ್ವಜ. ಇದು ವನದಲ್ಲಿಯ ನಂದನ ಮನೆ. ಕೃಷ್ಣನ ಜನ್ಮಧಾಮ. ಸುತ್ತಲು ಕಾಯುವ ಕಾವಲುಗಾರರು. ನಂದನ ಭಟರು. ಬಿಚ್ಚುಗತ್ತಿಯ ಪಹರೆ. ಎಲ್ಲೆಡೆ ಕಾವಲು. ಪೂತನೆಗೆ ಭಯ. ತನ್ನ ಭಯಾನಕರೂಪ ಕಂಡು ಈ ಕಾವಲು ಸೈನ್ಯ ತನ್ನ ಮೇಲೆ ಆಕ್ರಮಣಗೈಯಬಹುದು. ಶಿಶುಹಿಂಸೆ ಆಗದೇ ತನ್ನ ಹಿಂಸೆ ಆದೀತು. ಅದಕ್ಕೆ ಇವರೆಲ್ಲ ಕಾವಲಿಗರ ಮನಮೋಹಕ ರೂಪ ಧರಿಸಿ, ಪ್ರವೇಶಿಸಲು ನಿರ್ಧರಿಸಿದಳು. ಅವಳು ಕಾಮಚಾರಿಣಿ, ಕಾಮರೂಪಿಣಿ. ಕ್ಷಣಕ್ಕೊಂದು ರೂಪ ಧರಿಸುವವಳು. 'ವಾಸನಾ, ವ್ಯಸನಗಳು ವಿವಿಧರೂಪ ಧರಿಸಿದಂತೆ. ಈ ಪೂತನೆ ಸಭ್ಯ , ಸುಶೀಲ ಸಾತ್ತ್ವಿಕ ರೂಪ ಧರಿಸಿದಳು. ಶ್ರೀಕೃಷ್ಣನ ಪ್ರಾಣಹರಣ ಮುಖ್ಯಗುರಿ. ಅದು ತನ್ನ ಮೂಲರೂಪ, ಭೀಕರಮುಖ, ಕ್ರೂರತೇಜ, ಭಯಾನಕ ವೇಷದಿಂದ ನಂದನಗೃಹಪ್ರವೇಶವು ಅಸಾಧ್ಯವೆಂದು ಸುಂದರ ರೂಪ ಧರಿಸಿದಳು.

ಮುಖದಲ್ಲಿ ಸಾತ್ತ್ವಿಕತೇಜ, ಮೃದುವಾದ ಭಾವ, ಶಾಂತಮುಖ, ಸಭ್ಯವೇಷ, ಕಮನೀಯ ಕಾಂತಿ,

**ತಾಂ ಕೇಶಬಂಧವ್ಯತಿಷಿಕ್ತಮಲ್ಲಿಕಾಂ**
**ಬೃಹನ್ನಿತಂಬಸ್ತನಕೃಚ್ಛ್ರಮಧ್ಯಮಾಮ್ ।**
**ಸುವಾಸಸಂ ಕಂಪಿತಕರ್ಣಭೂಷಣ-**
**ತ್ವಿಷೋಲ್ಲಸತ್‌ಕುಂತಲಮಂಡಿತಾನನಾಮ್ ।**

**ವಲ್ಗುಸ್ಮಿತಾಪಾಂಗವಿಸರ್ಗವೀಕ್ಷಿತೈಃ**
**ಮನೋಹರಂತೀಂ ವನಿತಾಂ ವ್ರಜೌಕಸಃ । (ಭಾಗ 10-7-5)**

ಕೊರಳಲ್ಲಿ ಹಾರ, ಬೆನ್ನಮೇಲೆ ಸುಂದರ ಹೆರಳು, ಉದ್ದಕೂದಲು, ಮಲ್ಲಿಗೆಯ ಮಾಲೆ ಮುಖದಲ್ಲಿ ಮಂದಹಾಸ, ಮಂದಗಮನ, ಹಣೆಯಲ್ಲಿ ಕುಂಕುಮ, ಕೈಯಲ್ಲಿ ಕಮಲ, ಕಂಡವರಿಗೆ ಆದರ ಹುಟ್ಟುವ ವೇಷ ಹಾಕಿದಳು. ಮುತ್ತೈದೆ. ಗೋಪಿಯರು ವಂದಿಸಿದರು. ಕೈಮುಗಿದು ಒಳಗೆ ಕರೆದರು. ಧಾರ್ಮಿಕಳಂತೆ ಬಿಂಬಿಸಿದಳು. ಅವಳನ್ನು ಯಾರೂ ತಡೆಯಲಿಲ್ಲ. ಮುನ್ನಡೆಯಲು ದಾರಿ ನೀಡಿದರು. ...ಸಶೇಷ...

# 'ಉಪಾಕರ್ಮ' ಏನು ? ಏಕೆ ? ಹೇಗೆ ? - ೨೦

✍ ಪಂ. ಶ್ರೀನಿವಾಸಾಚಾರ್ಯ ನಾಗರಹಳ್ಳಿ

**ಪ್ರಶ್ನೆ - ಎಲ್ಲರೂ ಪಾಲಿಸಬೇಕಾದ ಮುಖ್ಯ ನಿಯಮಗಳು ಯಾವವು ?**

ಯಾವುದೇ ಪೂಜೆಯಾಗಲೀ, ಹೋಮ-ಹವನವಾಗಲೀ ಅದರಲ್ಲಿ ಯಜಮಾನ, ಪುರೋಹಿತ, ಋತ್ವಿಕ್‌ಗಳು ಮತ್ತು ಅದರಲ್ಲಿ ಭಾಗವಹಿಸುವ ಎಲ್ಲರೂ ಆ ವಿಧಿಯಲ್ಲಿ ದೇಹ-ಮಾತು-ಮನಸ್ಸುಗಳಿಂದ ಪೂರ್ಣವಾಗಿ ಏಕಾತ್ಮರಾಗಬೇಕು. ಇನ್‌ವಾಲ್ ಆಗಬೇಕು. ಏಕಾತ್ಮರಾಗುವಿಕೆ ಎಂದರೆ ? ಶಾರೀರಿಕವಾಗಿ, ಮಾತುಗಳಿಂದ, ಮನಸ್ಸಿನಿಂದ ಹಾಗೂ ದ್ರವ್ಯಗಳಿಂದ ''ಇಂದು ಇಲ್ಲಿ ದೇವತೆಗಳು ಬಂದಿದ್ದಾರೆ. ಅವರನ್ನು ಆದರಿಸಿ ಪೂಜಿಸಿ ಅನುಗ್ರಹಪಡೆಯಬೇಕಾಗಿದೆ'' ಎಂಬುದನ್ನು ಸರಿಯಾಗಿ ಅರ್ಥಮಾಡಿಕೊಂಡು ಆ ಕಾರ್ಯವನ್ನು ಬಿಟ್ಟು ಬೇರೆ ಏನನ್ನೂ ಮಾಡಬಾರದು. ಆ ಕಾರ್ಯದಲ್ಲಿಯೇ ಪೂರ್ಣ ಆಸಕ್ತರಾಗಬೇಕು.

**1) ಕಾಯೇನ ಅಥವಾ ಶಾರೀರಿಕವಾಗಿ ಭಾಗವಹಿಸುವಿಕೆ**

ಪೂಜೆ ಅಥವಾ ಹೋಮ ಮುಗಿಯುವವರೆಗೆ ಯಾರೂ ಆ ಸ್ಥಳವನ್ನು ಬಿಟ್ಟು ಬೇರೆ ಕಡೆಗೆ ಹೋಗಬಾರದು. ಅಧ್ವರ್ಯುವಿಗೆ ಸಂಪೂರ್ಣ ಜವಾಬ್ದಾರಿಯಿರುವದರಿಂದ ಸಂದರ್ಭಾನುಸಾರವಾಗಿ ಸ್ಥಳ ಬದಲಾಯಿಸಬಹುದು. ಯಜಮಾನ-ಋತ್ವಿಕ್-ಬ್ರಹ್ಮ-ಸದಸ್ ಇವರಾರೂ ಸ್ಥಳ ಬಿಟ್ಟು ಕದಲಬಾರದು.

**''ನ ಋತ್ವಿಜಃ ವಿಹಾರಾತ್ ಪರ್ಯಾವರ್ತೇರನ್ ಅಧ್ವರ್ಯುವರ್ಜಮ್''**

**(ಶಥಪಥಬ್ರಾಹ್ಮಣ)**

ಅಲ್ಲಿ ಇಲ್ಲಿ ತಿರುಗಾಡುತ್ತ ದರ್ಭ, ಸಮಿಧೆ, ಮಂಡಲ, ಹೋಮಕ್ಕೆ ಸಂಬಂಧಿಸಿದ ವಸ್ತುಗಳು ಹಾಗೂ ಕುಳಿತವರನ್ನು ದಾಟಿದರೆ 5000 ಸಾವಿರ ಸಲ ಮೂಲಮಂತ್ರವನ್ನು ಜಪಿಸಬೇಕು-

**''ಲಂಘನೇ ಪಂಚಸಹಸ್ರವಾರಂ ಮೂಲಮಂತ್ರಜಪಃ'' (ಪ್ರಪಂಚಸಾರಸಂಗ್ರಹ)**

**2) ವಾಕ್ ನಿಯಮ**

ಪೂಜೆ-ಹೋಮ ಇತ್ಯಾದಿಗಳು ನಡೆಯುವ ಸ್ಥಳದಲ್ಲಿ ಮಂತ್ರಸ್ತೋತ್ರ ಹಾಗೂ ದೇವರನಾಮ, ದೇವರ ನಾಮಸ್ಮರಣೆ ಬಿಟ್ಟು ಬೇರೆ ಶಬ್ದಗಳು, ಮಾತುಗಳು ಅಸ್ಪೃಶ್ಯರಂತೆ ಮೈಲಿಗೆಯನ್ನು ಉಂಟುಮಾಡುವವು. ಆ ಸ್ಥಳವು ಅಪವಿತ್ರವಾಗುವದು. ಈ ನಿಯಮ ಯಜಮಾನ, ಋತ್ವಿಕ್ ಹಾಗೂ ಬಂದವರೆಲ್ಲರಿಗೂ ಸಂಬಂಧಿಸಿದೆ. 'ಶಥಪಥಬ್ರಾಹ್ಮಣ' ಗ್ರಂಥವು ಈ ಬಗ್ಗೆ ವಿಸ್ತೃತವಾಗಿ ತಿಳಿಸುತ್ತದೆ.

1) ನ ಮ್ಲೇಚ್ಛಿತವೈ, ನಾಪಭಾಷಿತವೈ, ಮ್ಲೇಚ್ಛೋ ವಾ ಏಷ ಅಪಶಬ್ದಃ

2) ವಾಕ್ ವೈ ಯಜ್ಞೋ ವಿಕ್ಷುಬ್ಧಃ, ಸ ವೈ ವೈಷ್ಣವೀಂ ಋಚಂ ಯಜುರ್ವಾ ಜಪತಿ

3) ಮುಷ್ಟೀಕರೋತಿ ವಾಚಂ ಯಚ್ಛತಿ

4) ಯತ್ರ ಋತ್ವಿಜಃ ಸಂವಿದಾನಾಃ ಪ್ರಚರಂತಿ ತತ್ರ ಯಜ್ಞೋ ವೃದ್ಧೋ ಭವತಿ.

5) ಸ ಹೋತಾ ನಾಪವ್ಯಾಹರೇತ್ ಸೋಽಧ್ವರ್ಯುರ್ನಾಪವ್ಯಾಹರೇತ್ ಸ ಉದ್ಗಾತಾರೋ ನಾಪವ್ಯಾಹರೇಯುಃ ಸ ಬ್ರಹ್ಮಾ ನಾಪವ್ಯಾಹರೇತ್. ಯದಿ ವ್ಯಾಹರೇಯುಃ ಯಥಾ ಪೂರ್ಣಪಾತ್ರಂ ಪರಾಸಿಂಚೇತ್ ಏವಂ ಯಜಮಾನಂ ಪರಾಸಿಂಚೇತ್ ॥

ಇಂದಿನ ದಿನಗಳಲ್ಲಿ ಯಾವುದೇ ಕಾರ್ಯಕ್ರಮಕ್ಕೆ ಬಂಧು-ಬಾಂಧವರನ್ನು ಹಾಗೂ ಮಿತ್ರರನ್ನು ಹೆಚ್ಚಿನ ಸಂಖ್ಯೆಯಲ್ಲಿ ಕರೆದು ತೋರಿಕೆ ಮಾಡುವ ಮಾನಸಿಕತೆ ಹೆಚ್ಚಾಗಿದೆ. ಶ್ರದ್ಧೆ ಇಲ್ಲದೇ ಬಂದವರು ಹರಟೆ ಹೊಡೆಯುತ್ತ ಮುಖ್ಯಕಾರ್ಯಗಳಿಗೆ ವಿಘ್ನ ಮಾಡುತ್ತಾರೆ. ಅದಕ್ಕಾಗಿ ಅವರನ್ನು ಮಧ್ಯಾಹ್ನ ಕರೆದು ಅವರು ಬರುವುದರೊಳಗಾಗಿ ಅಂದರೆ ಬೆಳಿಗ್ಗೆ 10 ಗಂಟೆಯ ಒಳಗಾಗಿ ಪೂಜಾ ಹಾಗೂ ಹೋಮಾದಿಗಳ ಕಾರ್ಯಗಳನ್ನು ಮುಗಿಸಬೇಕು. ಏಕೆಂದರೆ ದೇವಕಾರ್ಯಗಳನ್ನು ಬೆಳಿಗ್ಗೆ ಮುಗಿಸಬೇಕು. ಮಧ್ಯಾಹ್ನಕಾಲದಲ್ಲಿ ಮನುಷ್ಯರು ಊಟಾದಿಗಳನ್ನು ಮುಗಿಸಬೇಕು. ಪಿತೃಕಾರ್ಯಗಳ್ನು ಅಪರಾಹ್ಣಕಾಲದಲ್ಲಿ ಮಾಡಬೇಕು ಎಂದು ಶ್ರುತಿಯು ಹೇಳುತ್ತದೆ.

**ದೇವಾಃ ಪೂರ್ವಾಹ್ಣೇ ಅಶನಮಭಿವ್ಹರಂತಿ । ಮಧ್ಯಾಹ್ನೇ ಮನುಷ್ಯಾಃ । ಅಪರಾಹ್ಣೇ ಪಿತರಃ । (ಶ್ರುತಿ.)**

**3) ಮನೋನಿಯಮ**

ಪೂಜೆ ಯಜ್ಞಗಳು ತೋರಿಕೆಗಳಲ್ಲ. ಮಾನಸಿಕವಾಗಿ ಶ್ರದ್ಧೆಯಿಂದ ಮಾಡಲ್ಪಡುವ ಕರ್ಮಗಳಾಗಿವೆ. ದೇವತೆಗಳಿಗೆ ನಮ್ಮ ಮನದಲ್ಲಿ ನಡೆಯುವ ಪ್ರತಿಯೊಂದು ವಿಚಾರಗಳು ಗೋತ್ತಾಗುತ್ತವೆ. ಶಾಸ್ತ್ರ ಬಿಟ್ಟು ಆಡುವ ಮಾತುಗಳನ್ನು ದೇವತೆಗಳು ಸ್ವೀಕರಿಸುವುದಿಲ್ಲ. ವಾಂತಿ ಮಾಡಿದ ದ್ರವ್ಯ ಕಂಡು ನಮಗೆ ತಿರಸ್ಕಾರ ಉಂಟಾಗುವಂತೆ 'ಮನ'ದಲ್ಲಿ ಶ್ರದ್ಧೆ ಇಲ್ಲದಿದ್ದರೆ ದೇವತೆಗಳಿಗೆ ತಿರಸ್ಕಾರ ಬರುತ್ತದೆ. ಮನುಷ್ಯರ ಜತೆಗೆ ದೇವತೆಗಳು ವ್ಯವಹರಿಸುವದಿಲ್ಲ. ಅದಕ್ಕಾಗಿ ಯಜ್ಞದಲ್ಲಿ ಭಾಗವಹಿಸುವವರು ಮಾನಸಿಕವಾಗಿ, ದೇವರನ್ನು ತಮ್ಮಲ್ಲಿ ಆವಾಹಿಸಿ ತಾವೂ ದೇವತಾಸನ್ನಿಧಾನವುಳ್ಳವರಾಗಿ ಪೂಜೆ-ಹೋಮಾದಿಗಳಲ್ಲಿ ಭಾಗವಹಿಸಬೇಕು. ಅದಕ್ಕಾಗಿ ತತ್ವನ್ಯಾಸ-ಮಾತೃಕಾನ್ಯಾಸಗಳು ಆವಶ್ಯಕ.

1) ದೇವಾಃ ಮನಾಂಸಿ ಜಾನಂತಿ, ಸತ್ಯಂ ವೈ ದೇವಾಃ ಅನೃತಂ ಮನುಷ್ಯಾಃ ನ ದೇವಾಃ ಮನುಷ್ಯೈಃ ಸಹ ಸಂವದಂತೆ. ತಸ್ಮಾದ್ದೇವಾನಾಮೇಕತಮೋ ಭೂತ್ವಾ ದೇವತಾಂ ಯಜೇತ - (ಶತಪಥಬ್ರಾಹ್ಮಣ)

ಯಥಾ ವಾಂತಾನ್ಮನುಷ್ಯಾಃ ಬೀಭತ್ಸಂತೇ ತಥಾ ತಸ್ಮಾದ್ದೇವಾಃ (ಐತರೇಯ)

**ದ್ರವ್ಯನಿಯಮ -** ಆಯಾ ದೇವತೆಗಳಿಗೆ ಶಾಸ್ತ್ರದಲ್ಲಿ ವಿಧಿಸಿದಂತೆ ಶುದ್ಧವಾದ ದ್ರವ್ಯಗಳನ್ನು ಮೊದಲೇ ಸಂಗ್ರಹಿಸಬೇಕು. ಆಯಾ ದೇವತೆಗಳಿಗೆ ಮೀಸಲಾದ ದ್ರವ್ಯಗಳನ್ನು ಆ ದೇವತೆಗಳಿಗೆ ಸಮರ್ಪಿಸಬೇಕು. ಒಬ್ಬರಿಗೋಸ್ಕರ ನಿಯತ ದ್ರವ್ಯವನ್ನು ಇನ್ನೊಬ್ಬರಿಗೆ ಸಮರ್ಪಿಸಬಾರದು. ಹಾಗೆ ಮಾಡಿದರೆ ಕೊಟ್ಟು ಕಿತ್ತುಕೊಂಡಂತಾಗುತ್ತದೆ. ಆದ್ದರಿಂದಲೇ ಆರಂಭದಲ್ಲಿ ಅಗ್ನಿಸ್ಥಾಪನೆಯಾದನಂತರ 'ಅನ್ವಾಧಾನ'ವೆಂಬ ವಿಧಿಯನ್ನು ಮಾಡಲಾಗುವದು.

**ಪ್ರಶ್ನೆ : ಅನ್ವಾಧಾನವೆಂದರೇನು ?**

**ಉತ್ತರ :** ಆಯಾ ವಿಶಿಷ್ಟ ಹೋಮಕರ್ಮಗಳಲ್ಲಿ ಯಾವ ದೇವತೆಗಳು ಆವಾಹಿತರಾಗಿರುತ್ತಾರೆಯೋ ಅವರಿಗೆ ಯಾವ ಮಂತ್ರದಿಂದ, ಯಾವ ಆಹುತಿಯನ್ನು ಎಷ್ಟು ಸಂಖ್ಯೆಯಲ್ಲಿ ಕೊಡಲಾಗುವುದೋ ಅದನ್ನು ಮೊದಲೇ ಹೇಳಿ ಸಂಕಲ್ಪ ಮಾಡುವುದಕ್ಕೆ ಅನ್ವಾಧಾನವೆನ್ನುವರು. ಅನ್ವಾಧಾನ ಮಾಡಿದ ಮೇಲೆ ಅಲ್ಲಿ ಹೇಳಿದ ಸಂಖ್ಯೆಗಿಂತ ಹೆಚ್ಚಿನ ಆಹುತಿಗಳನ್ನಾಗಲೀ, ಕಡಿಮೆ ಆಹುತಿಗಳನ್ನಾಗಲೀ, ದ್ರವ್ಯಗಳ ಬದಲಾವಣೆಯಾಗಲೀ ಮಾಡಲು ಬರುವುದಿಲ್ಲ.

''ಯೋ ವೈ ದೇವೇಭ್ಯಃ ಪ್ರತಿಪ್ರೋಚ್ಯ ಯಜ್ಞೇನ ಯಜತೆ **ಜಹಂತೇಸ್ಯ** ದೇವಾ ಹವ್ಯಂ ಹವಿರ್ನಿರೂಪ್ಯಮಾಣಮಭಿಮಂತ್ರಯೇತಾಗ್ನಿಂ ಹೋತಾರಮಿಹ ತಂ ಹುವ ಇತಿ''

(ಗೃಹ್ಯಸೂತ್ರ)...ಕ್ರಮಶಃ...

**ಶ್ರೀ ಜಯಸತ್ಯಪ್ರಮೋದನಿಧಿಗೆ ಇತ್ತೀಚೆಗೆ ದೇಣಿಗೆ ನೀಡಿದ ಮಹನೀಯರು**

| | |
|---|---|
| ಶ್ರೀ ರಾಘವೇಂದ್ರಾಚಾರ್ಯ ಕಡ್ಡಿ ಬೆಂಗಳೂರು | 150,000.00 |
| ಶ್ರೀ ಪ್ರಸನ್ನ ಎಂ ಜೋಶಿ | 10,000.00 |
| ಶ್ರೀ ರಾಘವೇಂದ್ರರಾವ್ | 10,000.00 |
| ಶ್ರೀಮತಿ ಕೌಸಲ್ಯಾಬಾಯಿ | 10,000.00 |
| ಶ್ರೀ ಎಂ ಆನಂದತೀರ್ಥ | 5,000.00 |
| ಶ್ರೀ ವಾಯ್ ರಾಘವೇಂದ್ರರಾವ್ | 5,000.00 |
| ಶ್ರೀ ನರಸಿಂಹಾಚಾರ್ಯ ರಾಯಚೂರ್ | 5,000.00 |
| ಶ್ರೀಮತಿ ಸೀತಾಲಕ್ಷ್ಮೀ ಡಿ | 1,000.00 |

ಇವರುಗಳು ಶ್ರೀ ಜಯಸತ್ಯಪ್ರಮೋದನಿಧಿಯ ಮೇಲಿನ ಅಭಿಮಾನದಿಂದ ದೇಣಿಗೆ ನೀಡಿರುವರು. ಹರಿ-ವಾಯು-ಗುರುಗಳು ಅವರಿಗೂ, ಅವರ ಕುಟುಂಬಕ್ಕೂ ಜ್ಞಾನಭಕ್ತಿ-ಆಯು- ಆರೋಗ್ಯಾದಿಗಳನ್ನು ಕರುಣಿಸಲೆಂದು ಪ್ರಾರ್ಥಿಸುವೆವು. -ಸಂ.

# ಉಡುಪಿ ಶ್ರೀಕೃಷ್ಣ - ಸಿದ್ಧಿವಿಘ್ನಮುಖದೋಷಭೇಷಜ

ಅನುಗ್ರಹ - ಶ್ರೀ ಶ್ರೀ ಸತ್ಯಾತ್ಮತೀರ್ಥರು ✍ ಸಂ. ಸಗ್ರಿ ರಾಘವೇಂದ್ರ ಉಪಾಧ್ಯಾಯ

ಶ್ರೀಮದುತ್ತರಾದಿಮಠಾಧೀಶರಾದ ಶ್ರೀಸತ್ಯಾತ್ಮತೀರ್ಥರು ತಮ್ಮ ಹತ್ತೊಂಭತ್ತನೇ ಚಾತುರ್ಮಾಸ್ಯವ್ರತವನ್ನು ಉಡುಪಿ ಶ್ರೀಕೃಷ್ಣನ ಸನ್ನಿಧಿಯಲ್ಲಿ ನಡೆಸಲು ಕೈಗೊಂಡ ಸಂಕಲ್ಪವನ್ನು ಅಭಿವಂದಿಸಲು ಆಯೋಜಿಸಲಾಗಿದ್ದ ಸಭೆಯಲ್ಲಿ ಶ್ರೀಗಳವರು ಪ್ರವಚನದ ಮೂಲಕ ಉಡುಪಿ ಶ್ರೀಕೃಷ್ಣನಿಗೆ ಸಮರ್ಪಿಸಿದ ವಚನಪ್ರಸೂನಮಾಲಾ.

**''ನನ್ವನನ್ಯಶರಣಾತ್ಮನಾಂ ಸತಾಂ ಸಿದ್ಧಿವಿಘ್ನಮುಖದೋಷಭೇಷಜಮ್''**

ಎಂದು ನಾರಾಯಣಪಂಡಿತಾಚಾರ್ಯರು ಸಜ್ಜನರಿಗೆ ಸಿದ್ಧಿ ಅಂದರೆ ಮೋಕ್ಷ ಅಥವಾ ತತ್ವಜ್ಞಾನ ಇದನ್ನು ಗಳಿಸಿಕೊಳ್ಳಲು ಬಾಧಿಸುವ ವಿಘ್ನಗಳೇ ಮುಂತಾದ ದೋಷಗಳಿಗೆ ಔಷಧದಂತೆ ಪರಿಹಾರಕನಾಗಿ ಉಡುಪಿ ಶ್ರೀಕೃಷ್ಣನನ್ನು ಮಧ್ವಗುರುಗಳು ಪ್ರತಿಷ್ಠಾಪಿಸಿರುವರೆಂದು ಪ್ರತಿಪಾದಿಸಿರುವರು.

**ಮಾನಸಿಕದೋಷಗಳೇ ವಿಘ್ನಗಳು**

ಮೋಕ್ಷೋಪಯುಕ್ತವಾದ ತತ್ವಜ್ಞಾನವನ್ನು ಪಡೆಯಲು ಬಾಧಕಗಳಾದ ವಿಘ್ನಗಳಲ್ಲಿ ಹೊರಗಿನವುಗಳಿಗಿಂತಲೂ ಮನಸ್ಸಿಗೆ, ಬುದ್ಧಿಗೆ ಸಂಬಂಧಿಸುವ ದೋಷಗಳ ರೂಪದಲ್ಲಿ ಇರುವ ಒಳಗಿನವುಗಳೇ ಹೆಚ್ಚಾಗಿ ಬಾಧಿಸುವವು.

ಅಂತಹ ವಿಘ್ನಗಳನ್ನು ಶ್ರೀಮಧ್ವಗುರುಗಳು ತಮ್ಮ ಅನುವ್ಯಾಖ್ಯಾನದಲ್ಲಿ (3-3-93) ಭಾರತದ ವಚನದ ಮೂಲಕ ಹೀಗೆ ಸಂಗ್ರಹಿಸಿರುವರು -

**ವಿಷಯೇಷು ಚ ಸಂಸರ್ಗಾತ್ ಶಾಶ್ವತಸ್ಯ ಚ ಸಂಶಯಾತ್ ।**
**ಮನಸಾ ಚಾನ್ಯದಾಕಾಂಕ್ಷಾತ್ ಪರಂ ನ ಪ್ರತಿಪದ್ಯತೇ ॥**

ಪರಮಾತ್ಮನನ್ನು ಕಾಣದಿರುವುದಕ್ಕೆ, ತಿಳಿಯದಿರುವುದಕ್ಕೆ 1) ವಿಷಯಪದಾರ್ಥಗಳ ಆಸಕ್ತಿ , 2) ಶಾಶ್ವತನಾದ ಭಗವಂತನಲ್ಲೇ ದಾರ್ಢ್ಯ ಇಲ್ಲದಿರುವಿಕೆ, 3) ಶಾಶ್ವತನಾದ ಭಗವಂತನಿಗಿಂತ, ಶಾಶ್ವತವಾದ ಮೋಕ್ಷಕ್ಕಿಂತ ಬೇರೆಯಾದ ಸಂಸಾರದ ಪದಾರ್ಥಗಳನ್ನೇ ಮನಸ್ಸಿನಿಂದ ಬಯಸುತ್ತಿರುವುದು. ಈ ಮೂರು ಪ್ರಮುಖ ಕಾರಣಗಳೆಂದು ತಿಳಿಸುವ ಮೂಲಕ ಸಿದ್ಧಿಗೆ ಈ ಮೂರು ವಿಘ್ನಗಳು ಎಂದು ಹೇಳಿದಂತಾಗಿದೆ.

**ವಿಷಯೇಷು ಚ ಸಂಸರ್ಗಾತ್**

ಜನರ ದೊಡ್ಡ ಗುಂಪಿನಲ್ಲಿ ಯಾರೋ ಒಬ್ಬ ವ್ಯಕ್ತಿಯನ್ನು ಕಾಣುವ ಉದ್ದೇಶದಿಂದ ಆ ಗುಂಪಿನಲ್ಲಿ ಸೇರಿದ ಎಲ್ಲರ ಮೇಲೆ ದೃಷ್ಟಿ ಹಾಯಿಸಿದರೂ ಅವರಲ್ಲಿ ಯಾರೂ ನಮ್ಮ

ಗಮನಕ್ಕೆ ಬರಲಾರರು. ಅಂತೆಯೇ ವಿಷಯಪದಾರ್ಥಗಳಲ್ಲೇ ಆಸಕ್ತರಾಗಿರುವ ಪ್ರಯುಕ್ತ ಮನಸ್ಸಿಗೆ, ಬುದ್ಧಿಗೆ ಆ ವಿಷಯಪದಾರ್ಥಗಳೇ ಗೋಚರಿಸುವವು ಹೊರತು ದೇವರು ಕಾಣಿಸಲಾರ. ವಿಷಯಪದಾರ್ಥಗಳು ಎಲ್ಲೋ ಮೂಲೆ ಮೂಲೆಯಲ್ಲಷ್ಟೇ ಇರುವವು. ಆದರೂ ಅವುಗಳೇ ಮತ್ತೆ ಮತ್ತೆ ಕಾಣಿಸುವವು. ಹೊರತು ದೇವರು ಎಲ್ಲ ಕಡೆ ಇರುವವನಾದರೂ ಅವನು ಕಾಣಿಸುವುದಿಲ್ಲ.

ಹೀಗೆ ದೇವರನ್ನು ತಿಳಿಯಲು ಕಾಣಲು ವಿಷಯಾಸಕ್ತಿ ಬಾಧಕವಾಗಿದ್ದು ವಿಘ್ನ ಎನಿಸಿದೆ.

**ಶಾಶ್ವತಸ್ಯ ಚ ಸಂಶಯಾತ್**

ಎಂದೋ ಒಮ್ಮೆ ಉಪಕರಿಸಿದವರನ್ನೂ, ಮುಂದೆ ಮುಪ್ಪಿನಲ್ಲಿ ಉಪಕರಿಸಲಿರುವ ಮಕ್ಕಳನ್ನೂ ಎಂದೆಂದೂ ಮರೆಯದ ನಾವು ಶಶ್ವತ್ ಏಕಪ್ರಕಾರನಾಗಿದ್ದು ನಮಗೆ ಹಿಂದೆಯೂ, ಮುಂದೆಯೂ ಇಂದೂ ಉಪಕರಿಸುತ್ತಿರುವ ಭಗವಂತನ ಮೂಲಕ ಸಲ್ಲುವ ಶಾಶ್ವತವಾದ ಉಪಕಾರದ ಬಗ್ಗೆ, ಹಾಗೆ ಉಪಕರಿಸುವ ಶಾಶ್ವತನಾದ ಅವನ ಬಗ್ಗೆ ದಾರ್ಢ್ಯವಿಲ್ಲದಿರುವುದರಿಂದ ಅವನು ಕಾಣಿಸಿಕೊಳ್ಳುವುದಿಲ್ಲ. ತಿಳಿಯಲ್ಪಡುವುದಿಲ್ಲ.

ಆದ್ದರಿಂದ ಅವನನ್ನು ತಿಳಿದುಕೊಳ್ಳಲು, ಕಾಣಲು ಅವನ ಬಗ್ಗೆ ದಾರ್ಢ್ಯ ತಾಳದೇ ಸಂಶಯಪಡುವುದು ಬಾಧಕವೆನಿಸಿ ವಿಘ್ನ ಎನಿಸುವುದು.

**ಮನಸಾ ಚಾನ್ಯದಾಕಾಂಕ್ಷಾತ್**

ಒಬ್ಬನ ಜೊತೆಗೆ ಮಾತನಾಡುತ್ತಿರಲು ಅವನ ಜೊತೆಗಿರುವ ಮತ್ತೊಬ್ಬನಿಗೆ ಬೇಸರ ಆಗಬಾರದೆಂದು ಅವನ ಜೊತೆಗೂ ಮಾತುಕತೆಯ ಕಾಟಾಚಾರವನ್ನು ನಡೆಸಿದಲ್ಲಿ ಅವನು ಬುದ್ಧಿವಂತನಾದರೆ ತನ್ನ ಜೊತೆಗೆ ಮಾತನಾಡುವ ತಾತ್ಪರ್ಯವಿಲ್ಲ ಎಂದು ತಿಳಿದುಕೊಂಡು ಆ ಮಾತುಕತೆಯಲ್ಲಿ ಅನಾಸಕ್ತಿ ತೋರಿಸುವನು. ಹೀಗಿರುವಾಗ ಮನಸ್ಸಿನಲ್ಲಿ ಸಾಂಸಾರಿಕವಸ್ತುಗಳನ್ನೇ ಮೆಲುಕುಹಾಕುತ್ತ ಆಗೊಮ್ಮೆ ಈಗೊಮ್ಮೆ ಭಗವಂತನ ಜೊತೆ ವ್ಯವಹರಿಸಿದರೆ ಅವನು ತನ್ನ ತಿಳುವಳಿಕೆ, ದರ್ಶನ ನಮಗೆ ದೊರಕುವಂತೆ ಯಾಕೆ ಮಾಡಿಯಾನು ?

ಆದ್ದರಿಂದ ಭಗವಂತನನ್ನು ತಿಳಿಯಲು, ಕಾಣಲು ಭಗವಂತನಿಗಿಂತ ಹಾಗೂ ಶಾಶ್ವತವಾದ ಮೋಕ್ಷಕ್ಕಿಂತ ಬೇರೆಯಾದ ಸಂಸಾರದ ವಸ್ತುಗಳನ್ನು ಬಯಸುವುದು ಬಾಧಕವೆನಿಸಿ ವಿಘ್ನವೆನಿಸಬಲ್ಲದು.

**ವಿಶ್ವನೇ ಕೃಷ್ಣ**

ಹೀಗೆ ಭಗವಂತನ ಜ್ಞಾನ ಪಡೆಯಲು ಮುಖ್ಯವಾಗಿ ಬಾಧಕಗಳೆನಿಸಿ ವಿಘ್ನಗಳೆನಿಸುವವನ್ನು ಗುರುತಿಸಿಕೊಂಡು ಅವುಗಳ ಪರಿಹಾರಕ್ಕೆ ಕೃಷ್ಣನಲ್ಲಿ ಮೊರೆಯಿಡಬೇಕು. ವಿಘ್ನಪರಿಹಾರಕನೆಂದು ಪ್ರಸಿದ್ಧನಾಗಿರುವವನು ಗಣಪತಿ. ಹೀಗಿರುವಾಗ ವಿಘ್ನಗಳ

ಪರಿಹಾರಕ್ಕೆ ಕೃಷ್ಣನನ್ನು ಪ್ರಾರ್ಥಿಸುವುದರಲ್ಲಿ ಏನು ಔಚಿತ್ಯ ? ಎಂಬ ಸಂದೇಹವನ್ನು 'ಸಿದ್ಧಿವಿಘ್ನಮುಖದೋಷಭೇಷಜಮ್' ಎಂಬ ಮಾತಿನಿಂದಲೇ ಸೂಚ್ಯವಾಗಿ ಪರಿಹರಿಸಲಾಗಿದೆ. ವಿ ಎಂದರೆ ವಿಘ್ನ, ಅಂತಹ ವಿಘ್ನಗಳನ್ನು ಪರಿಹರಿಸುವ ಗಣಪತಿ ವಿಘ್ನ. (ವಿಶಬ್ದವಾಚ್ಯಾನ್ ವಿಘ್ನಾನ್ ಹಂತೀತಿ.) ಅವನಿಗೆ ಸಂಬಂಧಿಸುವ ಮುಖದೋಷ ಎಂದರೆ, ಗಜಮುಖನೇ ಆಗಬೇಕಾಗಿರುವ ಅವನಿಗೆ ಒಂದೊಮ್ಮೆ ಮನುಷ್ಯಮುಖವೋ, ಇನ್ನಾವುದಾದರೂಂದು ಪಶುವಿನ ಮುಖವೋ ಬಂದಿದ್ದಲ್ಲಿ ಅದು ಅವನ ಪಾಲಿಗೆ ಮುಖದೋಷ ಎನಿಸುತ್ತಿತ್ತು . ಸ್ವಾಭಾವಿಕವಾಗಿ ಒಂದುರೀತಿಯಲ್ಲಿ ಇರಬೇಕಾದ ವ್ಯಕ್ತಿ ಅಥವಾ ವಸ್ತು ವಿಪರೀತವಾಗಿ ಇದ್ದಲ್ಲಿ ಅದು ದೋಷ ಎನಿಸುವುದು ತಾನೇ ? ಅಂತೆಯೇ ಗಜಮುಖನಾಗಿರಬೇಕಾಗಿರುವ ಗಣಪತಿ ಮಾನವಾದಿಮುಖನಾಗಿದ್ದರೆ ಅದು ಮುಖದೋಷ ಎನಿಸುತ್ತಿತ್ತು. ಆದರೆ ಹಾಗಾಗದೇ ಅವನಿಗೆ ಗಜಮುಖವೇ ಬರುವಂತೆ ಅನುಗ್ರಹಿಸಿರುವವನು ವಿಶ್ವನಾಮಕ ಭಗವಂತ.

**'ವಿನಾಯಕೋಽಪಿ ವಿಶ್ವಸ್ಯ ಧ್ಯಾನಾದೈತ್ ಗಜವಕ್ತ್ರತಾಮ್ ।'**

ಆದುದರಿಂದ ವಿಶ್ವ=ಗಣಪತಿಯ ಮುಖದೋಷವನ್ನು ಪರಿಹರಿಸುವ ಭೇಷಜ=ಔಷಧ. ಅಂತಹ ವಿಶ್ವ ಬೇರೆ ಅಲ್ಲ, ಕೃಷ್ಣ ಬೇರೆ ಅಲ್ಲ. ''ದೇವಕೀನಂದನಃ ದೇವತಾ'' ಎಂದು ಶ್ರೀಕೃಷ್ಣನೇ ಪ್ರತಿಪಾದ್ಯನಾಗಿ ಪರಿಗಣಿಸಲಾಗುವ ವಿಷ್ಣುಸಹಸ್ರನಾಮದ ಮೊದಲ ನಾಮವೇ 'ವಿಶ್ವಮ್' ತಾನೇ ? ಅಂದರೆ ವಿಷ್ಣುಸಹಸ್ರನಾಮಪ್ರತಿಪಾದ್ಯಕೃಷ್ಣನೇ ಗಣಪತಿಗೆ ಗಜಮುಖವನ್ನು ಅನುಗ್ರಹಿಸಿದ ವಿಶ್ವ ಎಂದಂತಾಗುವುದು. ವಿಷ್ಣುಸಹಸ್ರನಾಮದ ಉಪಸಂಹಾರದಲ್ಲಿ

**'ದೇವಕೀನಂದನಃ ಸ್ರಷ್ಟಾ ಕ್ಷಿತೀಶಃ ಪಾಪನಾಶನಃ ।'**

ಎಂದು ದೇವಕೀನಂದನನನ್ನು ''ಪಾಪನಾಶನಃ'' ಎಂದು ಸ್ತುತಿಸುವ ಮೂಲಕ ವಿಘ್ನಗಳಿಗೆ ಮೂಲಕಾರಣಗಳಾದ ಪಾಪಗಳನ್ನು ಪರಿಹರಿಸಿ ತತ್ಪ್ರಯುಕ್ತಗಳಾದ ವಿಘ್ನಗಳನ್ನು ದೇವಕೀನಂದನನು ಪರಿಹರಿಸುವನೆಂದು ಉಪಪಾದಿಸಲಾಗಿದೆ.

ಇಂತಹ ಕೃಷ್ಣನ ವಿಶೇಷಸನ್ನಿಧಾನಕ್ಕೆ ಪಾತ್ರನಾಗಿರುವುದರಿಂದಲೇ ಉಡುಪಿಕೃಷ್ಣನನ್ನು 'ಸಿದ್ಧಿವಿಘ್ನಮುಖದೋಷಭೇಷಜಮ್' ಎಂದು ಸ್ತುತಿಸಲಾಗಿದೆ ಎಂಬುದು ಸ್ಪಷ್ಟ.

**ಕ್ಷತ್ರಿಯಂ ಚೈವ ಸರ್ಪಂ ಚ ಬ್ರಾಹ್ಮಣಂ ಚ ಬಹುಶ್ರುತಮ್ ।**
**ನಾವಮನ್ಯೇತ ಮೇಧಾವೀ ಕೃಷಾನಪಿ ಕದಾಚನ ॥**

# ವಿಷ್ಣುವಿಗೆ ಪ್ರಿಯರಾದವರು ಯಾರು ?

✍ ಪಂ. ವೆಂಕಟಗಿರೀಶಾಚಾರ್ಯ ಅನಂತಪುರ

ಶ್ರೀಮದ್ಭಾಗವತದ ಪಂಚಮಸ್ಕಂಧದಲ್ಲಿ ಋಷಭಪರಮಾತ್ಮನು ತನ್ನ ಮಕ್ಕಳಿಗೆ ಉಪದೇಶ ಮಾಡಿದ್ದನ್ನು ಕಾಣುವೆವು. ಭರತ ಚಕ್ರವರ್ತಿಯ ತಂದೆಯಾದ ಋಷಭನು ತನ್ನ ನೂರು ಮಕ್ಕಳನ್ನು ಕೂಡಿಸಿಕೊಂಡು ಅವರಿಗೆ ಶ್ರೇಷ್ಠವಾದ ಉಪದೇಶವನ್ನು ಮಾಡುವನು.

ಪರಮಾತ್ಮನು ಕೊಟ್ಟ ಈ ದೇಹವನ್ನು ಕೇವಲ ಭೋಗಕ್ಕಾಗಿ ಉಪಯೋಗಿಸದೇ ದಿವ್ಯವಾದ ತಪಸ್ಸನ್ನು ಮಾಡಬೇಕು. ಅದರಿಂದ ಅಂತಃಕರಣವು ಶುದ್ಧವಾಗಿ ಮನುಷ್ಯನು ಕೊನೆಗೆ ತನ್ನ ಯೋಗ್ಯತಾನುಸಾರವಾದ ಸುಖವನ್ನು ಹೊಂದುತ್ತಾನೆ. ಈ ವಿಧವಾದ ಮೋಕ್ಷಸುಖವನ್ನು ಹೊಂದಬೇಕಾದರೆ ಮಹಾತ್ಮರಾದವರ ಸೇವೆಯನ್ನು ಮಾಡಬೇಕು. ದುಷ್ಟರ ಮತ್ತು ದುಷ್ಟಸಂಗ ಮಾಡುವವರ ಸ್ನೇಹವನ್ನು ಪರಿತ್ಯಾಗ ಮಾಡಬೇಕು.

ಅನಂತರ ಋಷಭ ಪರಮಾತ್ಮನು ಮಹಾತ್ಮರ ಲಕ್ಷಣವನ್ನು ತಿಳಿಸುವನು. ಈ ಸಂಸಾರದ ನಿವೃತ್ತಿಗಾಗಿ ಮೇಲೆ ಹೇಳಿದ ತಪಸ್ಸನ್ನು ಭಗವಂತನ ದರ್ಶನಪರ್ಯಂತವಾಗಿ ಆಚರಿಸಬೇಕು. ಸಂಸಾರದ ಪ್ರಾಪ್ತಿಗೆ ಮುಖ್ಯವಾದ ಕಾರಣವು ಮನಸ್ಸಾಗಿದ್ದು ಅದನ್ನು ವಶಮಾಡಿಕೊಂಡು ಭಗವಂತನಲ್ಲಿ ನೆಲೆಗೊಳಿಸಬೇಕು.

ಅನಂತರ ಪರಮಾತ್ಮನು ಮೋಕ್ಷಪ್ರಾಪ್ತಿಗೆ ಕಾರಣವಾದ ಸಾಧನೆಗಳನ್ನು ನಿರೂಪಿಸುವನು. ಗುರುಗಳಲ್ಲಿ ಸನ್ನಿಹಿತನಾದ ಭಗವಂತನ ನಿರಂತರವಾದ ಸೇವೆಯನ್ನು ಮಾಡುವುದು, ಎಲ್ಲಕಡೆಯಲ್ಲೂ ದುಃಖವಿದೆಯೆಂದು ತಿಳಿದು ವೈರಾಗ್ಯವನ್ನು ತಾಳುವುದು, ಸದಾ ಭಗವದಾರಾಧನೆ, ಭಗವಂತನ ಕಥೆಯನ್ನು ಶ್ರವಣ ಮಾಡುವುದು, ದೇಹ ಮತ್ತು ಮನೆಯಲ್ಲಿ ಅಭಿಮಾನವನ್ನು ಬಿಡುವುದು ಮುಂತಾದವುಗಳಿಂದ ಮುಕ್ತಿಯನ್ನು ಪಡೆಯಲು ಸಾಧ್ಯವೆಂದು ತಿಳಿಸುವನು. ಹೀಗೆ ಉಪದೇಶಿಸಿದ ಪರಮಾತ್ಮನು ಜ್ಯೇಷ್ಠಮಗನಾದ ಭರತನನ್ನು ಉಳಿದ ಎಲ್ಲ ಮಕ್ಕಳೂ ಭಜಿಸಬೇಕೆಂದು ಆದೇಶಿಸುವನು.

ಮೋಕ್ಷವನ್ನು ಹೊಂದಲು ಮೇಲೆ ಹೇಳಿದ ಜ್ಞಾನದ ಜೊತೆಗೆ ಜೀವರ ತಾರತಮ್ಯಜ್ಞಾನವೂ ಆವಶ್ಯಕವಾಗಿದೆ. ವೃಕ್ಷಗಳಿಂದ ಆರಂಭಿಸಿ ಬ್ರಾಹ್ಮಣರಪರ್ಯಂತ ಇರುವ ಜೀವರ ತಾರತಮ್ಯವನ್ನು ವಿಶದವಾಗಿ ನಿರೂಪಿರುವನು. ಬ್ರಾಹ್ಮಣರು ನನ್ನ ಅಧಿಷ್ಠಾನರಾಗಿದ್ದು ಅವರನ್ನು ಆದರಿಸಿದರೆ ನನ್ನನ್ನು ಪೂಜಿಸಿದಂತೆ ಆಗುವುದು.

ಹೀಗೆ ಹೇಳಿದ ಪರಮಾತ್ಮನು ಎಲ್ಲ ಭೂತಗಳು ನನ್ನ ಅಧಿಷ್ಠಾನವೆಂದು ಯಥಾಯೋಗ್ಯವಾಗಿ ಗೌರವಿಸಬೇಕೆಂದು ಮುಂದಿನ ಶ್ಲೋಕದಲ್ಲಿ ತಿಳಿಸುವನು—

**ಸರ್ವಾಣಿ ಮದ್ಧಿಷ್ಣ್ಯತಯಾ ಭವದ್ಭಿಶ್ಚರಾಣಿ ಭೂತಾನಿ ಸುತಾ ಧ್ರುವಾಣಿ ।**
**ಸಂಭಾವಿತವ್ಯಾನಿ ಪದೇಪದೇ ವೋ ವಿವಿಕ್ತದೃಷ್ಟಿಸ್ತದುತಾರ್ಹಣಂ ಮೇ ॥ 5-5-26**

ಎಲೈ ! ಮಕ್ಕಳೇ ! ನೀವು ಸ್ಥಾವರ ಮತ್ತು ಜಂಗಮವಾದ ಎಲ್ಲ ಭೂತಗಳನ್ನು ನನ್ನ ವಾಸಸ್ಥಾನವೆಂದು ತಿಳಿದು ಆದರಿಸಬೇಕು. ಬ್ರಾಹ್ಮಣರನ್ನು ಗೌರವಿಸಿದರೆ ಸಾಕಾಗಿರುವಾಗ ಎಲ್ಲ ಭೂತಗಳನ್ನು ಏಕೆ ಆದರಿಸಬೇಕು ಎಂದರೆ - ಪ್ರತಿಯೊಂದು ಸ್ಥಾನದಲ್ಲಿಯೂ ನಾನು ಇರುವೆನೆಂದು ತಿಳಿದು ಗೌರವಿಸುವುದು ನನ್ನ ಪೂಜೆಯಾಗಿದೆ.

ಮೇಲಿನ ಶ್ಲೋಕದಲ್ಲಿಯ ''ವಿವಿಕ್ತದೃಷ್ಟಿಃ'' ಎಂಬ ಪದದ ಅರ್ಥವು ಸ್ಪಷ್ಟವಾಗದಿರುವುದರಿಂದ ಶ್ರೀಮಧ್ವಾಚಾರ್ಯರು ಅದನ್ನು ತಮ್ಮ ಭಾಗವತತಾತ್ಪರ್ಯ-ನಿರ್ಣಯದಲ್ಲಿ ಹೀಗೆ ವಿವರಿಸುವರು :-

**ವಿವಿಕ್ತದೃಷ್ಟಿಃ ಜೀವಾನಾಂ ಧಿಷ್ಣ್ಯತಯಾ ಪರಮೇಶ್ವರಸ್ಯ ಭೇದದೃಷ್ಟಿಃ ।**

ಜೀವರು ಪರಮಾತ್ಮನಿಂದ ಭಿನ್ನರಾಗಿದ್ದು ಅವನ ಅಧಿಷ್ಠಾನರಾಗಿರುವರು ಎಂದು ತಿಳಿಯುವುದು ವಿವಿಕ್ತದೃಷ್ಟಿ ಎಂಬ ಶಬ್ದದ ಅರ್ಥವಾಗಿದೆ. ಆಚಾರ್ಯರು ವಿವಿಕ್ತದೃಷ್ಟಿ ಎಂಬ ಪದದ ಅರ್ಥವನ್ನು ಪ್ರಕೃತಕ್ಕೆ ಸಂಗತವಾಗುವಂತೆ ಪದ್ಮಪುರಾಣದ ವಚನದಿಂದ ತಿಳಿಸಿಕೊಡುವರು –

**ಉಪಪಾದಯೇತ್ ಪರಾತ್ಮಾನಂ ಜೀವೇಭ್ಯೋ ಯಃ ಪದೇ ಪದೇ ।**
**ಭೇದೇನೈವ ನ ಚೈತಸ್ಮಾತ್ ಪ್ರಿಯೋ ವಿಷ್ಣೋಸ್ತು ಕಶ್ಚನ ॥ ಇತಿ ಪಾದ್ಮೇ ॥**
**ಯೋ ಹರೇಶ್ಚೈವ ಜೀವಾನಾಂ ಭೇದವಕ್ತಾ ಹರೇಃ ಪ್ರಿಯಃ ॥ ಇತಿ ಚ ॥**

ಯಾರು ಯುಕ್ತಿಯಿಂದ ಪ್ರತಿಯೊಂದು ಸ್ಥಾನದಲ್ಲಿ ಜೀವರಿಂದ ಪರಮಾತ್ಮನಿಗೆ ಭೇದವನ್ನು ಪ್ರತಿಪಾದಿಸುವರೋ ಅವರಿಗಿಂತಲೂ ವಿಷ್ಣುವಿಗೆ ಪ್ರಿಯರಾದವರು ಯಾರೂ ಇಲ್ಲ. ಯಾರು ಜೀವರಿಗೆ ಹಾಗೂ ಪರಮಾತ್ಮನಿಗೆ ಭೇದವನ್ನು ಪ್ರತಿಪಾದಿಸುವರೋ ಅವರು ಶ್ರೀಹರಿಗೆ ಪ್ರಿಯರು.

ಮೇಲಿನ ಪ್ರಮಾಣದ ಮಾತನ್ನು ಗಮನಿಸಿದಾಗ ಜೀವ, ಪರಮಾತ್ಮರ ಭೇದಜ್ಞಾನವು ಎಷ್ಟು ಆವಶ್ಯಕವೆಂದು ಗೊತ್ತಾಗುತ್ತದೆ. ಅದನ್ನು ಅವಶ್ಯವಾಗಿ ಮಾಡಿಕೊಳ್ಳಲೇಬೇಕೆಂದು ಶ್ರೀಮಧ್ವಾಚಾರ್ಯರು ಭಾಗವತಶ್ಲೋಕದ ವ್ಯಾಖ್ಯಾನವನ್ನು ಮಾಡಿ ತಿಳಿಸಿರುವರು.

# ವಿಷ್ಣುಸಹಸ್ರನಾಮ

✍ ಪಂ. ಪದ್ಮನಾಭಾಚಾರ್ಯ ಚಿಟಗುಪ್ಪ

**ಅಮೃತಾಂಶೂದ್ಭವೋ ಭಾನುಃ ಶಶಬಿಂದುಃ ಸುರೇಶ್ವರಃ ।**
**ಔಷಧಂ ಜಗತಃ ಸೇತುಃ ಸತ್ಯಧರ್ಮಪರಾಕ್ರಮಃ ॥**

**288 ಅಮೃತಾಂಶೂದ್ಭವಃ - ಅಮೃತಾಃ ಅಂಶವಃ ಯಸ್ಯ ಸಃ ಅಮೃತಾಂಶುಃ । ಉತ್ (ಉತ್ಕೃಷ್ಟಃ) ಭವತೀತಿ ಉದ್ಭವಃ । ಅಮೃತಾಂಶುಶ್ಚಾಸೌ ಉದ್ಭವಶ್ಚ ಅಮೃತಾಂಶೂದ್ಭವಃ ।**

ಮೃತ ಎಂದರೆ ನಾಶವನ್ನು ಹೊಂದುವ ಎಂದರ್ಥ. ಅಮೃತ=ನಾಶವನ್ನು ಹೊಂದದ. ನಾಶರಹಿತವಾದ, ನಿತ್ಯವಾದ ಕಿರಣಗಳುಳ್ಳವನು. ಧನ್ವಂತರಿರೂಪನಾದ ಪರಮಾತ್ಮನು ಅಮೃತಕಲಶವನ್ನು ಕೈಯಲ್ಲಿ ಧರಿಸಿಕೊಂಡು ಬಂದವನು. ಅವನ ತೇಜಸ್ಸು ದಿವ್ಯ ಹಾಗೂ ಅಮೋಘ. ಅಂತಹ ತನ್ನ ಕಿರಣಗಳಿಂದ ವಿಶ್ವವನ್ನು ಪ್ರಕಾಶಗೊಳಿಸುತ್ತ ಸಮಗ್ರವಿಶ್ವಕ್ಕಿಂತಲೂ ಉತ್ಕೃಷ್ಟನಾಗಿರುವನು ಎಂದರ್ಥ.

★ಅಮೃಂತಾಶು ಎಂದರೆ ಶೀತಲವಾದ, ಅಮೃತಮಯವಾದ ಕಿರಣಗಳುಳ್ಳ ಚಂದ್ರನು ಎಂದು ಅರ್ಥ. ಅಮೃತಾಂಶುಃ ಉದ್ಭವತಿ ಅಸ್ಮಾದಿತಿ ಅಮೃತಾಂಶೂದ್ಭವಃ । ಅಂತಹ ಚಂದ್ರನು ಭಗವಂತನಿಂದ ಹುಟ್ಟಿರುವನು. ''ಚಂದ್ರಮಾ ಮನಸೋ ಜಾತಃ'' ಭಗವಂತನ ಮನಸ್ಸಿನಿಂದ ಚಂದ್ರನು ಹುಟ್ಟಿರುವನೆಂದು ಪುರುಷಸೂಕ್ತವು ಪ್ರತಿಪಾದಿಸುತ್ತದೆ. ಆದ್ದರಿಂದ ಭಗವಂತನು ಅಮೃತಾಂಶೂದ್ಭವನು.

ಅಥವಾ ಅಮೃತಾಂಶು ಎಂದರೆ ಚಂದ್ರನು. ಅವನಲ್ಲಿ ಉದ್ಭವನು ಎಂದರೆ ಪ್ರಕಟನಾದವನು. ಭಗವಂತನು ಚಂದ್ರನಲ್ಲಿದ್ದು ವಿಶೇಷವಾಗಿ ತನ್ನ ಅಮೃತಮಯ ಕಿರಣಗಳನ್ನು ಹೊರಡಿಸುವನು. ಅದರಿಂದ ಅನೇಕ ಸುಖ, ಪುಷ್ಟಿ, ಬೆಳವಣಿಗೆ ಮೊದಲಾದವುಗಳನ್ನು ಕೊಡುವನು. ಈ ವಿಷಯವನ್ನು ಶ್ರೀಕೃಷ್ಣನು ಗೀತೆಯ 15ನೆಯ ಅಧ್ಯಾಯದಲ್ಲಿ ''ಪುಷ್ಣಾಮಿ ಚೌಷಧೀಃ ಸರ್ವಾಃ ಸೋಮೋ ಭೂತ್ವಾ ರಸಾತ್ಮಕಃ ।'' ನಾನು ಅಮೃತರಸರೂಪನಾಗಿದ್ದು, ಸೌಮ್ಯನಾಗಿದ್ದು ಸೋಮನಲ್ಲಿ (ಚಂದ್ರನಲ್ಲಿ) ಇದ್ದು ಎಲ್ಲ ಔಷಧಿಗಳನ್ನು ಸಸ್ಯಾದಿಗಳನ್ನು ಪೋಷಿಸುವೆನು, ಅಭಿವೃದ್ಧಿಗೊಳಿಸುವೆನು ಎಂದು ತಿಳಿಸಿದ್ದಾನೆ.

★ಅಂಶ ವಿಭಾಜನೇ ಎಂದು ಧಾತುಪಾಠವಿದೆ. ಅಮೃತಂ ಅಂಶಯತಿ ಇತಿ ಅಮೃತಾಂಶುಃ, ಉದ್ಗತಃ ಭವಾತ್ (ಉತ್ಪತ್ತೇಃ ಸಂಸಾರಾತ್ ವಾ) = ಸಾಧಕರಾದ ಚೇತನರು ಸ್ವಯೋಗ್ಯತಾನುಸಾರ ಸಾಧನೆಯನ್ನು ಪೂರ್ತಿಗೊಳಿಸಲು ಅವರಿಗೆ ಅಮೃತವನ್ನು ಮೋಕ್ಷವನ್ನು ವಿಭಜಿಸುವನು. ಸಾಯುಜ್ಯ , ಸಾಲೋಕ್ಯ , ಸಾಮೀಪ್ಯ , ಸಾರೂಪ್ಯಾದಿ ರೂಪವಾದ ಮುಕ್ತಿಯನ್ನು ನೀಡುವವನು. ಮತ್ತು ತಾನು ಸಂಸಾರದಿಂದ ದೂರದಲ್ಲಿರುವವನು. ಸಂಸಾರವನ್ನು ದಾಟಿದವನು. ಅಥವಾ ಉತ್ಪತ್ತಿಯನ್ನು ದಾಟಿದವನು. ಆದ್ದರಿಂದ ಅಮೃತಾಂಶೂದ್ಭವನು ಎಂದು ಚಿಂತನೆ ಮಾಡಬೇಕು.

★ ಅಮೃತಾಶ್ಚ ತೇ ಅಂಶವಶ್ಚ ಅಮೃತಾಂಶವಃ, ತೇ ಉದ್ಭವಂತಿ ಅಸ್ಮಾದಿತಿ ಅಮೃತಾಂಶೂದ್ಭವಃ = ಮರಣವಿಲ್ಲದ ನಿತ್ಯವಾದ ಮತ್ಸ್ಯ, ಕೂರ್ಮ, ರಾಮ, ಕೃಷ್ಣಾದಿ ಸ್ವರೂಪಭೂತವಾದ ಅಂಶಗಳನ್ನು ಪ್ರಕಟಗೊಳಿಸಿದ ಪದ್ಮನಾಭರೂಪವನ್ನು ಅಮೃತಾಂಶೂದ್ಭವ ಎಂದು ತಿಳಿಯಬಹುದು.

★ ಅಮೃತಂ ಅಂಶಯತಿ (ವಿಭಾಜಯತಿ) ಇತಿ ಅಮೃತಾಂಶುಃ = ಭಗವಂತನು ಧನ್ವಂತರಿರೂಪದಿಂದ ಅಮೃತವನ್ನು ತಂದನು. ಮೋಹಿನೀರೂಪದಿಂದ ಅದನ್ನು ದೈತ್ಯರಿಗೆ ದೊರಕದಂತೆ ವಿಭಾಗಗೊಳಿಸಿ, ದೇವ-ದಾನವರನ್ನು ಪ್ರತ್ಯೇಕ-ಪ್ರತ್ಯೇಕವಾಗಿ ಕೂಡಿಸಿ ದೇವತೆಗಳಿಗೆ ಮಾತ್ರ ದೊರಕುವಂತೆ ವಿಭಾಗ ಮಾಡಿ, ಅಮೃತವನ್ನು ದೇವತೆಗಳಿಗೆ ಉಣಿಸಿದನು. ಉದ್ಭವಃ = ಉತ್ ಎನ್ನುವದು ಭಗವಂತನ ಹೆಸರು. ಅವನು ಎಲ್ಲರಿಗಿಂತಲೂ ಸರ್ವದಾ ಉತ್ಕೃಷ್ಟನಾಗಿರುವದರಿಂದ ಈ ಹೆಸರು. ಶ್ರುತಿಯಲ್ಲಿ ''ತಸ್ಯ ಉದಿತಿ ನಾಮ'' ಎಂಬುದಾಗಿ ಹೇಳಿದ್ದಾರೆ. ಭವಃ = (ಭವತೀತಿ) ಎಲ್ಲೆಡೆಯಲ್ಲಿಯೂ ಇರುವವನು. ಆದ್ದರಿಂದ ಸರ್ವೋತ್ತಮನಾಗಿ ಇರುವವನಾದ್ದರಿಂದ ಉದ್ಭವ ಎಂದು ತಿಳಿಯಬೇಕು. ಈ ರೀತಿಯಾಗಿಯೂ ಪರಮಾತ್ಮನು ಅಮೃತಾಂಶೂದ್ಭವ ಎಂದು ಧ್ಯಾನಿಸಬೇಕು.

**289 ಭಾನುಃ –** ಭಾತಿ ಇತಿ ಭಾನುಃ = ಪ್ರಕಾಶಸ್ವರೂಪನಾದುದರಿಂದ ಭಗವಂತನು ಭಾನು. ಅಥವಾ ಭಾ ಇತಿ ನೂಯತೇ = ಪ್ರಕಾಶರೂಪನೆಂದು ಸ್ತುತಿಸಲ್ಪಡುವನು. ಅಗ್ನಿಸ್ಥಿತನಾದ ಅಗ್ನಿನಾಮಕನಾದ ಪರಮಾತ್ಮ ಈಗಿನ, ಹಿಂದಿನ, ಮುಂದಿನ ಎಲ್ಲ ಜ್ಞಾನಿಗಳಿಂದ ಪ್ರಕಾಶರೂಪನೆಂದು ಸ್ತುತಿಸಲ್ಪಡುವ ಕಾರಣದಿಂದ ಭಾನು ಎಂದು ತಿಳಿಯಬೇಕು. ಋಗ್ವೇದ ಪ್ರಾರಂಭದಲ್ಲಿಯೇ ಅಗ್ನಿಸೂಕ್ತದಲ್ಲಿ ''ಅಗ್ನಿಃ ಪೂರ್ವೇಭಿಃ ಋಷಿಭಿಃ ಈಡ್ಯೋ ನೂತನೈರುತ ।।'' ಎಂಬುದಾಗಿ ಹೇಳಲಾಗಿದೆ. ಶ್ರೀಮದಾಚಾರ್ಯರು ಋಗ್ಭಾಷ್ಯದಲ್ಲಿ ''ಸ ಪೂರ್ವೈಃ ನೂತನೈರೇಷ್ಯೈಃ ವಿಜ್ಞಾನಾದ್ ಋಷಿನಾಮಕೈಃ । ಈಡ್ಯೋ ದೇವಾದಿಭಿಃ ಸರ್ವೈಃ ...'' ಎಂಬುದಾಗಿ ವರ್ಣಿಸಿದ್ದಾರೆ. ಆದ್ದರಿಂದ ಭಗವಂತನು ಭಾನು.

★ ಭಾನ್ ಆ ನುದತೀತಿ ಭಾನುಃ = ಭಾ ಎಂದರೆ ಪ್ರಕಟಸ್ವರೂಪರಾದ ಜ್ಞಾನರೂಪರಾದ ಮುಕ್ತರು. ಅವರನ್ನು ಚೆನ್ನಾಗಿ ಪ್ರೇರಿಸುವನು. ಮುಕ್ತರಾದ ಚೇತನರು ಮುಕ್ತಿಯಲ್ಲಿ ಭಗವಂತನಿಂದ ಪ್ರೇರಿತರಾಗಿ ಎಲ್ಲ ಭೋಗಗಳನ್ನು ಅನುಭವಿಸುವರು.

**ಪ್ರೇರಿತೋ ವಿಷ್ಣುಲೋಕಂ ಚ ಪ್ರಾಪ್ಯ ಭೋಗಾನವಾಪ್ಯ ಚ ।**
**ಭುಂಕ್ತೇ ವಿಷ್ಣುಪ್ರಸಾದೇನ ನ ವಿಷ್ಣೋರವಶಃ ಕ್ವಚಿತ್ ।।**

ಎಂಬುದಾಗಿ ಇರುವದರಿಂದ ಮುಕ್ತರಿಗೆ ಪ್ರೇರಕನು ಪರಮಾತ್ಮನು. ಆದ್ದರಿಂದ ಭಾನು.

★ ಭಾ ಎಂದರೆ ಭೂಮಿ ಎಂದು ಅರ್ಥ. ಭಾಂ ನಯತೀತಿ ಭಾನುಃ = ಭೂಮಿಯನ್ನು ಬಲಿಚಕ್ರವರ್ತಿಯಿಂದ ಬೇಡಿ ದೇವತೆಗಳಿಗೆ ಕೊಟ್ಟ ತ್ರಿವಿಕ್ರಮನು ಭಾನು ಎಂದೂ ತಿಳಿಯಬಹುದು. ಹೀಗೆ ಅನೇಕಾರ್ಥಗಳನ್ನು ಚಿಂತಿಸಿ ಉಪಾಸನೆ ಮಾಡಬೇಕು.

# ಸನಾತನ ಸಂಸ್ಕಾರಗಳು-೨೩

✍ ಪಂ. ವೆಂಕಟೇಶಾಚಾರ್ಯ ಬಿ.ಆರ್

**ಉಡುದಾರ ಧಾರಣೆ**

ವಟುವಿನ ತಂದೆಯಾದವನು ಮುಂಜಾ ಹುಲ್ಲಿನಿಂದ ಅಥವಾ ದರ್ಭೆಯಿಂದ ಮಾಡಿದ ದಾರವನ್ನು (ಉಡುದಾರವನ್ನು) ವಟುವಿನ ಸೊಂಟಕ್ಕೆ ಮೂರು ಸುತ್ತು ಸುತ್ತಿ ನಾಭಿಯ ಹತ್ತಿರ ಮೂರು ಗಂಟುಗಳನ್ನು ಹಾಕಬೇಕು. ದಾರವನ್ನು ಮೂರು ಸುತ್ತು ಸುತ್ತಿ ಷಡಂಗಸಹಿತವಾದ ಮೂರು ವೇದಗಳ ಬಂಧನಕ್ಕೊಳಗಾಗಿ ನಾನು ಅವುಗಳಿಂದ ರಕ್ಷಿತನಾಗಿರುವೆನು. ಅವುಗಳ ಅಧ್ಯಯನ ನನ್ನ ಆದ್ಯ ಕರ್ತವ್ಯ ಎಂದು ವಟುವು ಚಿಂತಿಸಬೇಕು. ಆ ಸಂದರ್ಭದಲ್ಲಿ ವಟು ಈ ಮಂತ್ರಗಳನ್ನು ಹೇಳಬೇಕು.

**ಇಯಂ ದುರುಕ್ತಾತ್ ಪರಿಬಾಧಮಾನಾಚ್ಚರ್ಮವರೂಥಂ ಪುನತೀನ ಆಗಾತ್ । ಪ್ರಾಣಾಪಾನಾಭ್ಯಾಂ ಬಲಮಾರಭಂತೀ ಪ್ರಿಯಾ ದೇವಾನಾಂ ಸುಭಗಾ ಮೇಖಲೇಯಂ॥**

**ಋತಸ್ಯ ಗೋಪ್ತ್ರೀತಪಸಃ ಪರಸ್ವೀ ಘ್ನತೀ ರಕ್ಷಃ ಸಹಮಾನಾ ಅರಾತೀ । ಸಾನಃ ಸಮಂತಮನುಪರೇಹಿ ಭದ್ರಯಾ ಭರ್ತಾರಸ್ತೇ ಮೇಖಲೇ ಮಾರಿಷಾಮ ॥ (ಅಶ್ವ.ಗೃ.ಸೂ)**

ಅಪವಿತ್ರತೆಯನ್ನು ನಾಶಪಡಿಸಿ ನಮ್ಮ ಮನೆಗಳಿಗೆ ಉನ್ನತಿಯನ್ನು ತಂದುಕೊಡುವ ಮುಂಜಾ ಹುಲ್ಲಿನ ಉಡುದಾರವು (ಮೇಖಲೆಯು) ನಮಗೆ ಸಿಗಲಿ. ಈ ಉಡುದಾರವು ನಮ್ಮ ಪ್ರಾಣ ಅಪಾನಗಳ ಸಾಮರ್ಥ್ಯವನ್ನು ಬೆಳೆಸುತ್ತಾ ಸೌಭಾಗ್ಯದಾಯಕವಾಗಲಿ. ನಾವು ಮಾಡುವ ಜಪ-ತಪಗಳನ್ನು ಸಂರಕ್ಷಿಸುವ ಹಾಗೂ ರಾಕ್ಷಸಶಕ್ತಿಯನ್ನು ನಾಶಪಡಿಸುವ ಶತ್ರುನಾಶಕವಾದ ಈ ಉಡುದಾರವು ನನಗಾಗಲಿ.

ಹೇ ಉಡುದಾರವೇ ! ಮಂಗಲವನ್ನುಂಟುಮಾಡುವ ಆಪ್ತರಕ್ಷಕನಾದ ನಿನ್ನನ್ನು ಧರಿಸುತ್ತಿರುವೆ. ನಿನ್ನ ಸಾಮರ್ಥ್ಯದಿಂದ ನನಗೆಂದೂ ಪೀಡೆಯಾಗದಂತೆ ರಕ್ಷಿಸು.

**ದಂಡಪ್ರದಾನ ಃ ಸ್ವಸ್ತಿ ನೋ ಮಿಮೀತಾಮಶ್ವಿನಾ ಭಗಃ ಸ್ವಸ್ತಿ ದೇವ್ಯದಿತಿರನರ್ವಣಃ । ಸ್ವಸ್ತಿ ಪೂಷಾ ಅಸುರೋ ದಧಾತು ನಃ ಸ್ವಸ್ತಿ ದ್ಯಾವಾಪೃಥಿವೀ ಸುಚೇತುನಾ ।**

ಅಶ್ವಿನೀ ದೇವತೆಗಳು, ಅದಿತಿಯು, ಬಲದಾಯ, ಪೂಷನ್ ಹಾಗೂ ದ್ಯಾವಾಪೃಥಿವಿಗಳು ನಮ್ಮಿಬ್ಬರಿಗೆ ಕಲ್ಯಾಣವನ್ನುಂಟುಮಾಡಲಿ ಎಂದು ವಟುವಿನ ತಂದೆಯು ಅನುಸಂಧಾನ ಮಾಡುತ್ತಾ ಅವನ ಎತ್ತರಕ್ಕೆ ಸರಿದೂಗುವ ಅಶ್ವತ್ಥವೃಕ್ಷದ ದಂಡವನ್ನು ಆ ವಟುವಿಗೆ ಕೊಡಬೇಕು. ಆಗ ವಟುವು ತಾನು ಧರಿಸಿದ ದಂಡವನ್ನು ಹೀಗೆ ಪ್ರಾರ್ಥಿಸುತ್ತಾನೆ-

**ಆದಾಂತಂ ದಮಯಿತ್ವಾ ಮಾಂ ಮಾರ್ಗೇ ಸಂಸ್ಥಾಪಯನ್ ಸ್ವಯಮ್ ।**
**ದಂಡಃ ಕರೇ ಸ್ಥಿತೋ ಯಸ್ಮಾತ್ ತಸ್ಮಾದ್ರಕ್ಷ ಯತೋ ಭಯಮ್ ॥**

ಉನ್ಮತ್ತನಾಗಿ ತಪ್ಪು ದಾರಿಯಲ್ಲಿ ನಡೆಯುವ ನನಗೆ ಸರಿಯಾಗಿ ಶಿಕ್ಷೆಯನ್ನು ಕೊಟ್ಟು ನನ್ನನ್ನು ಸನ್ಮಾರ್ಗಕ್ಕೆ ಹಚ್ಚುವ ಎಲೈ ದಂಡವೇ ! ನಿನ್ನನ್ನು ನಾನು ಧರಿಸುವೆನು. ಯಾವುದೇ ರೀತಿಯಿಂದ ಭಯವುಂಟಾದರೂ ಅದನ್ನು ದೂರಮಾಡಿ ನನ್ನನ್ನು ರಕ್ಷಿಸು ಎಂದು.

**ಗುರೂಪದೇಶ**

ಗುರುವು ಶಿಷ್ಯನಾಗಿ ತನ್ನ ಹತ್ತಿರ ಬಂದ ವಟುವಿಗೆ ಬ್ರಹ್ಮಚರ್ಯನಿಯಮಗಳನ್ನು ಉಪದೇಶ ಮಾಡುತ್ತಾನೆ -

ಬ್ರಹ್ಮಚಾರ್ಯಸಿ । ಅಪೋಶಾನ । ಆಚಮನಂ ಕುರು । (ಮೂತ್ರಪುರೀಷಾದೌ ಶುದ್ಧ್ಯರ್ಥಮಿತ್ಯರ್ಥಃ ।) ಕರ್ಮ ಕುರು । (ಸಂಧ್ಯೋಪಾಸನಾದೀತ್ಯರ್ಥಃ ।) ದಿವಾ ಮಾ ಸ್ವಾಪ್ಸೀಃ । ಆಚಾರ್ಯಾಧೀನೋ ವೇದಮಧೀಷ್ವ । ಸಾಯಂ ಪ್ರಾತರ್ಭಿಕ್ಷೇಥಾಃ । ಪ್ರಾತಃ ಸಮಿಧಮಾಧೇಹಿ । ದ್ವಾದಶವರ್ಷಾಣಿ ವೇದಗ್ರಹಣಾಂತಂ ವಾ ಬ್ರಹ್ಮಚರ್ಯಂ ಚರ । ಪ್ರೈಷಾರ್ಥಾನ್ ಬೋಧಯೇತ್ । ಆಚಾರ್ಯಾಧೀನೋ ಭವಾನ್ಯತ್ರಾಧರ್ಮಾಚರಣಾತ್ । ಕ್ರೋಧಾನೃತೇ ವರ್ಜಯ । ಮೈಥುನಂ ವರ್ಜಯ । ಉಪರಿಶಯ್ಯಾಂ ವರ್ಜಯ । ಕೌಶೀಲವಗಂಧಾಂಜನಾನಿ ವರ್ಜಯ । ಅತ್ಯಂತಂ ಸ್ನಾನಂ ಭೋಜನಂ ನಿದ್ರಾಂ ಜಾಗರಣಂ ನಿಂದಾಲೋಭಮೋಹಭಯಶೋಕಾನ್ ವರ್ಜಯ । ಪ್ರತಿದಿನಂ ರಾತ್ರೇಃ ಪಶ್ಚಿಮಯಾಮೇ ಚೋತ್ಥಾಯಾವಶ್ಯಕಂ ಕೃತ್ವಾ ದಂತಧಾವನ- ಸ್ನಾನ-ಸಂಧ್ಯೋಪಾಸನ-ಈಶ್ವರಸ್ತುತಿ-ಪ್ರಾರ್ಥನೋಪಾಸನಾ-ಯೋಗಾಭ್ಯಾಸಾನ್ನಿತ್ಯಂ ಆಚರ । ಕ್ಷುರಕೃತ್ಯಂ ವರ್ಜಯ । ಮಧುಮಾಂಸಂ ವರ್ಜಯ । ಗವಾಶ್ವಹಸ್ತ್ಯುಷ್ಟ್ರಾದಿಯಾನಂ ವರ್ಜಯ । ಅಂತಃ ಗ್ರಾಮನಿವಾಸೋಪಾನಹಛತ್ರಧಾರಣಂ ವರ್ಜಯ । ತೈಲಾಭ್ಯಂಗಮರ್ದನಾತ್ಯಮ್ಲಾನಿತಿಕ್ತಕಷಾಯಕ್ಷಾರರೇಚನದ್ರವ್ಯಾಣಿ ಮಾ ಸೇವಸ್ವ । ನಿತ್ಯಂ ಯುಕ್ತಾಹಾರವಿಹಾರವಾನ್ ವಿದ್ಯೋಪಾರ್ಜನೇ ಚ ಯತ್ನವಾನ್ ಭವ । ಸುಶೀಲೋ ಮಿತಭಾಷೀ ಸಭ್ಯೋ ಭವ । ಮೇಖಲಾ-ದಂಡಧಾರಣ-ಭೈಕ್ಷ್ಯಚರ್ಯ-ಸಮಿಧಾನೋದಕೋಪಸ್ಪರ್ಶಾಃ ಅಭಿವಾದಾ ಇತ್ಥಂ ತೇ ನಿತ್ಯಧರ್ಮಾಃ ।

ನೀನು ಇಂದಿನಿಂದ ಬ್ರಹ್ಮಚಾರಿಯಾಗಿದ್ದಿ. (ಆದಿತ್ಯರು ವಸುಗಳು ಏಕಾದಶರುದ್ರರು ವಾಯು ಅಗ್ನಿ ಮತ್ತು ಯಮಧರ್ಮ ಈ ಎಲ್ಲ ದೇವತೆಗಳು ಬ್ರಾಹ್ಮಣನ ಬಲಗಿವಿಯಲ್ಲಿ ಯಾವಾಗಲೂ ಇರುತ್ತಾರೆ. ಕಾರಣ ಮಲ-ಮೂತ್ರವಿಸರ್ಜನಾದಿ ಅಪವಿತ್ರ ಕಾರ್ಯಗಳನ್ನು ಮಾಡುವ ಸಂದರ್ಭದಲ್ಲಿ ಯಜ್ಞೋಪವೀತವು ಬಲಗಿವಿಯ ಮೇಲೆ ಇರಲಿ.) ಮಲಮೂತ್ರವಿಸರ್ಜನೆ ಮಾಡಿದ ಮೇಲೆ ಕೈ ಕಾಲುಗಳನ್ನು ತೊಳೆದುಕೊಂಡು ಆಚಮನ ಮಾಡು. ಭೋಜನದ ಆರಂಭದಲ್ಲಿ ಹಾಗೂ ಕೊನೆಯಲ್ಲಿ ಆಪೋಶನವನ್ನು

ತೆಗೆದುಕೋ. ಸಂಧ್ಯಾವಂದನೆ ಅಗ್ನಿಕಾರ್ಯ ಅಧ್ಯಯನಾದಿಗಳನ್ನು ತಪ್ಪದೇ ಮಾಡು. ಹಗಲಿನಲ್ಲಿ ಮಲಗಬೇಡ. ಗುರುವಿನ ಅಧೀನದಲ್ಲಿದ್ದು ವೇದಾಭ್ಯಾಸ ಮಾಡು. ಬೆಳಿಗ್ಗೆ ಹಾಗೂ ಸಾಯಂಕಾಲ ಭಿಕ್ಷೆಯನ್ನು ಬೇಡಿ ಗುರುಗಳಿಗೆ ತಂದು ಒಪ್ಪಿಸು. ಸಮಿಧೆಗಳನ್ನು ಸಂಗ್ರಹಿಸಿ ಕೊಂಡುಬಾ. 12 ವರ್ಷಗಳವರೆಗೆ ಅಥವಾ ಗುರುಕುಲದ ಅಧ್ಯಯನವು ಮುಗಿಯುವವರೆಗೆ ಬ್ರಹ್ಮಚರ್ಯವ್ರತವನ್ನು ಪಾಲಿಸು. ಅಧರ್ಮಕಾರ್ಯಗಳನ್ನು ಬಿಟ್ಟು ಉಳಿದ ಎಲ್ಲ ಕಾರ್ಯಗಳಲ್ಲಿಯೂ ಗುರುವಿನ ಅಧೀನನಾಗಿರು. ಸಿಟ್ಟು ಮತ್ತು ಅನೃತಗಳನ್ನು ವರ್ಜಿಸು. ಸ್ತ್ರೀಸಂಗವನ್ನು ವರ್ಜಿಸು. ಗುರುಹಿರಿಯರಿಗಿಂತ ಎತ್ತರದ ಆಸನವನ್ನು ಶಯ್ಯೆಯನ್ನು ವರ್ಜಿಸು. ಕಲಾವಿಲಾಸಗಳನ್ನೂ ಸುಗಂಧಾದಿವಿಲಾಸೀ ವಸ್ತುಗಳನ್ನು ತ್ಯಜಿಸು. ಸ್ನಾನ ಊಟ ನಿದ್ದೆ ಜಾಗರಣೆ ನಿಂದೆ ಲೋಭ ಮೋಹ ಭಯ ದುಃಖ ಇತ್ಯಾದಿಗಳನ್ನು ಅತಿಶಯವಾಗಿ ಮಾಡಬೇಡ. ರಾತ್ರಿಯ ಕೊನೆಯ ಜಾವದಲ್ಲಿ ಎದ್ದು ಪ್ರತಿದಿನವೂ ದಂತಧಾವನದಿಂದ ಮೊದಲುಗೊಂಡು ಎಲ್ಲ ಕರ್ಮಗಳನ್ನು ತಪ್ಪದೇ ಮಾಡು. ಕ್ಷೌರವನ್ನು ವರ್ಜಿಸು. ಮದ್ಯ-ಮಾಂಸಗಳನ್ನು ತ್ಯಜಿಸು. ಎತ್ತು ಕುದುರೆ ಒಂಟೆ ಮುಂತಾದವುಗಳಲ್ಲಿ ಯಾನಯನ್ನು ಮಾಡಬೇಡ. ಗ್ರಾಮದಲ್ಲಿ ಸಂಚರಿಸುವಾಗ ಪಾದರಕ್ಷೆ ಮತ್ತು ಛತ್ರಗಳನ್ನು ಉಪಯೋಗಿಸಬೇಡ. ಎಣ್ಣೆ ಹಚ್ಚಿಕೊಂಡು ಸ್ನಾನ, ಮರ್ದನ ಮಾಡಿಸಿಕೊಳ್ಳುವುದನ್ನು ತ್ಯಜಿಸು. ಹುಳಿ ಖಾರ ಉಪ್ಪು ಇತ್ಯಾದಿಗಳನ್ನು ಅತಿಯಾಗಿ ಸೇವಿಸಬೇಡ. ಮಿತವಾದ ಆಹಾರ ವಿಹಾರಗಳಿದ್ದು ನಿತ್ಯವೂ ವಿದ್ಯೆಯಲ್ಲಿ ಆಸಕ್ತನಾಗಿರು. ಉತ್ತಮ ಗುಣನಡತೆಯುಳ್ಳವನು, ಮಿತಭಾಷಿಯೂ, ಸಭ್ಯನೂ ಆಗಿರು. ಉಡುದಾರ, ದಂಡಗಳನ್ನು ತಪ್ಪದೇ ಧರಿಸು. ಭಿಕ್ಷೆ ಅಗ್ನಿಕಾರ್ಯ ಅಭಿವಾದನಾದಿಗಳನ್ನು ತಪ್ಪದೇ ಮಾಡು. ಕೊಡುವದಿಲ್ಲ ಎಂದು ಯಾರು ಹೇಳುವುದಿಲ್ಲ ಅಂತಹ ಸ್ತ್ರೀ-ಪುರುಷರ ಹತ್ತಿರ ಮಾತ್ರ ಭಿಕ್ಷೆಯನ್ನು ಬೇಡು.

...ಸಶೇಷ...

## ಮಣ್ಣೂರಿನಲ್ಲಿ ಶ್ರೀಮಾಧವತೀರ್ಥರ ಆರಾಧನೆ 23,24,25-9-2014

ಭಾದ್ರಪದ ಅಮಾವಾಸ್ಯೆಯಂದು ಶ್ರೀಮದಾಚಾರ್ಯರ ಸಾಕ್ಷಾತ್ ಶಿಷ್ಯರಾದ ಮಹಾಜ್ಞಾನಿಗಳಾದ ತಪೋನಿಧಿಗಳಾದ ಶ್ರೀಮದುತ್ತರಾದಿಮಠದ ದಿವ್ಯ ಪೀಠವನ್ನು ಅಲಂಕರಿಸಿದ ಶ್ರೀ ಶ್ರೀ ಮಾಧವತೀರ್ಥರ ಆರಾಧನೆಯು ಅವರ ಮೂಲವೃಂದಾವನ ಸ್ಥಳವಾದ ಮಣ್ಣೂರಿನಲ್ಲಿ ಶ್ರೀಉತ್ತರಾದಿಮಠದ ವತಿಯಿಂದ ವೈಭವೋಪೇತವಾಗಿ ಜರುಗಿತು. ಶ್ರೀ ಶ್ರೀಸತ್ಯಾತ್ಮತೀರ್ಥಶ್ರೀಪಾದಂಗಳವರ ಆದೇಶ ಹಾಗೂ ಆಜ್ಞೆಯಂತೆ ಮಣ್ಣೂರಿನ ವೇದೇಶತೀರ್ಥ ವಿದ್ಯಾಪೀಠದ ಕುಲಪತಿಗಳಾದ ಪಂ. ಅನಂತಾಚಾರ್ಯ ಅಕಮಂಚಿ ಇವರ ನೇತೃತ್ವದಲ್ಲಿ ಎಲ್ಲ ಕಾರ್ಯಕ್ರಮಗಳು ಜರುಗಿದವು. 3 ದಿನಗಳಲ್ಲಿ ಪಂಚಾಮೃತ ಹಸ್ತೋದಕ, ಅಲಂಕಾರ, ವಿದ್ಯಾರ್ಥಿಗಳ ಅನುವಾದ, ವಿದ್ವಾಂಸರ ಅನುವಾದ, ಉಪನ್ಯಾಸ, ತೀರ್ಥಪ್ರಸಾದಗಳು ಜರುಗಿದವು. ಮಣ್ಣೂರು ಹಾಗೂ ಸುತ್ತಮುತ್ತಲಿನ ಪ್ರದೇಶದ ಭಕ್ತರು ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸಿ ಧನ್ಯರಾದರು.

# ಮಹಾಭಾರತದ ಉಪಕಥೆಗಳು

✍ ಪಂ. ಪುರಂದರಾಚಾರ್ಯ ಹಯಗ್ರೀವ

**ಋತುಪರ್ಣನ ನಗರದಲ್ಲಿ ಅಶ್ವಾಧ್ಯಕ್ಷನಾಗಿ ನಳ ಮಹರಾಜ**

ಕರ್ಕೋಟಕ ನಾಗನು ಅಂತರ್ಹಿತನಾಗಲು ನಿಷಧಾಧಿಪನಾದ ನಳನು ಹತ್ತನೆಯದಿನದಲ್ಲಿ ಋತುಪರ್ಣನ ನಗರವನ್ನು ಪ್ರವೇಶಿಸಿದನು. ನಳನು ಋತುಪರ್ಣನ ಎದುರಿನಲ್ಲಿ ತನ್ನನ್ನು ಬಾಹುಕ ಎಂಬ ಹೆಸರಿನವನು ಎಂದು ಪರಿಚಯಿಸಿಕೊಂಡನು.

ಬಾಹುಕನು (ನಳನು) ಃ- ಅಶ್ವವಿದ್ಯೆಯಲ್ಲಿ ನನಗೆ ಸಮರು ಈ ಭೂಮಿಯಲ್ಲಿ ಯಾರೂ ಇಲ್ಲ. ಶಿಲ್ಪಕಲೆ, ಪಾಕಶಾಸ್ತ್ರಗಳಲ್ಲೂ ನಾನು ನಿಪುಣನಾಗಿದ್ದೇನೆ. ನನಗೆ ಇನ್ನಿತರ ದುಷ್ಕರ ವಿದ್ಯೆಗಳೂ ಗೊತ್ತು. ಆರ್ಥಿಕವಾಗಿ ಕಷ್ಟದಲ್ಲಿರುವ ನನಗೆ ಆಶ್ರಯವನ್ನು ಕೊಟ್ಟು ಜೀವನಕ್ಕೆ ದಾರಿ ಮಾಡಿಕೊಡಬೇಕೆಂದು ಬೇಡುವೆನು.

ಋತುಪರ್ಣ ಃ- ಬಾಹುಕನೇ ! ನಿನಗೆ ಒಳ್ಳೆಯದಾಗಲಿ. ನನ್ನ ಆಶ್ರಯದಲ್ಲಿ ಇರಬಹುದು. ವೇಗದ ಪ್ರಯಾಣವೆಂದರೆ ನನಗೆ ಬಹಳ ಇಷ್ಟ. ಅತೀ ವೇಗದಲ್ಲಿ ಸಂಚರಿಸುವ ಸಾಮರ್ಥ್ಯವುಳ್ಳವುಗಳನ್ನಾಗಿ ನಮ್ಮ ಕುದುರೆಗಳನ್ನು ಸಿದ್ಧಪಡಿಸು. ಸಮಯ ಬಂದಾಗ ರುಚಿಕಟ್ಟಾದ ಅಡುಗೆಯನ್ನು ಮಾಡಿ ನಮ್ಮನ್ನು ಸಂತೋಷಪಡಿಸು. ಹತ್ತು ಸಾವಿರ ವರಾಹ ವಾರ್ಷಿಕ ವೇತನವನ್ನು ನಿನಗೆ ಕೊಡುತ್ತೇನೆ. ವಾರ್ಷ್ಣೇಯ ಮತ್ತು ಜೀವಲರು ನಿನ್ನ ಜೊತೆಗೆ ಇದ್ದು ನಿನಗೆ ಅನುಕೂಲರಾಗಿರುತ್ತಾರೆ.

ಋತುಪರ್ಣನ ಮಾತಿನಂತೆ ನಳನು, ವಾರ್ಷ್ಣೇಯ ಮತ್ತು ಜೀವಲರ ಜೊತೆಯಲ್ಲಿ ವಾಸಿಸುತ್ತಿದ್ದನು. ದಮಯಂತಿಯ ಚಿಂತೆಯು ಅವನನ್ನು ಸರ್ವದಾ ಕಾಡುತ್ತಿದ್ದಿತು. ಪ್ರತೀದಿನ ಸಂಜೆಯ ಹೊತ್ತಿನಲ್ಲಿ ಈ ಶ್ಲೋಕವನ್ನು ಹೇಳಿಕೊಳ್ಳುತ್ತಿದ್ದನು.

**ಕ್ವ ನು ಸಾ ಕ್ಷುತ್ಪಿಪಾಸಾರ್ತಾ ಶ್ರಾಂತಾ ಶೇತೇ ತಪಸ್ವಿನೀ ।**
**ಸ್ಮರಂತೀ ತಸ್ಯ ಮಂದಸ್ಯ ಕಂ ವಾ ಸಾದ್ಯೋಪತಿಷ್ಠತಿ ॥**

(ಹಸಿವು-ಬಾಯಾರಿಕೆಗಳಿಂದ ಬಳಲಿದ ಅವಳು, ಮಂದಬುದ್ಧಿಯ ಅವನನ್ನು ಸ್ಮರಿಸುತ್ತಾ ಈಗ ಎಲ್ಲಿರುವಳು ?)

ಒಂದು ದಿನ ರಾತ್ರಿಕಾಲದಲ್ಲಿ ಹೀಗೆಯೇ ಹೇಳಿಕೊಳ್ಳುತ್ತಿರುವಾಗ

ಜೀವಲನು - ಬಾಹುಕನೇ ! ಪ್ರತಿದಿನವೂ ಯಾವ ಸ್ತ್ರೀಗಾಗಿ ಶೋಕಿಸುವಿ ? ಅವಳು ಯಾರಿಗೆ ಸೇರಿದವಳು ? ನಾನು ಅದನ್ನು ತಿಳಿಯಬಹುದೇ?

ಬಾಹುಕ - ಅಲ್ಪಬುದ್ಧಿಯ ಪುರುಷನೊಬ್ಬನ ಪತ್ನಿ ಅವಳು. ಆದರೆ ಅವಳಿಗೆ ಅವನ ಮೇಲೆ ಅಪಾರವಾದ ಪ್ರೀತಿ ಇತ್ತು. ಅವನು ಅವಳಿಗೆ ಮಾತುಕೊಟ್ಟಂತೆ ನಡೆದುಕೊಳ್ಳಲು ಆಗಲಿಲ್ಲ. ಆ ಭಾಗ್ಯಹೀನಪುರುಷನು ಯಾವುದೋ ಕಾರಣಕ್ಕಾಗಿ ಅವಳಿಂದ ಬೇರ್ಪಟ್ಟು ಹಗಲು-ರಾತ್ರಿ ವಿರಹಾಗ್ನಿತಾಪದಿಂದ ದಗ್ಧನಾಗಿ ಕಂಡಕಂಡಲ್ಲಿ ತಿರುಗಾಡಾತ್ತಿರುವನು. ಅವಳೋ ಮಹಾಪತಿವ್ರತೆ. ಸಂಕಟಕಾಲದಲ್ಲಿ ಆ ಪುರುಷನನ್ನು ಅನುಸರಿಸಿ ಅರಣ್ಯ ಸೇರಿದಳು. ಆದರೆ ಆ ಮಂದಪುರುಷನು ತನ್ನನ್ನು ನಂಬಿ ಬಂದ ಆ ಸ್ತ್ರೀಯನ್ನು ಭಯಾನಕವಾದ ಅರಣ್ಯದಲ್ಲಿಯೇ ಬಿಟ್ಟು ಹೋದನು. ಅವಳು ಒಬ್ಬಳೇ ಆದಳು. ಎಲ್ಲಿಗೆ ಹೋಗಬೇಕೆಂಬುದನ್ನೂ ಅರಿಯದವಳು. ಅವಳೇನಾದರೂ ಈಗ ಬದುಕಿದ್ದರೆ ದುಃಖದ ಸರಮಾಲೆಯನ್ನೇ ಎದುರಿಸುತ್ತಿರಬಹುದು.

ಹೀಗೆ ನಳನು ದಮಯಂತಿಯನ್ನು ಸ್ಮರಿಸುತ್ತಾ ಋತುಪರ್ಣನ ನಗರದಲ್ಲಿ ಯಾರಿಗೂ ಗೊತ್ತಾಗದಂತೆ ವಾಸಿಸುತ್ತಿದ್ದನು.

**ವಿದರ್ಭದೇಶದ ಬ್ರಾಹ್ಮಣರಿಂದ ನಳ – ದಮಯಂತಿಯರ ಹುಡುಕಾಟ**

ರಾಜ್ಯವನ್ನು ಕಳೆದುಕೊಂಡ ನಳನು ಪತ್ನೀಸಮೇತನಾಗಿ ವನಪ್ರವೇಶ ಮಾಡಿರುವುದನ್ನು ತಿಳಿದ ವಿದರ್ಭರಾಜ ಭೀಮನು ನಳ-ದಮಯಂತಿಯರನ್ನು ಹುಡುಕುವುದಕ್ಕಾಗಿ ಬಹುಮಾನರೂಪವಾಗಿ ಬ್ರಾಹ್ಮಣರಿಗೆ ಹಣವನ್ನು ಕೊಟ್ಟು ಕಳುಹಿಸಿದನು. ನಳ-ದಮಯಂತಿಯರನ್ನು ಹುಡುಕಿ, ಕರೆದುಕೊಂಡುಬಂದವರಿಗೆ ಒಂದು ಸಾವಿರ ಗೋವುಗಳನ್ನು ಮತ್ತು ನಗರದಲ್ಲಿರುವ ಎಲ್ಲ ಸೌಕರ್ಯಗಳನ್ನು ಹೊಂದಿರುವ ಅನೇಕ ಅಗ್ರಹಾರಗಳನ್ನು ಕೊಡುವುದಾಗಿ ಘೋಷಿಸಿದನು. ಅಥವಾ ಎಲ್ಲಿ ಇದ್ದಾರೆ ಎಂದು ಇಷ್ಟುಮಾತ್ರ ಹೇಳಿದವರಿಗೆ ಒಂದು ಸಾವಿರ ಗೋವುಗಳನ್ನು ಕೊಡುತ್ತೇನೆ ಎಂದನು.

ಭೀಮರಾಜನ ಮಾತಿನಂತೆ ನಳ-ದಮಯಂತಿಯರನ್ನು ಹುಡುಕಲು ಹೊರಟ ಬ್ರಾಹ್ಮಣರಲ್ಲಿ ಸುದೇವ ಎಂಬ ಹೆಸರಿನ ಬ್ರಾಹ್ಮಣ ಚೇದಿಪುರಕ್ಕೆ ಹೋದನು. ಸುದೇವನು ಅರಮನೆಯಲ್ಲಿ ರಾಜನು ಪುಣ್ಯಾಹಕರ್ಮದಲ್ಲಿ ಆಸಕ್ತನಾಗಿದ್ದಾಗ ಸುನಂದಾಸಹಿತಳಾಗಿ ಅಲ್ಲಿಯೇ ನಿಂತಿದ್ದ ದಮಯಂತಿಯನ್ನು ಕಂಡನು. ಧೂಮಜಾಲದಿಂದ ತನ್ನ ಕಾಂತಿಯನ್ನು ಕಳೆದುಕೊಂಡ ಅಗ್ನಿಯಂತೆ ಕಂಗೊಳಿಸುತ್ತಿದ್ದ ದಮಯಂತಿಯನ್ನು ಗುರುತುಹಿಡಿಯಲು ಸುದೇವನಿಗೆ ಕಷ್ಟವಾಗಲಿಲ್ಲ. ತಾನು ಬಂದ ಕೆಲಸವು ಸಿದ್ಧಿಸಿತು ಎಂದುಕೊಂಡನು. ನಂತರ ದಮಯಂತಿಯ ಬಳಿಗೆ ಹೋಗಿ ತನ್ನ ಪರಿಚಯವನ್ನು ಮಾಡಿಕೊಂಡನು.

ಸುದೇವ - ವೈದರ್ಭೀ ! ನಾನು ನಿನ್ನ ಸಹೋದರನ ಸ್ನೇಹಿತ ಸುದೇವ. ಮಹಾರಾಜ ಭೀಮನ ಆದೇಶದಂತೆ ನಿನ್ನನ್ನು ಹುಡುಕಲು ಬಂದಿರುವೆನು. ನಿನ್ನ ತಂದೆ-ತಾಯಿ, ಸಹೋದರ ಎಲ್ಲರೂ ಕುಶಲವಾಗಿರುವರು. ಕುಂಡಿನಪುರದಲ್ಲಿ ನಿನ್ನ

ಮಕ್ಕಳೂ ಸಹ ಕುಶಲವಾಗಿರುವರು. ನೂರಾರು ಬ್ರಾಹ್ಮಣರು ನಿನ್ನನ್ನು ಹುಡುಕುತ್ತಿರುವರು. ಬಂಧುವರ್ಗ ನಿನಗಾಗಿ ಶೋಕಿಸುತ್ತಿರುವುದು.

ದಮಯಂತಿಗೆ ಸುದೇವನ ಗುರುತು ಸಿಕ್ಕಿತು. ತನ್ನನ್ನು ಹುಡುಕಲು ಬಂದಿರುವ ಸುದೇವನನ್ನು ನೋಡಿ ದಮಯಂತಿಗೆ ದುಃಖವು ಉಮ್ಮಳಿಸಿ ಬಂತು. ಕಷ್ಟದಲ್ಲಿರುವವರಿಗೆ ಆತ್ಮೀಯರ ದರ್ಶನ, ಅದರಲ್ಲಿಯೂ ತವರು ಮನೆಕಡೆಯಿಂದ ಬಂದವರ ಭೇಟಿ ದುಃಖವನ್ನು ಇಮ್ಮಡಿಗೊಳಿಸುತ್ತದೆಯಷ್ಟೆ. ! ನಂತರ ಸಾವರಿಸಿಕೊಂಡು ದಮಯಂತಿಯು ತನ್ನ ಬಂಧುಗಳ ಕುಶಲವನ್ನು ವಿಚಾರಿಸಿದಳು.

ಸುದೇವ-ದಮಯಂತಿಯರು ಮಾತನಾಡುತ್ತಿರುವುದನ್ನು ಕಂಡ ಸುನಂದಾ ತನ್ನ ತಾಯಿಯ ಮುಂದೆ ಹೇಳಿದಳು.

ಸುನಂದಾ - ಅಮ್ಮ ! ಸೈರಂಧ್ರಿಯು ಒಬ್ಬ ಬ್ರಾಹ್ಮಣನ ಜೊತೆಯಲ್ಲಿ ಮಾತನಾಡುತ್ತಿದ್ದಳು. ಅವಳು ಬಹಳ ರೋದಿಸುತ್ತಿದ್ದಳು.

ನೀನು ಇಷ್ಟಪಟ್ಟಲ್ಲಿ ಅವಳನ್ನು ಕರೆದು ಕಾರಣವನ್ನು ವಿಚಾರಿಸಬಹುದು.

ಸುನಂದೆಯ ಮಾತಿನಂತೆ ಚೇದಿರಾಜನ ತಾಯಿಯು ಸುದೇವ-ದಮಯಂತಿಯರ ಬಳಿಗೆ ಬಂದು ಸುದೇವನನ್ನು ಕೇಳಿದಳು.

ರಾಜಮಾತೆ - ವಿಪ್ರೋತ್ತಮನೇ ! ನಿನ್ನೊಂದಿಗೆ ಇವಳು ಇಷ್ಟು ಸಲಿಗೆಯಿಂದ ಮಾತನಾಡುತ್ತಿರುವುದನ್ನು ಕಂಡರೆ, ಇವಳ ಪರಿಚಯ ನಿನಗೆ ಇರುವಂತೆ ತೋರುತ್ತದೆ. ಇವಳು ಯಾರು ? ಇವಳ ತಂದೆ ಯಾರು ? ಅಥವಾ ಇವಳ ಪತಿ ಯಾರು ? ಏತಕ್ಕಾಗಿ ಬಂಧುಗಳಿಂದ ಬೇರೆಯಾಗಿರುವಳು ? ಯಾಕಾಗಿ ಈ ಕಷ್ಟವನ್ನು ಅನುಭವಿಸುತ್ತಿರುವಳು ? ದೇವತೆಯಂತೆ ತೋರುವ ಈ ಸಾಧ್ವಿಯ ಎಲ್ಲ ವಿಷಯಗಳನ್ನು ಯಥಾರ್ಥವಾಗಿ ತಿಳಿಸು.

*...ಸಶೇಷ....*



## ಅಭಿನಂದನೆ

ಶ್ರೀ ಹರಿವಾಯುಗುರುಗಳ ಹಾಗೂ ಶ್ರೀಮದುತ್ತರಾದಿಮಠಾಧೀಶರಾದ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ಪರಮಾನುಗ್ರಹದಿಂದ ಕುಮಾರಿ **ಶೃತಿ ವಿಜಯೀಂದ್ರ, ರಾಯದುರ್ಗ** ಬೆಂಗಳೂರು ಇವರು ಬಿ.ಇ. ಕಂಪ್ಯೂಟರ್ ವಿಜ್ಞಾನ ವಿಭಾಗದಲ್ಲಿ ಎಂ.ಎಸ್.ರಾಮಯ್ಯ ತಾಂತ್ರಿಕವಿದ್ಯಾಲಯದಿಂದ **ಪ್ರಥಮ ರ್‍ಯಾಂಕ್ ಹಾಗೂ ಚಿನ್ನದ ಪದಕವನ್ನು** ಪಡೆದಿದ್ದಾರೆ. ಈ ವಿದ್ಯಾರ್ಥಿನಿಗೆ ಶ್ರೀಸುಧಾ ಬಳಗದ ಅಭಿನಂದನೆಗಳು.

-ಸಂಪಾದಕರು

ಕ್ಯಾಲೇಂಡರ್

ಕ್ಯಾಲೇಂಡರ್

॥ ಶ್ರೀ ದಿಗ್ವಿಜಯರಾಮೋ ವಿಜಯತೇ ॥

ಜಗದ್ಗುರು ಶ್ರೀಮನ್ಮಧ್ವಾಚಾರ್ಯಮೂಲಮಹಾಸಂಸ್ಥಾನ ಶ್ರೀಉತ್ತರಾದಿಮಠ

ಪರಮಪೂಜ್ಯ ಶ್ರೀ ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ದಿವ್ಯ ಅಧ್ಯಕ್ಷತೆಯಲ್ಲಿ

## 110 ನೇ ಶ್ರೀಮಧ್ವಸಿದ್ಧಾಂತ ಅಭಿವೃದ್ಧಿಕಾರಿಣೀ ಸಭಾ

## ಶ್ರೀ ಶ್ರೀಸತ್ಯಪ್ರಮೋದತೀರ್ಥರ

## ೧೭ ನೆಯ ಮಹಾಸಮಾರಾಧನಾ ಅಂಗವಾಗಿ

## 3 ನೆಯ ಪಾದುಕಾ ಮಹಾಸಮಾರಾಧನಾ

## ವಿಶ್ವಮಧ್ವಮಹಾಪರಿಷತ್ ಅಧಿವೇಶನ

# ಆಹ್ವಾನ ಪತ್ರಿಕಾ

**ದಿನಾಂಕ : 08, 09, 10 ನವೆಂಬರ್ 2014**

**ಸ್ಥಳ : ಶ್ರೀಸತ್ಯಪ್ರಮೋದನಗರ, ಉತ್ತರಾದಿಮಠ, ಆರ್. ಪಿ. ಜೋಶಿ ಬಡಾವಣೆ, ಲೋಕಾಪುರ ರಸ್ತೆ , ಮುಧೋಳ**

ಸಂಪರ್ಕಿಸಿ : 9448119165, 8762249388, 9945120260,

## ಸರ್ವರಿಗೂ ಆದರದ ಸ್ವಾಗತ

## ಶ್ರಾದ್ಧ ನೂರಾರು ಪ್ರಶ್ನೆಗಳು - ೨೧

✍ ಸಂಗ್ರಹ : ಪಂ. ವಾದಿರಾಜಾಚಾರ್ಯ ಕರಣಮ್

**೮೫. ಅಣ್ಣ ಮಾತ್ರ ಶ್ರಾದ್ಧ ಮಾಡಿದರೆ ತಮ್ಮನ ಕರ್ತವ್ಯ ಹೇಗೆ ಪೂರ್ಣವಾಗುತ್ತದೆ?**

ನಿರ್ಣಯಸಿಂಧು ಮುಂತಾದ ಗ್ರಂಥಗಳಲ್ಲಿ ಈ ವಿಷಯವನ್ನು ಪ್ರಮಾಣಗಳ ಮೂಲಕ ಹೀಗೆ ಪ್ರತಿಪಾದಿಸಿದ್ದಾರೆ.

**ಮರೀಚಿಃ- ಬಹವಃ ಸ್ಯುರ್ಯದಾ ಪುತ್ರಾಃ ಪಿತುರೇಕತ್ರ ವಾಸಿನಃ ।**
**ಸರ್ವೇಷಾಂ ತು ಮತಂ ಕೃತ್ವಾ ಜ್ಯೇಷ್ಠೇನೈವ ತು ಯತ್ಕೃತಮ್ ।**
**ದ್ರವ್ಯೇಣ ಚಾಽವಿಭಕ್ತೇನ ಸರ್ವೈರೇವ ಕೃತಂ ಭವೇತ್ ॥**

**ಜ್ಯೇಷ್ಠಸ್ಯ ಕರ್ತೃತ್ವೇಽಪಿ ಸರ್ವೇ ಫಲಭಾಗಿನಃ ಇತ್ಯರ್ಥಃ । ತೇನ ಯೇ ಬ್ರಹ್ಮಚರ್ಯಪರಾನ್ನವರ್ಜನಾದಯಃ ಫಲಿಸಂಸ್ಕಾರಾಃ ತೇ ಸರ್ವೇಷಾಂ ಭವಂತೀತಿ ಸಿದ್ಧಮ್ ।**

ಅನೇಕ ಜನ ಮಕ್ಕಳು ಒಂದೇ ಕಡೆ ಅವಿಭಕ್ತರಾಗಿ ಇರುತ್ತಾರೆ. ಅವರಲ್ಲಿ ಹಿರಿಯನಾದವನು ಶ್ರಾದ್ಧದಲ್ಲಿಯ ಪ್ರಧಾನವಾದ ಎಲ್ಲ ಕ್ರಿಯೆಗಳನ್ನು ಮಾಡಬೇಕು. ಆ ಶ್ರಾದ್ಧದಲ್ಲಿ ಅಣ್ಣನು ಹಣವನ್ನು ಖರ್ಚು ಮಾಡಿ ಶ್ರಾದ್ಧವನ್ನು ಮಾಡಿದರೆ ಸಾಕು. ಪ್ರತಿಯೊಬ್ಬರೂ ಹಣವನ್ನು ಖರ್ಚು ಮಾಡಬೇಕಾಗಿಲ್ಲ. ಆದರೂ ಆ ಶ್ರಾದ್ಧದ ಫಲ ಎಲ್ಲ ತಮ್ಮಂದಿರಿಗೂ ಬರುತ್ತದೆ. ಶ್ರಾದ್ಧದ ಅಡಿಗೆ ಮಾಡುವುದು, ಬಡಿಸುವುದು, ದರ್ಭೆಗಳನ್ನು ತರುವುದು ಮುಂತಾದ ಕೆಲಸಗಳನ್ನು ಮಾಡುತ್ತಾ ಸಹಕಾರವನ್ನು ಮಾಡಬೇಕು. ಯದ್ಯಪಿ ಹಿರಿಯನು ಪ್ರಧಾನವಾದ ಶ್ರಾದ್ಧವನ್ನು ಮಾಡಿದ್ದರೂ ಎಲ್ಲರಿಗೂ ಶ್ರಾದ್ಧದ ಫಲವು ಬರುತ್ತದೆ. ಅವಿಭಕ್ತರಾದ ತಮ್ಮಂದಿರು ಶ್ರಾದ್ಧವನ್ನು ಮಾತ್ರ ಪ್ರತ್ಯೇಕವಾಗಿ ಮಾಡಬಾರದು. ಹೀಗಿದ್ದರೂ ಬ್ರಹ್ಮಚರ್ಯ, ಪರಾನ್ನವರ್ಜನ ಮುಂತಾದ ಶ್ರಾದ್ಧಕರ್ತೃವಿನ ನಿಯಮಗಳನ್ನು ಎಲ್ಲ ಅಣ್ಣ-ತಮ್ಮಂದಿರೂ ಪಾಲಿಸಬೇಕು. ಯಾಕೆಂದರೆ ಈ ಬ್ರಹ್ಮಚರ್ಯ, ಪರಾನ್ನವರ್ಜನ ಮುಂತಾದವುಗಳು ಶ್ರಾದ್ಧದ ಫಲವನ್ನು ಪಡೆಯಬೇಕಾದವರ ಸಂಸ್ಕಾರಗಳಾಗಿವೆ. ಈ ಸಂಸ್ಕಾರಗಳಿಂದ ಸಂಸ್ಕೃತರಾದವರಿಗೆ ಮಾತ್ರ ಶ್ರಾದ್ಧದ ಫಲವು ಬರುತ್ತದೆ.

**೮೬. ಶ್ರಾದ್ಧದಲ್ಲಿಯ ವಿಕಿರವನ್ನು ಬ್ರಾಹ್ಮಣರ ಎಂಜಲು ಎಲೆಯ ಜೊತೆಗೇನೇ ತೆಗೆಯುತ್ತಾರೆ. ಇದು ಸರಿಯೇ? ಇದರ ಬಗ್ಗೆ ಏನಾದರೂ ಮಾಹಿತಿ ಸಿಗಬಹುದಾ?**

**ರಾಜೇಂದ್ರ, ತಿರುಪತಿ**

ವಿಕಿರಕ್ಕೆ ಸಂಬಂಧಿಸಿದಂತೆ ಈ ವಿಷಯದಲ್ಲಿ ಧರ್ಮಸಿಂಧು, ಶ್ರಾದ್ಧಮಾರ್ತಾಂಡವು ಈ ರೀತಿಯಾಗಿ ತಿಳಿಸುತ್ತದೆ.

**ವಿಕಿರಂ ಪೃಥಗೇವ ನಿಷ್ಕಾಸ್ಯ ಕಾಕೇಭ್ಯಃ ಸಮುತ್ಸೃಜೇದಿತಿ ಕಾಶಿಕಾ ॥**

**-ಶ್ರಾದ್ಧಮಾರ್ತಾಂಡ.30.ಪುಟ**

ವಿಕಿರವನ್ನು ಪ್ರತ್ಯೇಕವಾಗಿಯೇ ತೆಗೆಯಬೇಕು. ಬ್ರಾಹ್ಮಣರ ಎಲೆಯ ಜೊತೆಗೆ ಅದನ್ನು ಸೇರಿಸಬಾರದು. ಪ್ರತ್ಯೇಕವಾಗಿ ತೆಗೆದ ಆ ವಿಕಿರವನ್ನು ಕಾಗೆಗಳಿಗೆ ನೀಡಬೇಕು.

**೮೭. ವಿಕಿರ ಅಂದರೆ ಏನು?**

**ಸಾರ್ವವರ್ಣಿಕಮನ್ನಾದ್ಯಂ ಸನ್ನೀಯಾಪ್ಲಾವ್ಯ ವಾರಿಣಾ ।**
**ಸಮುತ್ಸೃಜೇದ್ಭುಕ್ತವತಾಮಗ್ರತೋ ವಿಕಿರನ್ ಭುವಿ ॥ ಮ.ಸ್ಮೃ.3.244**

ಶ್ರಾದ್ಧಕ್ಕಾಗಿ ಮಾಡಿರುವ ಪಾಯಸ, ಅನ್ನ, ಅಪೂಪ, ತೊವ್ವೆ, ಪಲ್ಯ ಮುಂತಾದ ಎಲ್ಲ ಪದಾರ್ಥಗಳನ್ನು, ಸ್ವಲ್ಪ ಸ್ವಲ್ಪವಾಗಿ, ಪ್ರತ್ಯೇಕವಾದ, ಶುದ್ಧವಾದ ಪಾತ್ರೆಯಲ್ಲಿ ಹಾಕಿಕೊಂಡು ಮಿಶ್ರಣ ಮಾಡಬೇಕು. ಅದರಲ್ಲಿ ಎಳ್ಳು ಮತ್ತು ದರ್ಭಗಳಿಂದ ಯುಕ್ತವಾದ ನೀರನ್ನು ಹಾಕಿ ಕಲಿಸಿಕೊಳ್ಳಬೇಕು. ತೃಪ್ತಿಪ್ರಶ್ನೆಯಾದ ಮೇಲೆ ಪಿತೃದೇವತೆಗಳ ಎಲೆಯ ಮುಂದಿನ ಭಾಗದಲ್ಲಿ ದರ್ಭಗಳನ್ನು ಹಾಕಿ ಆ ದರ್ಭಗಳ ಮೇಲೆ ವಿಹಿತವಾದ ಅನ್ನವನ್ನು ಹರಡುವ ಹಾಗೆ ಚೆಲ್ಲಬೇಕು. ಇದುವೇ ವಿಕಿರ.

**೮೮. ವಿಕಿರದ ಉದ್ದೇಶವೇನು?**

**ಅಸಂಸ್ಕೃತಪ್ರಮೀತಾನಾಂ ತ್ಯಾಗಿನಾಂ ಕುಲಯೋಷಿತಾಮ್ ।**
**ಉಚ್ಛಿಷ್ಟಂ ಭಾಗಧೇಯಂ ಸ್ಯಾತ್ ದರ್ಭೇಷು ವಿಕಿರಶ್ಚ ಯಃ ॥ಮ.ಸ್ಮೃ.3.245॥**

ಅಗ್ನಿಸಂಸ್ಕಾರಕ್ಕೆ ಅನರ್ಹರಾಗಿರುವ ಬಾಲಕರು ಮುಂತಾದವರು, ಯಾವ ದೋಷವೂ ಇಲ್ಲದ ಪತಿವ್ರತೆಯನ್ನು ಪರಿತ್ಯಾಗ ಮಾಡಿದ ಪುರುಷರು, ಗುರುಗಳನ್ನು ಪರಿತ್ಯಾಗ ಮಾಡಿದವರು, ವಿವಾಹಿತರಾಗದ ಸ್ತ್ರೀಯರು ಇವರೆಲ್ಲರಿಗೆ ತಲುಪಿಸಬಹುದಾದ ಭಾಗವೇ ವಿಕಿರ ಮತ್ತು ಉಚ್ಛಿಷ್ಟ. ಇವರಿಗೆ ಪ್ರತ್ಯೇಕವಾಗಿ ಪಿಂಡಪ್ರದಾನಗಳು ಇರುವುದಿಲ್ಲ. ಇಂಥವರನ್ನೂ ತೃಪ್ತಿಪಡಿಸಬೇಕೆಂಬ ಉದ್ದೇಶದಿಂದಲೇ ವಿಕಿರ ಎಂಬ ಈ ಕ್ರಿಯೆ ಶ್ರಾದ್ಧದಲ್ಲಿ ಸ್ಥಾನವನ್ನು ಪಡೆದಿದೆ.

ಈ ವಿಕಿರವು ಬ್ರಾಹ್ಮಣರ ಭೋಜನ ಪಾತ್ರೆಗಳಿಗೆ ಅಂಟಬಾರದು. ಮತ್ತು ಶುದ್ಧವಾದ ನೆಲದಲ್ಲಿ ಹಾಕಬಾರದು. ಈ ವಿಷಯವನ್ನು ಹೇಮಾದ್ರಿ ಮತ್ತು ಮನುಸ್ಮೃತಿಯ ವ್ಯಾಖ್ಯಾನಗಳು ವಿವರಿಸಿವೆ. ವಿಶೇಷ ವಿಚಾರಕ್ಕಾಗಿ ಆ ಗ್ರಂಥಗಳನ್ನು ಅವಲೋಕಿಸಬಹುದು. ಈ ಕೆಳಗಿನ ಮಂತ್ರವನ್ನು ಆ ಪ್ರಸಂಗದಲ್ಲಿ ಪಠಿಸಬೇಕು.

ಮನುಸ್ಮೃತಿಯ ವಚನಕ್ಕೆ ಈ ಮಾತು ಸಂವಾದಿಯಾಗಿದೆ ಎಂಬುದಾಗಿಯೂ ಗಮನಿಸಬೇಕು. ಈ ಕೆಳಗಿನ ವಚನವು ಅಗ್ನಿಪುರಾಣದ್ದೆಂದು ನಿರ್ಣಯಸಿಂಧುಕಾರರು ಗುರುತಿಸಿದ್ದಾರೆ.

**ಅಸಂಸ್ಕೃತಪ್ರಮೀತಾ ಯೇ ತ್ಯಾಗಿನ್ಯೋ ಯಾಃ ಕುಲಸ್ತ್ರಿಯಃ ।**
**ದಾಸ್ಯಾಮಿ ತೇಭ್ಯೋ ವಿಕಿರಮನ್ನಂ ತಾಭ್ಯಶ್ಚ ಪೈತೃಕಮ್ ॥**

ಪಿತೃಬ್ರಾಹ್ಮಣರ ಎಲೆಯ ಮುಂದೆ ವಿಕಿರವನ್ನು ಹಾಕುವ ಮೊದಲು, ಸವ್ಯದಿಂದ, ವಿಶ್ವೇದೇವತೆಗಳ ಎಲೆಯ ಮುಂದೆ ಕುಶ-ಯವಗಳನ್ನು ಹಾಕಿ, ಅಲ್ಲಿ ಜಲ-ಯವ ಸಹಿತವಾದ ವಿಕಿರವನ್ನು ಹಾಕಬೇಕು. ಆವಾಗ ಕೆಳಗಿನ ಈ ಶ್ಲೋಕವನ್ನು ಪಠಿಸಬೇಕು. ಗೋಭಿಲೋಕ್ತವಾದ ಶ್ಲೋಕವಿದೆಂದು ಹೇಮಾದ್ರಿ ಮುಂತಾದ ಗ್ರಂಥಗಳು ತಿಳಿಸುತ್ತವೆ. ಸೋಮಪಾನರಹಿತರಾದ, ಯಜ್ಞದಲ್ಲಿ ಭಾಗವಿಲ್ಲದ ದೇವತೆಗಳು ಈ ವಿಕಿರದಿಂದ ತೃಪ್ತರಾಗುತ್ತಾರೆ ಎಂಬುದಾಗಿ ಈ ಪ್ರಮಾಣವಚನವು ತಿಳಿಸುತ್ತದೆ.

**ಅಸೋಮಪಾಶ್ಚ ಯೇ ದೇವಾ ಯಜ್ಞಭಾಗವಿವರ್ಜಿತಾಃ ।**
**ತೇಷಾಮನ್ನಂ ಪ್ರದಾಸ್ಯಾಮಿ ವಿಕಿರಂ ವೈಶ್ವದೇವಿಕಮ್ ॥**

**೮೯. ''ಉಚ್ಛಿಷ್ಟಭಾಗ್ಭ್ಯಃ ಅನ್ನಂ ದೀಯತಾಮ್'' ಎನ್ನುತ್ತಾ ಏನು ಮಾಡಬೇಕು?**

**ಯಜಮಾನಸ್ಯ ದಾಸಾದೀನುದ್ದಿಶ್ಯ ದ್ವಿಜಸತ್ತಮ ।**
**ಭುಕ್ತಶೇಷಂ ತ್ಯಜೇದ್ಭೂಮೌ ವಾಮಭಾಗೇ ಚ ಪೈತೃಕೇ ॥**

**ಉಚ್ಛಿಷ್ಟಭಾಗ್ಭ್ಯಃ ಅನ್ನಂ ದೀಯತಾಮಿತ್ಯುಕ್ತಾಃ ವಿಪ್ರಾಃ ಪಾತ್ರಸ್ಥಂ ಭುಕ್ತಶೇಷಂ ದೈವಿಕಂ ದಕ್ಷಿಣೇ, ಪೈತೃಕಂ ವಾಮೇ ಬಹಿಃಕೃತ್ಯ... । ಧ.ಸಿಂ.350ಪುಟ**

''ಉಚ್ಛಿಷ್ಟಭಾಗ್ಭ್ಯಃ ಅನ್ನಂ ದೀಯತಾಮ್'' ಎಂಬುದಾಗಿ ಶ್ರಾದ್ಧದ ಭೋಜನಕ್ಕೆ ಕುಳಿತ ಬ್ರಾಹ್ಮಣರನ್ನು ಪ್ರಾರ್ಥಿಸಿಕೊಳ್ಳಬೇಕು. ನಮ್ಮ ಕುಲದಲ್ಲಿ ಮೃತರಾದ, ಉಚ್ಛಿಷ್ಟದಿಂದ ತೃಪ್ತರಾಗುವ ಜೀವರಿಗಾಗಿ ನಿಮ್ಮ ಎಂಜಲನ್ನು ನೀಡಿರಿ ಎಂಬುದು ಈ ಪ್ರಾರ್ಥನೆಯ ಅರ್ಥ.

ಯಜಮಾನನ ಕುಲದಲ್ಲಿ ಹುಟ್ಟಿ ಮೃತರಾದ ದಾಸ-ದಾಸಿಯರ ತೃಪ್ತಿಗಾಗಿ ಶ್ರಾದ್ಧದಲ್ಲಿ ಉಚ್ಛಿಷ್ಟಾನ್ನವನ್ನು ನೀಡಬೇಕು. ದೈವಬ್ರಾಹ್ಮಣರು ತಮ್ಮ ಎಲೆಯಲ್ಲಿರುವ ಎಂಜಲನ್ನು ಬಲಭಾಗದಲ್ಲಿ ಎಲೆಯಿಂದ ಹೊರಗೆ ಹಾಕಬೇಕು. ಪಿತೃಬ್ರಾಹ್ಮಣರು ಎಡ ಭಾಗದಲ್ಲಿ ಎಲೆಯಿಂದ ನೆಲಕ್ಕೆ ಸರಿಸಬೇಕು. ಇದರಿಂದ ದಾಸ-ದಾಸಿಯರ ತೃಪ್ತಿಯು ಆಗುತ್ತದೆ.

**೯೦. ದಾಸ-ದಾಸಿಯರು ಎಂದರೆ ಯಾರು?**

ಇಲ್ಲಿ ದಾಸ-ದಾಸಿಯರೆಂದರೆ ಮನೆಯಲ್ಲಿ ಕೆಲಸ ಮಾಡುವವರು ಎಂದು ಅರ್ಥವಲ್ಲ. ಈ ಪದಗಳ ಅರ್ಥವನ್ನು ಕೆಳಗಿನ ವಚನಕ್ಕೆ ಅನುಗುಣವಾಗಿ ತಿಳಿದುಕೊಳ್ಳಬೇಕು.

**ಅನೂಪನೀತಾ ವಿಜ್ಞೇಯಾ ಅನೂಢಾ ಯಾ ಚ ಕನ್ಯಕಾ ।**
**ದಾಸದಾಸೀತಿ ವಿಜ್ಞೇಯಾ ಉಭಾವುಚ್ಛಿಷ್ಟಭಾಗಿನೌ ॥**

ಇಲ್ಲಿ ಅನುಪನೀತರಾದವರು ದಾಸರು, ಅವಿವಾಹಿತವಾದವರು ದಾಸಿಯರು ಎನಿಸುತ್ತಾರೆ.

**೯೧. ಎಂಜಲು ನಿಷಿದ್ಧ ಎಂದು ಹೇಳುತ್ತಾರೆ. ಹೀಗಿರುವಾಗ ದಾಸ-ದಾಸಿಯರ ಭಾಗಕ್ಕಾಗಿ ಅದನ್ನು ಉಪಯೋಗಿಸುವುದು ಸರಿಯೇ?**

ಮನುಸ್ಮೃತಿಯ ವ್ಯಾಖ್ಯಾನವಾದ ಮೇಧಾತಿಥಿಯು ಅಸಂಸ್ಕೃತಪ್ರಮೀತಾ ಎಂಬ ಶ್ಲೋಕದ ವ್ಯಾಖ್ಯಾನವನ್ನು ಮಾಡುತ್ತಾ ಈ ವಿಷಯವನ್ನು ಸ್ಪಷ್ಟಪಡಿಸುತ್ತದೆ.

**ನ ಚ ವಾಚ್ಯಂ ಅಪವಿತ್ರಮುಚ್ಛಿಷ್ಟಂ ಕಥಂ ಭಾಗಧೇಯೇನ ಕಲ್ಪ್ಯತಾಮಿತಿ । ವಚನಾನ್ನಾಸ್ತ್ಯಪವಿತ್ರತಾ, ಸೋಮೋಚ್ಛಿಷ್ಟವತ್ ।**

ಉಚ್ಛಿಷ್ಟ ಅಪವಿತ್ರ. ಇದರಿಂದ ದಾಸ-ದಾಸಿಯರ ಭಾಗವೆಂಬುದಾಗಿ ಹೇಗೆ ಕಲ್ಪಿಸಬೇಕು? ಎಂದು ಶಂಕೆ ಬೇಡ. ಉಚ್ಛಿಷ್ಟದಿಂದ ದಾಸ-ದಾಸಿಯರಿಗೆ ತೃಪ್ತಿಯಾಗುತ್ತದೆ ಎಂಬ ವಿಷಯದಲ್ಲಿ ಪ್ರಮಾಣವಚನವಿದ್ದಾಗ ಅದು ಅಪವಿತ್ರವಾಗಲು ಸಾಧ್ಯವಿಲ್ಲ. ಅತ್ಯಂತ ಪವಿತ್ರವೇ ಆಗಿದೆ. ಸೋಮೋಚ್ಛಿಷ್ಟದಂತೆ ಎಂಬುದಾಗಿ ದೃಷ್ಟಾಂತವನ್ನೂ ನೀಡಿದ್ದಾರೆ. ಪ್ರಸಿದ್ಧವಾದ ದೃಷ್ಟಾಂತವನ್ನೇ ತೆಗೆದುಕೊಳ್ಳಬೇಕಾದರೆ ಕರುವಿನ ಉಚ್ಛಿಷ್ಟವಾದ ಆಕಳ ಹಾಲು ಸರ್ವತ್ರ ವಿಹಿತವಾದಂತೆ, ಬ್ರಾಹ್ಮಣರ ಈ ಉಚ್ಛಿಷ್ಟವು ಕೂಡಾ ಪ್ರಕೃತಪ್ರಸಂಗದಲ್ಲಿ ಪವಿತ್ರವೇ ಆಗಿದೆ.

ಅಲ್ಲದೇ ಬ್ರಾಹ್ಮಣರ ಎಂಜಲಿನಿಂದ ಎಷ್ಟು ಜನ ತೃಪ್ತರಾಗುತ್ತಾರೆಂಬ ವಿಶೇಷವನ್ನು ಸ್ಮೃತಿಮುಕ್ತಾವಲಿಯ ಈ ವಚನದಿಂದ ತಿಳಿಯಬಹುದು.

**ದ್ವಾತ್ರಿಂಶದ್ಭೃತ್ಯಸಾಹಸ್ರಂ ಪಿತ್ರುಚ್ಛಿಷ್ಟಂ ಭುನಕ್ತಿ ತತ್ ।**
**ತಸ್ಮಾತ್ಪಾತ್ರಸ್ಥಿತಂ ಸರ್ವಂ ಭೂಮಾವನ್ನಂ ವಿನಿಕ್ಷಿಪೇತ್ ॥**

ಈ ಪಿತೃಚ್ಛಿಷ್ಟವು 32,000 ಮೂವತ್ತೆರಡು ಸಾವಿರ ದಾಸ-ದಾಸಿಯರಿಗೆ ತೃಪ್ತಿಯನ್ನು ನೀಡುತ್ತದೆ. ಆದ್ದರಿಂದ ಎಂಜಲು ಪಾತ್ರೆಯಲ್ಲಿ ಉಳಿದ ಎಲ್ಲ ಅನ್ನ ಮುಂತಾದ ಆಹಾರವನ್ನು ಭೂಮಿಯಲ್ಲಿ ಹಾಕಿಸಬೇಕು. ...ಸಶೇಷ...

ಪ್ರಾತಃಸ್ಮರಣೀಯರಾದ, ಮಹಾವಿಭೂತಿಪುರುಷರಾದ, ಶ್ರೀಜಯತೀರ್ಥವಿದ್ಯಾಪೀಠದ ಸಂಸ್ಥಾಪಕರಾದ, ನಿರಂತರ ಐವತ್ತು ವರ್ಷಗಳ ಕಾಲ ವೇದಾಂತ ಸಾಮ್ರಾಜ್ಯವನ್ನು , ಭಕ್ತರ ಹೃದಯಸಾಮ್ರಾಜ್ಯವನ್ನೂ ಆಳುತ್ತಾ ಶ್ರೀಮೂಲರಾಮಾರ್ಚನೆಯನ್ನು ಮಾಡಿದ, ಶ್ರೀಮನ್ನ್ಯಾಯಸುಧಾದಿ ಗ್ರಂಥಪಾಠಪ್ರವಚನಾಸಕ್ತರಾದ, ಸಹಸ್ರಾರು ಭಕ್ತರಿಗೆ ಧರ್ಮದ ದಾರಿಯನ್ನು ತೋರಿದ, ತಮ್ಮ ತಪಃಶಕ್ತಿಯಿಂದ ಕೂಡಿದ ಮಂತ್ರಾಕ್ಷತೆ, ಮಂದಹಾಸ, ಮಧುರಮಾತು, ಮಮತೆಯ ಸ್ಪರ್ಶ ಇವುಗಳಿಂದ ಸಹಸ್ರಾರು ಜನರ ಕಷ್ಟಕಾರ್ಪಣ್ಯಗಳನ್ನು ದೂರ ಮಾಡಿ ಅನುಗ್ರಹಿಸಿದ, ಮಹಾಮಹಿಮರಾದ

## ಶ್ರೀ 1008ಶ್ರೀ ಸತ್ಯಪ್ರಮೋದತೀರ್ಥಶ್ರೀಪಾದಂಗಳವರ

## ಜನ್ಮ ಶತಮಾನೋತ್ಸವ (ಕ್ರಿ.ಶ. 1917 - ಕ್ರಿ.ಶ. 2017)

ಅದರ ನಿಮಿತ್ತ ಆ ಮಹಾಗುರುಗಳ ಸಮಗ್ರ ಮಾಹಿತಿಯನ್ನು ಒಳಗೊಂಡ ಬೃಹತ್‌ಅಭಿನಂದನಾ ಕೃತಿಯನ್ನು ಪ್ರಕಾಶನ ಮಾಡುವ ಯೋಜನೆ ಇದೆ. ಅವರ ದಿವ್ಯ ಜೀವನ ಚರಿತ್ರೆ , ಅವರ ವೈರಾಗ್ಯ , ಹರಿ-ಗುರು ಭಕ್ತಿ, ಜ್ಞಾನ, ಪಾಠ-ಪ್ರವಚನದೀಕ್ಷೆ ಮೊದಲಾದ ಅವರ ದೈವೀಸಂಪತ್ತುಗಳ ಪರಿಚಯ, ಅವರು ರಚಿಸಿದ ಗ್ರಂಥಗಳ ಪರಿಚಯ, ಅವರಿಂದಾದ ಶ್ರೀಮಠದ ಸೇವೆ, ಅವರು ಭಕ್ತರಿಗೆ ಮಾಡಿದ ಅನುಗ್ರಹ, ಅವರು ಮಾಡಿದ ವಿವಿಧ ಕಾರ್ಯಗಳು ಮುಂತಾಗಿ ಎಲ್ಲವನ್ನೂ ಇದರಲ್ಲಿ ಸಂಗ್ರಹಿಸುವ ಸಾಹಸವನ್ನು ಮಾಡುತ್ತಿದ್ದೇವೆ.

ಕಾರಣ ಆ ಮಹಾಗುರುಗಳನ್ನು ಕಂಡ, ಅವರ ವ್ಯಕ್ತಿತ್ವವನ್ನು ಗೌರವಿಸಿದ, ಅವರ ಅನುಗ್ರಹವನ್ನು ಅನುಭವಿಸಿದ ಭಕ್ತರು ತಮ್ಮಲ್ಲಿ ಇರುವ ಶ್ರೀಸತ್ಯಪ್ರಮೋದತೀರ್ಥರ ಅಪೂರ್ವಭಾವಚಿತ್ರಗಳು, ಹಸ್ತಾಕ್ಷರಗಳು, ಅವರು ಬರೆದ ಪತ್ರಗಳು, ಅನುಗ್ರಹ ಸಂದೇಶಗಳು, ಆಡಿಯೋ, ವೀಡಿಯೋ ಈ ಮೊದಲಾದವುಗಳನ್ನು ತಮ್ಮಲ್ಲಿ ಇದ್ದರೆ ಅದರ ಪ್ರತಿಯನ್ನು ಹಾಗೂ ಅವರು ನಿಮಗೆ ಮಾಡಿದ ಅನುಗ್ರಹ, ನೀವು ಸ್ವಂತ ಅನುಭವಿಸಿದ ಪವಾಡಗಳನ್ನು ಬರೆದು ಶ್ರೀಮಠದ ಕಾರ್ಯಾಲಯಕ್ಕೆ ತಲುಪಿಸಬೇಕೆಂದು ವಿಜ್ಞಾಪನೆ.

ಈ ಮೂಲಕ ಆ ಗುರುಗಳಿಗೆ ನಿಮ್ಮ ನಮನವನ್ನು, ಕೃತಜ್ಞತೆಯನ್ನು ಸಮರ್ಪಿಸಲು ಒಂದು ಸದವಕಾಶ.

ಇದಲ್ಲದೇ ಇದೇ ಸಂದರ್ಭದಲ್ಲಿ ಆ ಗುರುಗಳಿಗೆ ಪ್ರೀತಿಯಾಗುವ ಉದ್ದೇಶದಿಂದ ಶ್ರೀಉತ್ತರಾದಿಮಠದ ಸಮಗ್ರಪರಂಪರೆಯ ಕುರಿತಾಗಿಯೂ ವಿಶೇಷ ಕೃತಿಯ ರಚನೆಯ ಕಾರ್ಯವನ್ನೂ ಮಾಡಲಾಗುತ್ತದೆ. ಕಾರಣ ಶ್ರೀಮಠದ ಪರಂಪರೆಗೆ ಸಂಬಂಧಪಟ್ಟ ಯಾವುದೇ ಗುರುಗಳ ಕುರಿತಾಗಿ ಯಾವುದೇ ತರಹದ ದಾಖಲೆಗಳು (ರಾಯಸ, ಪತ್ರ , ದಾನಪತ್ರ , ಸ್ತೋತ್ರಗಳು, ಅವರ ಗ್ರಂಥಗಳ ಹಸ್ತಪ್ರತಿಗಳು ಮೊದಲಾದವು) ತಮ್ಮಲ್ಲಿ ಇದ್ದರೆ ಅವುಗಳನ್ನೂ ಶ್ರೀಮಠಕ್ಕೆ ತಲುಪಿಸುವ ಮೂಲಕ ಈ ಒಂದು ಮಹಾಪುಣ್ಯದ ಕಾರ್ಯದಲ್ಲಿ ಭಾಗಿಯಾಗಬೇಕಾಗಿ ವಿಜ್ಞಾಪನೆ. ತಮ್ಮ ಭಾವನೆಗಳಿಗೆ ಪೀಡೆಯಾಗುವುದಾದರೆ ಮೂಲ ಪ್ರತಿಗಳನ್ನು ತಮ್ಮಲ್ಲಿಯೇ ಇಟ್ಟುಕೊಂಡು ಅವುಗಳ ಇನ್ನೊಂದು ಪ್ರತಿಗಳನ್ನು ಶ್ರೀಮಠಕ್ಕೆ ನೀಡಿದರೂ ಸಾಕು.

**ಸಂಪರ್ಕಿಸಿ - 080-26603692, 9448484457, 9448863064, 9448569882, 9481787057 ಈಮೇಲ್ srisatyapramodaseva@yahoo.com**

# ದಾಸಸಾಹಿತ್ಯ ಪ್ರಶ್ನೋತ್ತರಗಳು- ೭೨

✍ ಶ್ರೀ. ಎ ಬಿ ಶ್ಯಾಮಾಚಾರ್ಯ

1 ನಿತ್ಯವಾದ ಅಪೌರುಷೇಯವಾದ ವೇದಗಳು ಪ್ರಳಯಕಾಲದಲ್ಲಿ ಎಲ್ಲಿ ಅಡಗಿರುತ್ತವೆ ?

2 ಎಲ್ಲವನ್ನೂ ಮಾಡಬಲ್ಲ ಭಗವಂತ ತ್ರಿವಿಧಜೀವರ ಸ್ವರೂಪಗುಣಗಳನ್ನು ವ್ಯತ್ಯಸ್ತ ಮಾಡುವನೇ ?

3 ಜೀವರಲ್ಲಿ ನೆಲೆಸಿದ್ದ ವಾಯುದೇವರು ಒಂದು ಯಾಮಕ್ಕೆ (3 ಗಂಟೆ) ಎಷ್ಟು ಹಂಸಮಂತ್ರಗಳನ್ನು ಜಪಿಸುವರು ?

4 ಸೂರ್ಯಾಂತರ್ಗತನಾದ ಘೃಣೀವಾಚ್ಯನಾದ ನಾರಾಯಣನು ಆ ಮಂಡಲದಲ್ಲಿ ಎಷ್ಟು ರೂಪಗಳಿಂದಿರುವ?

5 ಓಂಕಾರದಿಂದ ಹುಟ್ಟಿದ ಬಿಂದುವಿನಲ್ಲಿ ಎಷ್ಟು ದೇವತೆಗಳು ಪಂಚತನ್ಮಾತ್ರಾಗಳಲ್ಲಿದ್ದು ಅಭಿಮಾನಿಗಳೆನಿಸುವರು ?

6 ನಿತ್ಯನರಕವೆನಿಸಿದ ಅಂಧಂತಮಸ್ಸಿಗೆ ಪ್ರಳಯದಲ್ಲಿ ನಾಶವೆಂಬುದು ಇದೆಯೆ ?

7 ಷೋಡಶಕಲೆಗಳಲ್ಲಿ ಒಂದಾದ ಧ್ಯಾನಕ್ಕೆ ಅಭಿಮಾನಿಯಾದ ವರುಣನಲ್ಲಿರುವ ಭಗವದ್ರೂಪ ಯಾವದು ?

8 ಲಯಕಾಲದಲ್ಲಿ ನಾಲ್ಕು ಮಾರ್ಗಗಳಿಂದ ಬಂದು ಸೇರುವ ಇಂದ್ರನು ಯಾರಲ್ಲಿ ಪ್ರವೇಶ ಮಾಡಿ ಲಯ ಹೊಂದುವನು ?

9 ಜೀವರ ಪಿಂಡಾಂಡದಲ್ಲಿ ಭಗವಂತ ಈಶಾನ್ಯದಿಕ್ಕಿಗೆ ಬಂದು ಅನುಗ್ರಹಿಸಲು ಯಾವ ಗುಣ ಹೆಚ್ಚುತ್ತದೆ?

10 ತರ್ಜನಿ ಬೆರಳಿನ ಮೂಲದಲ್ಲಿ ಪೈತೃತಿ ತೀರ್ಥವಿರುವುದರಿಂದ ಇದು ಯಾವುದಕ್ಕೆ ಶ್ರೇಷ್ಠವೆನಿಸಿದೆ ?

11 ಬ್ರಾಹ್ಮಣರ ಪಾದಾಂಗುಷ್ಟದಲ್ಲಿ ಇರುವ ವಾಯುದೇವರಲ್ಲಿ ಭಗವಂತ ಯಾವ ನಾಮದಿಂದಿರುವ ?

12 ನಿತ್ಯಸಂಸಾರಿಜೀವರಲ್ಲಿಯ ಭೂಪ್ರಚುರಜೀವರು ಯಾವ ವರ್ಣವಿಶಿಷ್ಟರಾಗಿರುತ್ತಾರೆ ?

13 ಜೀವರ ಹೃದಯಾಕಾಶದಲ್ಲಿ ವ್ಯಾಪ್ತನಾದ ಅನಿರುದ್ಧನು ಅಲ್ಲಿಯ ಅಪಾನನನ್ನು ಎಲ್ಲಿಗೆ ಅಟ್ಟುವ ?

14 ಮನುಷ್ಯರ ಶರೀರದ ಮುಖದ ಭ್ರೂಮಧ್ಯಭಾಗದಲ್ಲಿ ನೆಲೆಸಿದ ಭಗವದ್ರೂಪ ಯಾವದು ?

15 ದೇಹದ ಒಂದು ಪ್ರಧಾನ ಸೂಕ್ಷ್ಮವಾದ ಪೂರ್ಣಾನಾಡಿಯಲ್ಲಿ ಪ್ರವಹಿಸಿದ ಸೂಕ್ಷ್ಮನದಿ ಯಾವದು ?

16 ಆಜಾನಜಾದಿ ದೇವತೆಗಳು ಕರ್ಮಜದೇವತೆಗಳಿಗಿಂತಲೂ ಎಷ್ಟು ಕಲ್ಪಸಾಧನೆಯಿಂದ ಹಿಂದಿರುವರು ?

17 ಭೃಗುಋಷಿಗಳಿಗೂ ವಶಿಷ್ಠಋಷಿಗಳಿಗೂ ಇರುವ ತಾರತಮ್ಯವೆಷ್ಟು ?

18 ವಿಜಯದಾಸರ ಪ್ರಥಮಶಿಷ್ಯರಾಗಿ ವಿಶೇಷಕೃಪೆಗೆ ಪಾತ್ರರಾದ ದಾಸರು ಯಾರು ?

19 'ಬಂಧನವ ಪರಿಹರಿಸೋ ಭವವಿದೂರ' ಇದು ಯಾರ ಕೃತಿ ?

20 ಯೋಗಿಂದ್ರರಾಯರಾಗಿದ್ದವರು ದೀಕ್ಷೆ ಪಡೆದು ಯಾವ ದಾಸರೆಂದು ಪ್ರಸಿದ್ಧರಾದರು ?

**ಉತ್ತರ** :1) ವಿಷ್ಣುಬುದ್ಧಿಯಲ್ಲಿ 2) ಇಲ್ಲ 3) 2700 4) 8126 ರೂಪಗಳಿಂದ 5) ಐದು 6) ಇಲ್ಲ 7) ಅನಿರುದ್ಧ 8) ಸೌಪರ್ಣಿಯಲ್ಲಿ 9) ವೈರಾಗ್ಯ 10) ಪಿತೃತರ್ಪಣಕ್ಕೆ 11) ತೀರ್ಥಪಾದ 12) ರಕ್ತವರ್ಣ 13) ಕೆಳಭಾಗಕ್ಕೆ 14) ನಾರಾಯಣ 15) ಪಯಸ್ವಿನಿ 16) ಒಂದು ಕಲ್ಪ 17) ಒಂದು ಕಕ್ಷಾ 18) ಗೋಪಾಲದಾಸರು 19) ಜಗನ್ನಾಥದಾಸರ ಕೃತಿ 20) ಪ್ರಾಣೇಶದಾಸರು

# ಐತಿಹಾಸಿಕ ಚಾತುರ್ಮಾಸ್ಯದ ಸಮಾರೋಪದ ವೈಭವ

ಶ್ರೀಮದುತ್ತರಾದಿಮಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ ಸತ್ಯಾತ್ಮತೀರ್ಥರ 19 ನೇ ಚಾತುರ್ಮಾಸ್ಯವು ಉಡುಪಿಯ ಶ್ರೀಕೃಷ್ಣನ ಸನ್ನಿಧಿಯಲ್ಲಿ ಅತ್ಯಂತ ವೈಭವೋಪೇತವಾಗಿ, ಮಂಗಳಮಯವಾಗಿ ಸಂಪನ್ನಗೊಂಡಿತು. ಅನ್ನಬ್ರಹ್ಮನ ಸನ್ನಿಧಿಯಲ್ಲಿ ಶ್ರೀಮೂಲರಾಮನ ಚಾತುರ್ಮಾಸ್ಯದ ಸೊಬಗು ದಿನ ಕಳೆದಂತೆ ಹೆಚ್ಚುತ್ತ ನಡೆದದ್ದು ಸಹಜ. ಬ್ರಹ್ಮ ಹಾಗೂ ಭಾವೀ ಬ್ರಹ್ಮರಿಂದ ಅರ್ಚಿತ ಅರ್ಚಾಗಳ ಸನ್ನಿಧಿಯಲ್ಲಿ ವೈಭವವಲ್ಲದೇ ಮತ್ತೇನಿರಲು ಸಾಧ್ಯ ! ಪರ್ಯಾಯ ಶ್ರೀಗಳ ಹಾಗೂ ಶ್ರೀ ಉತ್ತರಾದಿಮಠದ ಶ್ರೀಗಳ ಅನ್ಯೋನ್ಯ ಸೌಹಾರ್ದ, ಪ್ರೀತಿ, ವಿಶ್ವಾಸಗಳು ಆದರ್ಶಪೂರ್ಣವಾಗಿದ್ದವು.

ಕಳೆದ ಎರಡು ತಿಂಗಳ ಸಂಚಿಕೆಯಲ್ಲಿ ಉಡುಪಿಯ ಚಾತುರ್ಮಾಸ್ಯದ ವಿವಿಧ ಕಾರ್ಯಕ್ರಮಗಳ ಸಂಕ್ಷಿಪ್ತ ದರ್ಶನವನ್ನು ಮಾಡಿದ್ದೀರಿ. ಈ ಸಂಚಿಕೆಯಲ್ಲಿ ಅದರ ಯಾತ್ರೆಯನ್ನು ಮುಂದುವರೆಸುತ್ತಾ ಇನ್ನು ಕೆಲವು ಕಾರ್ಯಕ್ರಮಗಳ ದರ್ಶನ ಮಾಡೋಣ.

### ಭೈಷ್ಮೀ ಮಧ್ವಕರಾರ್ಚಿತ ಶ್ರೀಕೃಷ್ಣನಿಗೆ ಲಕ್ಷ ತುಲಸೀ ಅರ್ಚನೆ

ಶ್ರೀಮದುತ್ತರಾದಿಮಠಾಧೀಶರಾದ ಶ್ರೀಸತ್ಯಾತ್ಮತೀರ್ಥರ ಸನ್ನಿಧಿಯಲ್ಲಿ ಅವರ ಚಾತುರ್ಮಾಸ್ಯದ ನಿಮಿತ್ತವಾಗಿ ಶ್ರೀಕೃಷ್ಣನಿಗೆ ಲಕ್ಷತುಳಸೀ ಅರ್ಚನೆಯನ್ನು ನೆರವೇರಿಸಬೇಕೆಂಬ ಸಂಕಲ್ಪವನ್ನು ಕಾಣಿಯೂರು ಮಠಾಧೀಶರು ಮಾಡಿದ್ದರು. ಅದರಂತೆ ಭಾದ್ರಪದ ಶುದ್ಧ ಏಕಾದಶೀ, 5-9-2014 ರಂದು ಸ್ಥಳೀಯ ಪಂಡಿತರಾದ ಶ್ರೀ ಸಗ್ರಿ ರಾಘವೇಂದ್ರಾಚಾರ್ಯ ಹಾಗೂ ಪರ್ಯಾಯ ಕಾಣಿಯೂರು ಮಠದ ವಿದ್ವಾಂಸರ ನೇತೃತ್ವದಲ್ಲಿ ಬೆಳಿಗ್ಗೆ 7-30 ಕ್ಕೆ ಲಕ್ಷ ತುಳಸೀ ಅರ್ಚನೆಯ ಪವಿತ್ರ ಕಾರ್ಯಕ್ರಮ ಪ್ರಾರಂಭವಾಯಿತು. ಪಂ. ಸಗ್ರಿ ರಾಘವೇಂದ್ರಾಚಾರ್ಯ ಹಾಗೂ ಶ್ರೀ ಬಲರಾಮಭಟ್ಟರು ಎಲ್ಲರಿಂದ ಸಂಕಲ್ಪ ಮಾಡಿಸಿದರು. ಉತ್ತರಾದಿಮಠದ ಪಂಡಿತರು ಹಾಗೂ ಸ್ಥಳೀಯ ಪಂಡಿತರು ಸೇರಿ ಒಟ್ಟು ಒಂದು ನೂರಕ್ಕೂ ಹೆಚ್ಚು ವಿದ್ವಾಂಸರು, ವಿದ್ಯಾರ್ಥಿಗಳು ಅಲ್ಲದೇ ಇನ್ನನೇಕ ಭಕ್ತರು ಚಂದ್ರಶಾಲೆಯಲ್ಲಿ ಕುಳಿತು ವಿಷ್ಣುಸಹಸ್ರನಾಮಾವಳಿಯ ಪಠಣವನ್ನು ಮಾಡಿದರು. ಒಳಗೆ ಗರ್ಭಗುಡಿಯಲ್ಲಿ ಪರ್ಯಾಯ ಕಾಣಿಯೂರು ಶ್ರೀಗಳವರಾದ ಶ್ರೀವಿದ್ಯಾವಲ್ಲಭತೀರ್ಥರು ಅರ್ಚನೆಯನ್ನು ನಡೆಸಿದರು. ಶ್ರೀಪಾದಂಗಳವರು ಶ್ರೀಕೃಷ್ಣನ ಸನ್ನಿಧಿಯಲ್ಲಿ ಅವನೆದುರು ಕುಳಿತು ಭಕ್ತಿಯಿಂದ ನಾಮಾವಳಿಗಳನ್ನು ಪಠಣ ಮಾಡುತ್ತಾ ಅರ್ಚನೆಯನ್ನು ವೀಕ್ಷಿಸಿ ಆನಂದಪಟ್ಟರು. ಭಾವಪುಷ್ಪಗಳಿಂದ ತಾವೂ ಭಗವಂತನನ್ನು ಅರ್ಚಿಸಿ ಮೆಚ್ಚಿಸಿದರು. ಈ ದೃಶ್ಯವನ್ನು ಟಿವಿ ಮಾಧ್ಯಮದಲ್ಲಿ ವೀಕ್ಷಿಸಿ ಭಕ್ತರು ಆನಂದಪಟ್ಟರು. ವೀಕ್ಷಿಸಿದ

ಪ್ರತಿಯೊಬ್ಬರೂ ಪುಣ್ಯವಂತರು. ಭಾಗ್ಯಶಾಲಿಗಳು. ಅಪರೂಪದ ಆ ದೃಶ್ಯ ನೋಡಿದವನೇ ಧನ್ಯ. ಅಂದು ಶುಕ್ರವಾರವಾದ ಕಾರಣ ಶ್ರೀಕೃಷ್ಣನಿಗೆ ಸ್ತ್ರೀರೂಪದ ಅಲಂಕಾರ ಮಾಡಲಾಗಿತ್ತು. ಮತ್ತಷ್ಟು ಆ ದೃಶ್ಯ ಮನಮೋಹಕವಾಗಿ ರೋಮಾಂಚನಗೊಳಿಸುತ್ತ ಪಾಪಗಳನ್ನೆಲ್ಲ ಹರಣ ಮಾಡುತ್ತಿತ್ತು.

**ತುಳುನಾಡಿನ ಪುರೋಹಿತರ ಹಾಗೂ ಬ್ರಾಹ್ಮಣರ ಸಮಾವೇಶ**

ಶ್ರಾವಣ ಶುಕ್ಲ ದ್ವಾದಶೀ (08-08-2014) ಮಧ್ಯಾಹ್ನ 3ಗಂಟೆಗೆ ತುಳುನಾಡಿನ ಪುರೋಹಿತರ ಸಮಾಗಮ ಏರ್ಪಡಿಸಲಾಗಿತ್ತು. ತಂತ್ರಸಾರೋಕ್ತ ಹಾಗೂ ತದನುಸಾರಿಯಾದ ಕರ್ಮಾಚರಣೆಗಳಿಗೆ ವಿಶೇಷ ಪ್ರಾಶಸ್ತ್ಯವನ್ನು ನೀಡುಬೇಕೆಂಬ ಆಶಯವನ್ನು ಶ್ರೀಪಾದಂಗಳವರು ವ್ಯಕ್ತಮಾಡಿದರು. ಎಲ್ಲ ಕರ್ಮಗಳಲ್ಲಿ ವಿಷ್ಣುವಿನ ಅನುಸಂಧಾನದ ಆವಶ್ಯಕತೆಯನ್ನು ಗೀತೆಯ ಹಿನ್ನೆಲೆಯಲ್ಲಿ ವಿವರಿಸಿದರು. ಅನೇಕ ಪುರೋಹಿತರು ತಮ್ಮ ಸಮಸ್ಯೆಗಳನ್ನು ನಿವೇದಿಸಿಕೊಂಡರು. ಶ್ರೀಪಾದಂಗಳವರು ಅವುಗಳಿಗೆ ಸ್ಪಂದಿಸುತ್ತಾ ಸಮಾಧಾನಗಳನ್ನು ಕಂಡುಕೊಳ್ಳುವ ಬಗೆಗಳನ್ನು ತಿಳಿಸಿದರು. ನೆರೆದ ಎಲ್ಲರಿಗೂ ಶ್ರೀಪಾದಂಗಳವರ ಆತ್ಮೀಯತೆ, ಪ್ರೀತಿಗಳು ವಿಶೇಷ ಪರಿಣಾಮವನ್ನು ಮಾಡಿತು. ಪ್ರತಿಯೊಬ್ಬ ಪುರೋಹಿತರಿಗೂ ಶ್ರೀಪಾದಂಗಳವರು ವಿಶೇಷ ಸಂಭಾವನೆಯನ್ನು ನೀಡಿ ಆಶೀರ್ವದಿಸಿ ಸತ್ಕರಿಸಿದರು.

ಭಾದ್ರಪದ ಶುಕ್ಲ ಷಷ್ಠೀ (31-08-2014) ಅಷ್ಟಮಠದ ದಿವಾನರು-ಪ್ರತಿನಿಧಿಗಳು, ಉಡುಪೀ ಹಾಗೂ ಸುತ್ತ ಮುತ್ತಲಿನ ಪ್ರಾಂತದ ಬ್ರಾಹ್ಮಣ ಸಂಘಗಳು, ಶ್ರೀಮದಾಚಾರ್ಯರು ಸಂದರ್ಶಿಸಿದ ಪವಿತ್ರ ಸ್ಥಳಗಳಲ್ಲಿ ಸೇವಾ ಕೈಂಕರ್ಯವನ್ನು ಮಾಡುತ್ತಿರುವ ಅರ್ಚಕರು, ವಂಶಸ್ಥರು ಎಲ್ಲರೂ ಶ್ರೀಮಠದ ಆಮಂತ್ರಣದ ಮೇರೆಗೆ ಉತ್ತರಾದಿಮಠಕ್ಕೆ ಆಗಮಿಸಿದ್ದರು. ಶ್ರೀಗಳವರು ಪ್ರತಿಯೊಬ್ಬರೊಡನೆಯೂ ವೈಯಕ್ತಿವಾಗಿ ಮಾತನಾಡಿ ಕುಶಲವನ್ನು ವಿಚಾರಿಸಿದರು. ಅನೇಕ ವಿಧಾಯಕ ಕಾರ್ಯಕ್ರಮಗಳನ್ನು ಮಾಡುತ್ತಿರುವ ಸಂಘ-ಸಂಸ್ಥೆಗಳನ್ನು ಪ್ರಶಂಸಿವುದರ ಜೊತೆಗೆ ನಿಮ್ಮ ಯಾವುದೇ ಕಾರ್ಯಗಳಿಗೂ ನಮ್ಮ ಪೂರ್ಣ ಬೆಂಬಲವಿದೆ ಎಂದು ಸೂಚಿಸಿದರು. ನೆರೆದ ಎಲ್ಲ ಅತಿಥಿಗಳೂ ಸಂತಸದಿಂದ ಗುರುಗಳ ಆಶೀರ್ವಾದವನ್ನು ಪಡೆದು ತೆರಳಿದರು.

**ತುಳುನಾಡಿನ ಬ್ರಾಹ್ಮಣ ಯುವಕ-ಯುವತಿಯರಿಗೆ ಶ್ರೀಗಳವರ ಸಂದೇಶ**

ಭಾದ್ರಪದ ಶುಕ್ಲ ದ್ವಾದಶೀ (06-09-2014) ಉತ್ತರಾದಿಮಠದಲ್ಲಿ ಉಡುಪಿ ಜಿಲ್ಲೆಯ ಯುವಕ ಹಾಗೂ ಯುವತಿಯರ ಸಮಾವೇಶವನ್ನು ಆಯೋಜಿಸಲಾಗಿತ್ತು. ಶ್ರೀಪಾದಂಗಳವರು ಆ ತರುಣವರ್ಗವನ್ನುದ್ದೇಶಿಸಿ ಹಿತಬೋಧನೆಯನ್ನು ಮಾಡುವುದರ ಜೊತೆಗೆ ಅಧ್ಯಯನಕ್ಕಾಗಿ, ಉನ್ನತ ಧ್ಯೇಯಕ್ಕಾಗಿ ಪ್ರೋತ್ಸಾಹಕ ಮಾತುಗಳನ್ನಾಡಿದರು.

ಧರ್ಮದ ಆವಶ್ಯಕತೆಯ ಕುರಿತಾಗಿ ಮನದಟ್ಟಾಗುವಂತೆ ಬೋಧಿಸಿದರು. ಯುವಕರಿಗೆ ಧಾರ್ಮಿಕ ಸಾಂಪ್ರದಾಯಿಕ ವಿವಾಹದ ಆವಶ್ಯಕತೆಯನ್ನು ತಿಳಿಸಿ ಅವರೆಲ್ಲರಿಂದ 'ಶಾಸ್ತ್ರಸಮ್ಮತ ರೀತಿಯಲ್ಲಿಯೇ ವಿವಾಹ ಮಾಡಿಕೊಳ್ಳುತ್ತೇವೆ ' ಎಂಬ ಸಂಕಲ್ಪವನ್ನೂ ಮಾಡಿಸಿದರು. ಪ್ರತಿಯೊಬ್ಬರಿಗೆ ಮಂತ್ರಾಕ್ಷತೆಯ ಜೊತೆಗೆ ಯುವಕರ ಉದ್ಬೋಧನೆಗಾಗಿಯೇ ಇರುವ 'ಉತ್ತಿಷ್ಠ' ಎಂಬ ಪುಸ್ತಕ ಹಾಗೂ 'ಯುವಕರೇ ಎದ್ದೇಳಿ' ಸಿ.ಡಿಯನ್ನು ನೀಡಿದರು.

**ಮೂಲರಾಮ- ಶ್ರೀಕೃಷ್ಣರ ದರ್ಶನ**

ಭಾದ್ರಪದ ಶುಕ್ಲ ಹುಣ್ಣಿಮೆಯ ಆ ಪೂರ್ಣಚಂದ್ರನ ದಿನ ಐತಿಹಾಸಿಕ ಉಡುಪಿಯ ಚಾತುರ್ಮಾಸ್ಯಪೂರ್ಣಗೊಳ್ಳುವ ಸುದಿನ. ಶ್ರೀಕೃಷ್ಣಮಠದ ಚಂದ್ರಶಾಲೆಯಲ್ಲಿ ಮತ್ತೊಮ್ಮೆ ಪ್ರಾಚೀನ ಪದ್ಧತಿಯಂತೆ ಶ್ರೀಪಾದಂಗಳವರಿಂದ ಶ್ರೀಮೂಲರಾಮನ ಮಹಾಪೂಜೆ ನಡೆಯಿತು. ಏಕಕಾಲದಲ್ಲಿ ಬ್ರಹ್ಮಕರಾರ್ಚಿತ ಶ್ರೀಮೂಲರಾಮನ ಹಾಗೂ ಭಾವೀಬ್ರಹ್ಮಕರಾರ್ಚಿತ ಶ್ರೀಕೃಷ್ಣನ ದರ್ಶನ ಪಡೆಯುವ ಭಾಗ್ಯ. ಈ ಭಾಗ್ಯವನ್ನು ಸಜ್ಜನರಿಗೆ ಕಲ್ಪಿಸಿಕೊಟ್ಟದ್ದು ಪರ್ಯಾಯ ಕಾಣಿಯೂರು ಪೀಠಾಧೀಶರಾದ ಶ್ರೀವಿದ್ಯಾವಲ್ಲಭತೀರ್ಥರು ಮತ್ತು ಶ್ರೀಮದುತ್ತರಾದಿಮಠಾಧೀಶರಾದ ಶ್ರೀಸತ್ಯಾತ್ಮತೀರ್ಥರು. ಚಂದ್ರಶಾಲೆಯಲ್ಲಿ ವೈಭವದ ಶ್ರೀಮೂಲರಾಮ ದಿಗ್ವಿಜಯರಾಮ ವೇದವ್ಯಾಸಾದಿ ಮಹಾಸಂಸ್ಥಾನಪ್ರತಿಮೆಗಳ ಪೂಜೆಯ ನಂತರ ತೊಟ್ಟಿಲು ಪೂಜೆಯನ್ನು ನಡೆಸಿದ ಶ್ರೀಗಳವರು ತಮ್ಮ ಚಾತುರ್ಮಾಸ್ಯವ್ರತದ ಸಮಾಪ್ತಿಯ ಸಂಕಲ್ಪವನ್ನು ವಿಧಿ ಪೂರ್ವಕ ಮಾಡಿದರು. ಚಾತುರ್ಮಾಸ್ಯದ ಸಂದರ್ಭದಲ್ಲಿ ಮಾಡಿದ ಪಾಠ, ಪ್ರವಚನ, ಪೂಜೆ, ಅತಿಥಿಸತ್ಕಾರ ಮೊದಲಾದ ಎಲ್ಲ ಕರ್ಮಗಳನ್ನೂ ತಮ್ಮ ಗುರುಗಳನ್ನು ಆರಂಭಿಸಿ ಪರಂಪರೆಯಲ್ಲಿ ಬರುವ್ವಎಲ್ಲ ಗುರುಗಳನ್ನು ಸ್ಮರಿಸಿ, ವಂದಿಸಿ ಅವರೆಲ್ಲರ ಅಂತರ್ಯಾಮಿಯಾದ ಮುಖ್ಯಪ್ರಾಣದೇವರ ದ್ವಾರಾ ತಮ್ಮ ಉಪಾಸ್ಯಮೂರ್ತಿಗಳಾದ ಶ್ರೀಮೂಲಸೀತಾಸಮೇತ ಶ್ರೀಮೂಲರಾಮ ದಿಗ್ವಿಜಯರಾಮವೇದವ್ಯಾಸರಲ್ಲಿ ಹಾಗೂ ಶ್ರೀಕೃಷ್ಣನ ಸನ್ನಿಧಾನದಲ್ಲಿ ಸಮರ್ಪಣೆ ಮಾಡಿದರು.

**ಅವಭೃತಸ್ನಾನ**

ಶ್ರೀಮೂಲರಾಮನ ವೈಭವದ ಪೂಜೆಯನ್ನು ಚಂದ್ರಶಾಲೆಯಲ್ಲಿ ನಡೆಸಿದ ಶ್ರೀಗಳವರು ಪುರಾಣಪ್ರಸಿದ್ಧವಾದ, ಶ್ರೀಮದ್ವಾದಿರಾಜರು ತಮ್ಮ ತೀರ್ಥಪ್ರಬಂಧದಲ್ಲಿ ವರ್ಣಿಸಿದ, ಪುಣ್ಯನದಿಯಾದ 'ಸುವರ್ಣಾ'ನದಿತೀರಕ್ಕೆ ಅವಭೃತಸ್ನಾನಕ್ಕಾಗಿ ತೆರಳಿದರು. ಉಡುಪಿಯ ಮಣಿಪಾಲ್ ಪ್ರಾಂತದಲ್ಲೇ ಇರುವ ಸುವರ್ಣಾನದಿಯಲ್ಲಿ ಶ್ರೀಗಳವರು ಅವಭೃತ ಸ್ನಾನಕ್ಕೆ ತೆರಳುತ್ತಾರೆಂಬ ಸುದ್ದಿ ಹರಡುತ್ತಿದ್ದಂತೆ ನೂರಾರು ಭಕ್ತರು ನಾನಾವಿಧ

ವಾಹನಗಳಲ್ಲಿ ಮಳೆಯನ್ನು ಲೆಕ್ಕಿಸದೇ ನದೀತೀರಕ್ಕೆ ಧಾವಿಸಿ ಶ್ರೀಗಳವರಿಗೋಸ್ಕರ ಕಾದು ನಿಂತಿದ್ದರು. ಅಲ್ಲಿಯ ಗಣಪತಿ ದೇವಸ್ಥಾನದ ಸಿಬ್ಬಂದಿಗಳು ಬ್ರಾಹ್ಮಣಸಮಾಜದವರು ಎಲ್ಲ ಸೌಕರ್ಯಗಳನ್ನು ಒದಗಿಸಿದ್ದರು. ಶ್ರೀಗಳವರನ್ನು ಅಲಂಕೃತ ನೌಕೆಯಲ್ಲಿ ನದಿಯಲ್ಲಿ ಕೊಂಡೊಯ್ಯಲಾಯಿತು. ಸಾಕ್ಷಾತ್ ಶ್ರೀರಾಮಚಂದ್ರ ಸರಯೂ ನದಿಯಲ್ಲಿ ನೌಕೆಯಲ್ಲಿ ಕುಳಿತಂತೆ ಕಂಗೊಳಿಸುತ್ತಿದ್ದರು ಶ್ರೀಗಳವರು. ಸುವರ್ಣಾನದೀದೇವತೆಗೆ ಮೊರದ ಬಾಗಿಣವನ್ನು ತಮ್ಮ ಮಾತೋಶ್ರೀಯವರ ಸಮಕ್ಷಮದಲ್ಲಿ ಅರ್ಪಿಸಿದ್ದು ವಿಶೇಷವಾಗಿತ್ತು. ನಂತರ ಶ್ರೀಗಳವರು ಅವಭೃತಸ್ನಾನ ನೆರವೇರಿಸಿ ದಂಡೋದಕ-ಪಾದೋದಕಗಳನ್ನು ನೆರೆದ ಭಕ್ತರಿಗೆ ದಯಪಾಲಿಸಿದರು.

**ಅನ್ನಬ್ರಹ್ಮನ ಅಪರೂಪದ ಚೌಕಿ ಭೋಜನ**

ಅವಭೃತಸ್ನಾನದ ನಂತರ ಅತ್ಯಂತ ಅಪರೂಪದ ದೃಶ್ಯ ಶ್ರೀಕೃಷ್ಣಮಠದ ಚೌಕೀ ಭೋಜನಶಾಲೆಯಲ್ಲಿ ಕಾದಿತ್ತು. ಶ್ರೀಸತ್ಯಾತ್ಮತೀರ್ಥರು ಪರ್ಯಾಯ ಶ್ರೀವಿದ್ಯಾವಲ್ಲಭತೀರ್ಥರೊಂದಿಗೆ ಚೌಕಿಯಲ್ಲಿ ಭಿಕ್ಷೆಯನ್ನು ಸ್ವೀಕರಿಸುವ ದೃಶ್ಯ. ಉತ್ತರಾದಿಮಠದ ಕಟ್ಟುನಿಟ್ಟಾದ ಸಂಪ್ರದಾಯದಂತೆ ಅಂದಿನ ಚೌಕಿಯಲ್ಲಿ ಎಲ್ಲ ಸೌಲಭ್ಯಗಳನ್ನೂ ಪರ್ಯಾಯ ಶ್ರೀಗಳವರು ಒದಗಿಸಿದ್ದರು. ಶಿಷ್ಟ ವೈದಿಕರೇ ಇಡೀ ಚೌಕಿ ಭೋಜನಶಾಲೆಯಲ್ಲಿ ಕುಳಿತಿದ್ದರು. ಅತ್ಯಂತ ಅಪರೂಪದ ದೃಶ್ಯ ಅದಾಗಿತ್ತು. ಶ್ರೀಸತ್ಯಾತ್ಮತೀರ್ಥರು ಹಾಗೂ ಶ್ರೀವಿದ್ಯಾವಲ್ಲಭತೀರ್ಥರು ಉಭಯ ಶ್ರೀಪಾದಂಗಳವರೂ ಎಲ್ಲರಿಗೂ ತೀರ್ಥವನ್ನು ನೀಡಿದರು. ಪರ್ಯಾಯ ಶ್ರೀಗಳವರು ಪ್ರತಿಯೊಬ್ಬ ವಿದ್ವಾಂಸರಿಗೂ ದಕ್ಷಿಣೆಯನ್ನು ನೀಡಿದರು. ಸುಮಾರು 350ಕ್ಕೂ ಹೆಚ್ಚು ವಿದ್ವಾಂಸರಿಗೆ ಏಕಕಾಲದಲ್ಲಿ ಉಭಯ ಶ್ರೀಗಳವರ ಜೊತೆ ಶ್ರೀಕೃಷ್ಣ ಮೂಲರಾಮರ ಪ್ರಸಾದ ಸ್ವೀಕರಿಸುವ ಸದವಕಾಶ ಲಭಿಸಿತ್ತು. 51 ದಿನಗಳ ಚಾತುರ್ಮಾಸ್ಯದ ಅಂಗವಾಗಿ 51 ಭೋಜನ ಪದಾರ್ಥಗಳನ್ನು ಮಾಡಿಸಿ ಬ್ರಾಹ್ಮಣಾಂತರ್ಯಾಮೀ ಶ್ರೀಕೃಷ್ಣನಿಗೆ ಸಮರ್ಪಿಸಲಾಯಿತು. ವಿದ್ವಾಂಸರು-ವಿದ್ಯಾರ್ಥಿಗಳು ಎಲೆ ತುಂಬಿ ಬಡಿಸಿದ ಆ ಪದಾರ್ಥಗಳನ್ನು ಹೊಟ್ಟೆತುಂಬಾ ತಿಂದು ಮನದುಂಬಿ ಸಂತೋಷಪಟ್ಟು ಬಾಯಿತುಂಬ ಶ್ರೀವಿದ್ಯಾವಲ್ಲಭತೀರ್ಥರ ಔದಾರ್ಯದ ಔತಣವನ್ನು ಹೊಗಳಿದರು.

ಇದೇ ಪ್ರಸಂಗದಲ್ಲಿ ಭಾದ್ರಪದ ದ್ವಾದಶಿಯಂದು ರಾತ್ರಿ ಚೌಕಿಯಲ್ಲಿ ಶ್ರೀಉತ್ತರಾದಿಮಠಾಧೀಶರು ಶ್ರೀಕೃಷ್ಣಮಠದ ಪರಿಚಾರಕರು, ವಿದ್ವಾಂಸರು ಮೊದಲಾದ ಎಲ್ಲರಿಗೂ 19 ಬಗೆಯ ಭಕ್ಷ್ಯಗಳನ್ನು ಮಾಡಿಸಿ ಉಪಚರಿಸಿದ್ದನ್ನೂ ಸ್ಮರಿಸಿಕೊಳ್ಳಬಹುದು.

**ಸೀಮೋಲ್ಲಂಘನ**

ಅಂದೇ ಮಧ್ಯಾಹ್ನ 3-30ಕ್ಕೆ ಪರ್ಯಾಯ ಶ್ರೀಗಳವರು ತಮ್ಮಮಠದ ಪಂಡಿತರು, ದಿವಾನರು ಹಾಗೂ ಗಣ್ಯರೊಂದಿಗೆ ಸೀಮೋಲ್ಲಂಘನೆಗಾಗಿ ಸಿದ್ಧರಾದ

ಶ್ರೀಪಾದಂಗಳವರನ್ನು ಬೀಳ್ಕೊಡಲು ಶ್ರೀಮದುತ್ತರಾದಿಮಠಕ್ಕೆ ಆಗಮಿಸಿದರು. ಶ್ರೀಮೂಲರಾಮನಿಗೆ ವಂದಿಸಿ ಶ್ರೀಜಯತೀರ್ಥರಿಗೆ, ಶ್ರೀವಿದ್ಯಾಧೀಶರಿಗೆ ಮಂಗಳಾರತಿ ಬೆಳಗಿ ನಮಸ್ಕರಿಸಿದ ಶ್ರೀಗಳವರು ವಾದ್ಯ ವೈಭವಗಳೊಂದಿಗೆ ರಥಬೀದಿಯ ಮೂಲಕ ಶ್ರೀಕೃಷ್ಣಮಠಕ್ಕೆ ತೆರಳಿ ಶ್ರೀಕೃಷ್ಣನ ದರ್ಶನವನ್ನು ಮಾಡಿಸಿ ರಥಬೀದಿಯಿಂದ ಹೊರಗೆ ಹೊರಡುವವರೆಗೆ ಜೊತೆಯಲ್ಲೇ ಬಂದು ಶ್ರೀಪಾದಂಗಳವರನ್ನು ಬೀಳ್ಕೊಟ್ಟರು. ಉಭಯ ಶ್ರೀಪಾದರಿಗೂ ಅವ್ಯಕ್ತವಾದ ಅವರ್ಣನೀಯವಾದ ವಿರಹದ ಯಾತನೆಯ ಅನುಭವ ಆದದ್ದನ್ನು ಅಲ್ಲಿ ನೆರದವರು ಅನುಮಾನಿಸಿದರು.

ಶ್ರೀಗಳವರು ಪುಣ್ಯತಮವಾದ ಶ್ರೀಮದಾಚಾರ್ಯರ ತಾಣವಾದ ಪಾಜಕಕ್ಷೇತ್ರಕ್ಕೆ ಪ್ರಯಾಣಿಸಿದರು. ಪರಶುರಾಮದೇವರು ಹಾಗೂ ದುರ್ಗಾದೇವಿಯ ದರ್ಶನಗೈದು ಪಾಜಕವನ್ನು ತಲುಪಿದ ಗುರುಗಳನ್ನು ಸ್ವಾಗತಿಸಲು ಸಾವಿರಾರು ಭಕ್ತರು ಕಾದಿದ್ದರು. ವೇ.ಮೂ. ಮಾಧವ ಉಪಾಧ್ಯಾಯರು ಪೂರ್ಣಕುಂಭದೊಂದಿಗೆ ಸ್ವಾಗತಿಸಿದರು. ವಾಸುದೇವತೀರ್ಥಕ್ಕೆ ಬಂದು ಶ್ರೀಮದಾಚಾರ್ಯರ ಕರಾರ್ಚಿತ ಅನಂತಪದ್ಮನಾಭಪ್ರತಿಮೆಗೆ ಆರತಿ ಬೆಳಗಿ, ಶ್ರೀವಾದಿರಾಜಪ್ರತಿಷ್ಠಿತ ಶ್ರೀಮನ್ಮಧ್ವಾಚಾರ್ಯರ ದರ್ಶನ ಪಡೆದ ಶ್ರೀಗಳವರು ಸಭೆಯಲ್ಲಿ ಪಾಲ್ಗೊಂಡರು. ವಿದ್ವಾಂಸರಿಂದೊಡಗೂಡಿದ ಆ ಸಭೆಯಲ್ಲಿ ಶ್ರೀಗಳವರು ಶ್ರೀಮದಾಚಾರ್ಯರ ಪಾದಧೂಳಿಯ ಮಹಿಮೆಯನ್ನು ತಿಳಿಸುತ್ತ ಆಚಾರ್ಯರಲ್ಲಿ ಮತ್ತೊಮ್ಮೆ ತಮ್ಮ ಚಾತುರ್ಮಾಸ್ಯದ ಕರ್ಮಗಳನ್ನು ಸಮರ್ಪಿಸಿದರು. ನೆರೆದ ಎಲ್ಲ ಭಕ್ತರಿಗೆ ಅಲ್ಪ ಉಪಹಾರವನ್ನೂ ವ್ಯವಸ್ಥೆಗೊಳಿಸಲಾಗಿತ್ತು .

**ಸಮಾರೋಪ ಸಮಾರಂಭ**

ಪವಿತ್ರ ಪಾಜಕದಿಂದ ಮತ್ತೆ ಉಡುಪಿಯ ಶ್ರೀಕೃಷ್ಣನ ಸನ್ನಿಧಿಗೆ ಶ್ರೀಗಳವರ ಆಗಮನ. ಪರ್ಯಾಯ ಶ್ರೀಗಳವರಿಂದ ವ್ಯವಸ್ಥೆ ಮಾಡಲಾಗಿದ್ದ ಸಂಜೆಯ ಸಮಾರೋಪ ಸಮಾರಂಭಕ್ಕೆ ಆಗಮಿಸಿದ ಶ್ರೀಗಳವರನ್ನು ರಾಜಾಂಗಣಕ್ಕೆ ಗೌರವಾದರಗಳಿಂದ ಸ್ವಾಗತಿಸಲಾಯಿತು. ಅಂದು ಸಂಜೆಯ ಮತ್ತೊಂದು ವಿಶೇಷವೆಂದರೆ ಶ್ರೀ ವಿಶ್ವೇಶತೀರ್ಥಶ್ರೀಪಾದಂಗಳವರ ದಿವ್ಯ ಉಪಸ್ಥಿತಿ. ಮುಂಬೈಯಲ್ಲಿ ಚಾತುರ್ಮಾಸ್ಯಕ್ಕೆ ಕುಳಿತಿದ್ದ ಪೇಜಾವರ ಶ್ರೀಗಳವರು ಅಂದು ಬೆಳಗ್ಗೆ ತಮ್ಮ ಚಾತುರ್ಮಾಸ್ಯವನ್ನು ಸಮಾಪನಗೊಳಿಸಿ ಸಂಜೆ ಉಡುಪಿಗೆ ಆಗಮಿಸಿ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ಸಭೆಗೆ ಮೆರುಗನ್ನು ನೀಡಿದರು.

ಮೂರುಅಗ್ನಿಗಳಂತೆ ಶ್ರೀಕಾಣಿಯೂರು, ಶ್ರೀಪೇಜಾವರ ಹಾಗೂ ಶ್ರೀಉತ್ತರಾದಿಮಠದ ಪೀಠಾಧಿಪತಿಗಳು ಅಂದು ಸಂಜೆ ರಾಜಾಂಗಣದಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಕಂಗೊಳಿಸಿದರು. ಪಂ. ಸಗ್ರಿ

ರಾಘವೇಂದ್ರಾಚಾರ್ಯರು ಕಾರ್ಯಕ್ರಮವನ್ನು ನಿರ್ವಹಿಸಿದರು. ಉಡುಪಿ ಸಂಸ್ಕೃತಕಾಲೇಜಿನ ಪ್ರಾಚಾರ್ಯರಾದ ಡಾ.ಸುರೇಶಾಚಾರ್ಯರು ಸ್ವಾಗತ ಕೋರುತ್ತಾ ಚಾತುರ್ಮಾಸ್ಯದ ಕೆಲ ರಸನಿಮಿಷಗಳನ್ನು ಮೆಲಕು ಹಾಕುತ್ತಾ ಶ್ರೀಪಾದಂಗಳವರ ಚಾತುರ್ಮಾಸ್ಯದ ಸಾತ್ವಿಕಪರಿಣಾಮದ ಬಗ್ಗೆ ಮಾತನಾಡಿದರು. ಚಾತುರ್ಮಾಸ್ಯದ ಕಾರ್ಯಕ್ರಮ ಸಕ್ರಮವಾಗಿ, ಸುವ್ಯವಸ್ಥಿತವಾಗಿ ನಡೆಯಲು ಕಾರಣೀಭೂತರಾದ ಮುಖ್ಯವ್ಯಕ್ತಿಗಳನ್ನು ಗೌರವಿಸಿ ಆಶೀರ್ವದಿಸಿದ ಮೇಲೆ ಪರ್ಯಾಯ ಶ್ರೀಗಳವರು ತುಂಬು ಹೃದಯದಿಂದ ಸಮಾರೋಪದ ಪ್ರವಚನ ನೀಡಿದರು. ಅವರ ಪ್ರತಿವಚನದಲ್ಲೂ ಪ್ರಾಮಾಣಿಕತೆ ಎದ್ದು ತೋರುತ್ತಿತ್ತು. ಔದಾರ್ಯದ ಗುಣ ಹೊರಸೂಸುತ್ತಿತ್ತು, ಬಿಚ್ಚು ಮನಸ್ಸಿನ ಅವರ ಮಾತಿನಲ್ಲಿ ಶ್ರೀ ಸತ್ಯಾತ್ಮರ ಮೇಲಿನ ಪ್ರೀತಿ, ಗೌರವ, ಆದರಗಳು ಎದ್ದು ಕಾಣುತ್ತಿತ್ತು. ಶ್ರೀಸತ್ಯಪ್ರಮೋದತೀರ್ಥರ ಕೊನೆಯ ಆಸೆಯಾದ ಉಡುಪಿಯ ಶ್ರೀಕೃಷ್ಣನ ದರ್ಶನವನ್ನು ಮತ್ತೊಮ್ಮೆ ನೆನೆಸಿಕೊಂಡು ಆ ಗುರುಗಳ ಆಸೆ ಇಂದು ಈಡೇರಿದೆ. ಶ್ರೀಸತ್ಯಾತ್ಮರ ರೂಪದಲ್ಲಿ ಅವರೇ ಇಲ್ಲಿ ಇದ್ದಾರೆಂದು ಉದ್ಗಾರ ತೆಗೆದರು. ಸಾವಿರಾರು ವಿದ್ವಾಂಸರಿಗೆ ಸತ್ಕಾರ ಮಾಡುವ, ಲಕ್ಷಾಂತರ ವೈಷ್ಣವರಿಗೆ ಊಟೋಪಚಾರ ಮಾಡಿಸುವ ದೊಡ್ಡ ಸುಯೋಗ ನಮಗೆ ಲಭಿಸಿದೆ. ಇದು ಶ್ರೀಕೃಷ್ಣ ಮುಖ್ಯಪ್ರಾಣರು ನನ್ನ ಮೇಲೆ ತೋರಿದ ಕರುಣೆ ಎಂದರು. ಶ್ರೀಸತ್ಯಾತ್ಮತೀರ್ಥರ ಚಾತುರ್ಮಾಸ್ಯ ಆರಂಭದ ದಿನದಿಂದ ಇಂದಿನವರೆಗೆ ನಿರ್ವಿಘ್ನವಾಗಿ ವೈಭವದಿಂದ ನಡೆದು ಬಂದದ್ದು (ಆರಂಭದ ದಿನ ಶೋಭಾಯಾತ್ರೆಗೆ ಮಳೆ ತೊಂದರೆ ಕೊಡದಿರುವುದನ್ನು ನೆನಪಿಸಿಕೊಂಡರು) ಶ್ರೀಕೃಷ್ಣ ಮುಖ್ಯಪ್ರಾಣರಿಗೆ ಸಮ್ಮತವಾಗಿದೆ ಸಂತೋಷವಾಗಿದೆ ಎಂಬುದಕ್ಕೆ ಸಾಕ್ಷಿ ಎಂದು ಘೋಷಿಸಿದರು. ಶ್ರೀಜಯತೀರ್ಥವಿದ್ಯಾಪೀಠದ ಕುಲಪತಿಗಳಾದ ಶ್ರೀ ಪಂ. ಗುತ್ತಲ ರಂಗಾಚಾರ್ಯರು ಹಾಗೂ ಶ್ರೀಸತ್ಯಧ್ಯಾನವಿದ್ಯಾಪೀಠದ ಕುಲಪತಿಗಳಾದ ಶ್ರೀ ಪಂ. ವಿದ್ಯಾಸಿಂಹಾಚಾರ್ಯ ಮಾಹುಲಿ ಇವರುಗಳು ತಮ್ಮ ಶಿಷ್ಯಸಮೇತ ಚಾತುರ್ಮಾಸ್ಯಕ್ಕೆ ಆಗಮಿಸಿ ಎರಡು ತಿಂಗಳುಗಳ ಕಾಲ ಇಲ್ಲಿಯೇ ನೆಲಸಿ ನಿರಂತರ ಪಾಠಗಳನ್ನು ಹೇಳಿದ್ದನ್ನು ಉಲ್ಲೇಖಿಸಿ ತಮ್ಮ ಸಂತೋಷವನ್ನು ಅಭಿವ್ಯಕ್ತಮಾಡಿದರು. ಪರ್ಯಾಯ ಶ್ರೀಗಳವರು ಶ್ರೀ ಸತ್ಯಾತ್ಮತೀರ್ಥರಿಗೆ ಮೂಲರಾಮನ ಸೇವೆಗಾಗಿ 111 ಪದಾರ್ಥಗಳನ್ನು ಅರ್ಪಿಸಿದರು. ಅದರಲ್ಲಿ ಕೊಡದಿರುವ ವಸ್ತುಗಳೇ ಇಲ್ಲ ಎಂದರೆ ಅತಿಶಯೋಕ್ತಿ ಅಲ್ಲ. ಪಂಚವ್ಯಾಸಮುಷ್ಠಿಗಳ ಪೂಜೆಗಾಗಿ (ಸುಮಾರು ಏಳೂವರೆ ಲಕ್ಷ ಬೆಳೆಬಾಳುವ) ಬಂಗಾರದ ತಟ್ಟೆ, ಐದುಲಕ್ಷ ನಗದು ಹಣ, ಸಕಲ ಪೂಜಾಸಾಮಗ್ರಿಗಳು, ವ್ಯಾಸಪೀಠ, ಚಿನ್ನದ ನಾಣ್ಯಗಳು, ದಿನಸಿಪದಾರ್ಥಗಳು, ಫಲಗಳು, ತರಕಾರಿಗಳು ಹೀಗೆ ಎಲ್ಲವೂ ಸೇರಿತ್ತು. ರಾಜಾಂಗಣದ ವಿಶಾಲವೇದಿಕೆ ಸಾಲದಾಯಿತು. ಶ್ರೀಸತ್ಯಾತ್ಮತೀರ್ಥರು ಹಾಗೂ ಶ್ರೀಸತ್ಯಪ್ರಮೋದತೀರ್ಥರು ತಮಗೆ ಪಾಠ ಹೇಳಿದ ಕ್ರಮವನ್ನು ವಿವರಿಸಿದ ಪರ್ಯಾಯ ಶ್ರೀಗಳವರು ಸೌಜನ್ಯ, ಔದಾರ್ಯ ವಿನಯಾದಿಗುಣಗಳನ್ನು ವ್ಯಕ್ತ ಮಾಡುತ್ತ ತಮ್ಮದೇ

ಆದ ಸ್ಥಾನದಲ್ಲಿ ಮೆರೆದರು. ಶ್ರೀಸತ್ಯಾತ್ಮತೀರ್ಥರಿಗೆ ಅಭಿನಂದನಾ ಸನ್ಮಾನಪತ್ರವನ್ನು ರಜತಶಾಸನದ ರೂಪದಲ್ಲಿ ಅರ್ಪಿಸಿದರು.

ನಂತರ ಪೇಜಾವರಮಠದ ಪರಮಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥರು ಮಾತನಾಡುತ್ತ ''ಈ ಐತಿಹಾಸಿಕವಾದ ವೈಭವದ ಚಾತುರ್ಮಾಸ್ಯವನ್ನು ಪ್ರತ್ಯಕ್ಷವಾಗಿ ಒಂದು ದಿನವಾದರೂ ನೋಡಲು ಬಂದಿದ್ದೇನೆ. ಸಮಗ್ರ ಉಡುಪಿ ವೈದಿಕಮಯವಾಗಿದೆ. ಸಾಕ್ಷಾತ್ ಶ್ರೀಪದ್ಮನಾಭತೀರ್ಥರೇ ಶ್ರೀಸತ್ಯಾತ್ಮತೀರ್ಥರ ರೂಪದಲ್ಲಿದ್ದಾರೆಂದು ನಮ್ಮ ಭಾವನೆ. ತುಂಬಾ ಸಂತೋಷವಾಗಿದೆ. ಶ್ರೀಕೃಷ್ಣರಾಮರ ಉತ್ಸವ ವೈಭವದಿಂದ ನಡೆದಿದೆ. ಶ್ರೀಪದ್ಮನಾಭತೀರ್ಥರ ಪರಂಪರೆಗೂ ಉಡುಪಿಯ ಅಷ್ಟಮಠಗಳಿಗೂ ಅಂದಿನಿಂದಲೂ ವಿಶೇಷ ಬಾಂಧವ್ಯವಿದೆ. ಇದು ಇನ್ನೂ ಹೆಚ್ಚೆಚ್ಚು ಮುಂದೆ ಸಾಗಲಿ. ಪರ್ಯಾಯ ಶ್ರೀಗಳವರು ಸಮರ್ಥವಾಗಿ ಎಲ್ಲವನ್ನು ನಿರ್ವಹಿಸಿದ್ದಾರೆ. ಅದಕ್ಕೆ ಅವರಿಗೆ ನಮ್ಮ ವಿಶೇಷ ಅಭಿನಂದನೆಗಳು. ಇದು ಇಲ್ಲಿಗೆ ನಿಲ್ಲದೇ ಮುಂದೆ ನಮ್ಮ ಪರ್ಯಾಯದಲ್ಲೂ ಶ್ರೀಸತ್ಯಾತ್ಮತೀರ್ಥರು ಉಡುಪಿಯಲ್ಲಿ ಚಾತುರ್ಮಾಸ್ಯ ಕೈಗೊಳ್ಳಬೇಕೆಂದು ನಮ್ಮ ಅಪೇಕ್ಷೆ ಇದೆ'' ಎಂಬುದಾಗಿ ನುಡಿದರು. ಆ ಹಿರಿಯ ಯತಿಗಳಾದ ಶ್ರೀ ವಿಶ್ವೇಶತೀರ್ಥರ ವಿಶಿಷ್ಟ ಸಾನ್ನಿಧ್ಯ ವೈಭವದ ಸಮಾರೋಪಕ್ಕೆ ವಿಶಿಷ್ಟಮೆರಗನ್ನು ಕೊಟ್ಟಿತು.

ಶ್ರೀಮದುತ್ತರಾದಿಮಠದ ಶ್ರೀಸತ್ಯಾತ್ಮತೀರ್ಥರು ತಮ್ಮ ಸಂದೇಶದಲ್ಲಿ ಪರ್ಯಾಯ ಶ್ರೀಗಳವರ ಔದಾರ್ಯಗುಣವನ್ನೇ ಶ್ಲಾಘಿಸಿದರು. ಶ್ರೀಕೃಷ್ಣನ ಸನ್ನಿಧಿಯಲ್ಲಿ ತಮ್ಮ ಚಾತುರ್ಮಾಸ್ಯವನ್ನು ನೆರವೇರಿಸುವುದಕ್ಕೆ ಅನುವು ಮಾಡಿಕೊಟ್ಟದ್ದಕ್ಕಾಗಿ ಹೃತ್ಪೂರ್ವಕವಾಗಿ ಪರ್ಯಾಯಶ್ರೀಪಾದರನ್ನು ಅಭಿನಂದಿಸಿದರು. ಯಾವುದಕ್ಕೂ ಹಿಂದೆ ಮುಂದೆ ನೋಡದೇ, ಆಗದು ಎನ್ನದೇ ತಮ್ಮ ಹಾಗೂ ಶ್ರೀಮಠದ ಪರಿವಾರ ಮತ್ತು ಆಗಮಿಸಿದ ಸಹಸ್ರಾರು ಶ್ರೀಮಠದ ಭಕ್ತರ ಎಲ್ಲ ಇಚ್ಛೆಗಳನ್ನು ಪೂರೈಸಿ, ಸಕಲ ಸೌಕರ್ಯಗಳನ್ನು ಮಾಡಿಕೊಟ್ಟದ್ದನ್ನು ಸ್ಮರಿಸಿದರು. ಪರ್ಯಾಯ ಪೀಠಾಧೀಶರ ಸಮಗ್ರ ಶಿಷ್ಯಪರಿವಾರದವರೂ, ಕೃಷ್ಣಮಠದ ಆಡಳಿತವರ್ಗ, ಪರಿಚಾರಕರೂ ಸಹ ಶ್ರೀವಿದ್ಯಾವಲ್ಲಭತೀರ್ಥರ ಪ್ರತಿಬಿಂಬದಂತೆ ಎಲ್ಲದಕ್ಕೂ ಸಿದ್ಧರಾಗಿ ಸಹಕರಿಸಿದ್ದನ್ನು ಸ್ಮರಿಸಿ ಆಶೀರ್ವದಿಸಿದರು. ಶ್ರೀಮಠದ ಘನತೆ-ಗೌರವಗಳಿಗೆ ಕುಂದುಬರದಂತೆ, ಆದರ-ಗೌರವ-ಪ್ರೀತಿ-ಆತ್ಮೀಯತೆಗಳು ಸ್ವಲ್ಪವೂ ಕಡಿಮೆಯಾಗದಂತೆ ಶ್ರೀಕೃಷ್ಣಮಠ ಹಾಗೂ ಕಾಣಿಯೂರುಮಠದ ಪರಿವಾರದವರು ಉಪಚರಿಸಿದ್ದನ್ನು ಶ್ಲಾಘಿಸಿದರು. ಇದೇ ಸಂದರ್ಭದಲ್ಲಿ ತಮ್ಮ 19 ನೇ ಚಾತುರ್ಮಾಸ್ಯದ ಸವಿನೆನಪಿನ ಸೇವಾರೂಪವಾಗಿ 25 ಲಕ್ಷರೂ ಗಳನ್ನು ಪಾಜಕಕ್ಷೇತ್ರದಲ್ಲಿ ನಿರ್ಮಿಸಲಾಗುತ್ತಿರುವ ಶ್ರೀಸುಮಧ್ವವಿಜಯಸೌಧಕ್ಕೆ ಕಾಣಿಕೆಯಾಗಿ ನೀಡಿದರು. ಅಲ್ಲದೇ ಚಾತುರ್ಮಾಸ್ಯದ ಮಧ್ಯದಲ್ಲಿ ಶ್ರೀಕೃಷ್ಣನಿಗೆ ರತ್ನಖಚಿತವಾದ ಗಂಡಭೇರುಂಡದ ಆಕಾರದಲ್ಲಿರುವ, ಗರುಡ ಹಾಗೂ

ಶ್ರೀಹನುಮಂತದೇವರಿಂದ ಸೇವೆಗೊಳ್ಳುತ್ತಿರುವ ಶ್ರೀರಾಮನ ಚಿತ್ರವಿರುವ ಪದಕದಿಂದ ಕೂಡಿದ 19 ಲಕ್ಷ ಮೌಲ್ಯದ ಸುವರ್ಣದ ಹಾರವನ್ನು ಸಮರ್ಪಿಸಿದ್ದನ್ನು, ಆರಂಭದ ದಿನ 19 ವಾಹನಗಳಲ್ಲಿ ತುಂಬಿದ ಹೊರೆಕಾಣಿಕೆಯನ್ನು ಸಮರ್ಪಿಸಿದ್ದನ್ನೂ ಸ್ಮರಿಸಿಕೊಳ್ಳಬಹುದು. ಅಂತೂ ಶ್ರೀ ಶ್ರೀಪಾದಂಗಳವರು ತಮ್ಮ ಚಾತುರ್ಮಾಸ್ಯದ ಆದಿ ಮಧ್ಯ ಅಂತ್ಯಗಳಲ್ಲಿ ಶ್ರೀಕೃಷ್ಣನಿಗೆ ತಮ್ಮ ಕರ್ಮಗಳ ಸಮರ್ಪಣೆಯ ಪ್ರತೀಕವಾಗಿ ಕಾಣಿಕೆಗಳನ್ನು ನೀಡುವ ಮೂಲಕ ತಮ್ಮ ವ್ರತವನ್ನು ಭಾಗವತವ್ರತ, ಸಾತ್ವಿಕವ್ರತವನ್ನಾಗಿಸಿದರು.

ನಂತರ ಐತಿಹಾಸಿಕ ಚಾತುರ್ಮಾಸ್ಯದ ಎಲ್ಲ ಅಪರೂಪದ ಘಟನೆಗಳನ್ನು ಸಚಿತ್ರವಾಗಿ ದಾಖಲಿಸಿದ, ಶ್ರೀಪದ್ಮನಾಭತೀರ್ಥರ ಪರಂಪರೆಗೂ ಅಷ್ಟಮಠಗಳಿಗೂ ಇರುವ ಅನ್ಯೋನ್ಯ ಸಂಬಂಧವನ್ನು ಸಪ್ರಮಾಣವಾಗಿ ನಿರೂಪಿಸುವ ಹಾಗೂ ತುಳುನಾಡಿನವರ ನುಡಿಯಲ್ಲೇ ಶ್ರೀಸತ್ಯಾತ್ಮತೀರ್ಥರ ಹಾಗೂ ಅವರ ಚಾತುರ್ಮಾಸ್ಯ ವೈಭವವನ್ನು ಸೆರೆಹಿಡಿದ ಅಪರೂಪದ ''ಶ್ರೀರಾಮಕೃಷ್ಣೋತ್ಸವ'' ಎಂಬ ಸ್ಮರಣಸಂಚಿಕೆಯನ್ನು ಪೂಜ್ಯ ಪೇಜಾವರ ಶ್ರೀಗಳವರು ತಮ್ಮ ಅಮೃತಹಸ್ತದಿಂದ ಬಿಡುಗಡೆ ಮಾಡಿದರು.

ಪರ್ಯಾಯ ಶ್ರೀಗಳವರು ಶ್ರೀಜಯತೀರ್ಥವಿದ್ಯಾಪೀಠದ ಕುಲಪತಿಗಳಾದ ಪಂ. ಪೂಜ್ಯ ರಂಗಾಚಾರ್ಯ ಗುತ್ತಲ, ಶ್ರೀಸತ್ಯಧ್ಯಾನವಿದ್ಯಾಪೀಠದ ಕುಲಪತಿಗಳಾದ ಪಂ. ವಿದ್ಯಾಸಿಂಹಾಚಾರ್ಯ ಮಾಹುಲಿ, ಶ್ರೀಉತ್ತರಾದಿಮಠದ ದಿವಾನರಾದ ಪಂ. ಪ್ರಹ್ಲಾಚಾರ್ಯ ಉಪಾಧ್ಯಾಯ, ಶ್ರೀಜಯತೀರ್ಥವಿದ್ಯಾಪೀಠದ ಪ್ರಾಚಾರ್ಯರಾದ ಪಂ. ಸತ್ಯಧ್ಯಾನಾಚಾರ್ಯ ಕಟ್ಟಿ ಹಾಗೂ ವಿಶ್ವಮಧ್ವಮಹಾಪರಿಷತ್ತಿನ ನಿದೇಶಕರಾದ ಪಂ. ವಿದ್ಯಾಧೀಶಾಚಾರ್ಯ ಗುತ್ತಲ ಈ ಐದು ಜನ ವಿದ್ವಾಂಸರಿಗೆ 25 ಸಹಸ್ರ ರೂಗಳನ್ನೊಳಗೊಂಡ ''ಶ್ರೀನರಸಿಂಹಾನುಗ್ರಹ ಪ್ರಶಸ್ತಿ'' ನೀಡಿ ವಿಶೇಷ ಸತ್ಕಾರವನ್ನು ಮಾಡಿದರು.

ಅದೇರೀತಿಯಾಗಿ ಶ್ರೀ ಶ್ರೀಪಾದಂಗಳವರೂ ಉಡುಪಿಯ ವಿದ್ವಾಂಸರಾದ, ಈ ಚಾತುರ್ಮಾಸ್ಯದ ಸಂದರ್ಭದಲ್ಲಿ ವಿಶೇಷ ಸೇವೆಯನ್ನು ಸಲ್ಲಿಸಿದ, ಪಂ. ಸಗ್ರಿ ರಾಘವೇಂದ್ರಾಚಾರ್ಯ ಉಪಾಧ್ಯಾಯ, ಪಂ. ಬಲರಾಮಾಚಾರ್ಯ ಭಟ್ಟ, ಪಂ. ಸುರೇಶಾಚಾರ್ಯ, ಪಂ. ಗೋಪಾಲಾಚಾರ್ಯ ಇವರಿಗೆ ವಿಶೇಷವಾಗಿ ಸತ್ಕಾರ ಮಾಡಿದರು.

ಕೊನೆಯದಿನ ಕಿಕ್ಕಿರಿದ ರಾಜಾಂಗಣ. ಅನೇಕರ ಕಣ್ಣಲ್ಲಿ ನೀರು. ನಾಳೆಯಿಂದ ಶ್ರೀಸತ್ಯಾತ್ಮತೀರ್ಥರ ದರ್ಶನ ಪ್ರವಚನ ಶ್ರವಣದ ಭಾಗ್ಯವಿಲ್ಲವಲ್ಲಾ ! ಎಂಬ ದುಃಖ. ಸಾಮಾನ್ಯರಿಂದ  ಪಂಡಿತರವರೆಗೆ ಎಲ್ಲರಿಗೂ ಶ್ರೀಗಳವರ ಪ್ರವಚನದಲ್ಲಿರುವ ಪ್ರಾಮಾಣಿಕ ಕಳಕಳಿ, ಅವರು ನೀಡುವ ಸಂದೇಶ-ಆದೇಶಗಳು ಗಾಢಪರಿಣಾಮವನ್ನು

ಮಾಡಿದ್ದರಲ್ಲಿ ಸಂದೇಹವೇ ಇಲ್ಲ. ಎಲ್ಲ ಸಜ್ಜನರಿಗೂ ಶ್ರೀಗಳವರ ಬೀಳ್ಕೊಡುಗೆ ಸಹಿಸಲಾರದ ಭಾರವಾಗಿತ್ತು. ಎಲ್ಲರೂ ಉತ್ತರಾದಿಮಠದ ಶಿಷ್ಯರೊಡನೆ ತಮ್ಮ ಅನುಭವವನ್ನು ಮಾತಿನ ಮೂಲಕ, ಬರವಣಿಗೆಯ ಮೂಲಕ ಹೇಳಿಕೊಳ್ಳುತ್ತಿರುವುದು ಸರ್ವೇ ಸಾಮಾನ್ಯವಾಗಿತ್ತು .

ಶ್ರೀಸತ್ಯಾತ್ಮತೀರ್ಥರ ಉಡುಪಿಯ ಐತಿಹಾಸಿಕ ಚಾತುರ್ಮಾಸ್ಯದಲ್ಲಿ ಪರ್ಯಾಯ ಶ್ರೀಕಾಣಿಯೂರು ಶೀಗಳವರಲ್ಲದೇ ಅಷ್ಟಮಠಾಧಿಪತಿಗಳಲ್ಲಿ ಶ್ರೀಕೃಷ್ಣಾಪುರಮಠದ ಹಾಗೂ ಶ್ರೀಅದಮಾರುಮಠದ ಹಾಗೂ ಶ್ರೀಶೀರೂರುಮಠದ ಶ್ರೀಗಳವರೂ ಸಹ ಉಡುಪಿಯಲ್ಲಿಯೇ ಚಾತುರ್ಮಾಸ್ಯವ್ರತ ಕೈಗೊಂಡಿದ್ದು ವಿಶೇಷ. ಈ ಎಲ್ಲ ಪೀಠಾಧಿ ಪತಿಗಳ ಪರಸ್ಪರ ಸಮಾಗಮ, ಸ್ನೇಹ, ಪ್ರೀತಿ, ಆದರಾದಿಗಳನ್ನು ನೋಡುವುದೇ ಭಾಗ್ಯ.

ಐದೂ ಜನ ಪೀಠಾಧಿಪತಿಗಳು ಪರಸ್ಪರ ತಮ್ಮ ತಮ್ಮ ಮಠಗಳಿಗೆ ವಾದ್ಯ ವೈಭವ, ಆನೆ, ಪಲ್ಲಕ್ಕಿ, ಜೋಡು ಕೋಲು, ಬಿರುದಾವಳಿಗಳ ಮೂಲಕ ಆಹ್ವಾನಿಸಿ ಪರಸ್ಪರ ಗೌರವಾದರಾದಿಗಳನ್ನು ಮಾಡಿದರು. ಭಗವದ್ಭಕ್ತರ ಸಮಾಗಮದ ಆನಂದ ವಿವರಿಸಲಾಗದು. ಅನುಭವಿಸಲೇಬೇಕು.

ಪಂ.ಪೂಜ್ಯ ಮಾಹುಲಿ ವಿದ್ಯಾಸಿಂಹಾಚಾರ್ಯರು ನಡೆಸಿದ ಗೀತಾಭಾಷ್ಯಮಂಗಳಕ್ಕೆ ಹಾಗೂ ಪಂ. ಸತ್ಯಧ್ಯಾನಾಚಾರ್ಯ ಕಟ್ಟಿ ಇವರ ಐತರೇಯಭಾಷ್ಯಮಂಗಳಕ್ಕೆ ಎಲ್ಲ ಪೀಠಾಧಿಪತಿಗಳು ಆಗಮಿಸಿ ಆಶೀರ್ವದಿಸಿದ್ದು ಆ ಎಲ್ಲ ಯತಿಗಳ ಔದಾರ್ಯವನ್ನು, ಅನುಗ್ರಹವನ್ನು ತೋರಿಸುತ್ತದೆ.

ಶ್ರೀಉತ್ತರಾದಿಮಠದ ಒಂದುನೂರು ಆಚಾರಸಂಪನ್ನ ಗೃಹಸ್ಥಪಂಡಿತರಿಗೆ ಅನಂತಪದ್ಮನಾಭವ್ರತದಂದು ಶ್ರೀಕೃಷ್ಣಾಪುರಮಠದ ಶ್ರೀಗಳವರು ಅವರ ಮಠಕ್ಕೆ ವೈಶ್ವಾನರಯಜ್ಞಕ್ಕೆ ಆಮಂತ್ರಣವನ್ನು ಕೊಟ್ಟು ಮೃಷ್ಟಾನ್ನ ಭೋಜನವನ್ನು ಮಾಡಿಸಿದ್ದು ವಿಶೇಷವಾಗಿತ್ತು .

ಚಾತುರ್ಮಾಸ್ಯದಲ್ಲಿ ನಡೆದ ಎಲ್ಲ ಕಾರ್ಯಕ್ರಮಗಳೂ ಸಜ್ಜನರ ಮಾನಸ ಆಗಸದಲ್ಲಿ ತಾರೆಗಳಂತೆ ಕಂಗೊಳಿಸಿದರೆ ಇದಕ್ಕೆ ಬೆಳದಿಂಗಳಂತೆ ಶೋಭೆಯನ್ನು ನೀಡಿದ್ದು ಶ್ರೀಸತ್ಯಾತ್ಮತೀರ್ಥರಿಂದ ಶ್ರೀಕಾಣಿಯೂರು ಶ್ರೀಪಾದರಿಗೆ ನಡೆದ ಶ್ರೀಮನ್ನ್ಯಾಯಸುಧಾ ಜಿಜ್ಞಾಸಿಧಿಕರಣದ ಪಾಠ. ಪ್ರತಿನಿತ್ಯ ತಪ್ಪದೇ ಎರಡು ಹೊತ್ತು ಪಾಠ ನಡೆಯುತ್ತಿತ್ತು . ತಮ್ಮ ಪರ್ಯಾಯದ ಗುರುತರ ಜವಾಬ್ದಾರಿ, ಕಾರ್ಯದ ಒತ್ತಡಗಳಿದ್ದರೂ ಶ್ರೀವಿದ್ಯಾವಲ್ಲಭತೀರ್ಥರು ಪಾಠದ ಪರಿಪಾಠವನ್ನು ನಿಲ್ಲಿಸದಿದ್ದದು ಅವರ ಅಧ್ಯಯನದ ದೀಕ್ಷೆಯನ್ನು ತೋರಿಸುತ್ತಿತ್ತು .

ಇದಲ್ಲದೇ ದಿನನಿತ್ಯದ ಪಾಠಗಳಾದ ಶ್ರೀಮನ್ನ್ಯಾಯಸುಧಾ, ಋಗ್ಭಾಷ್ಯ,

ಶ್ರೀಮದ್ಭಾಗವತಾದಿಗಳಲ್ಲದೇ ತಲವಕಾರ, ಷಟ್ಪ್ರಶ್ನ ಹಾಗೂ ಮಾಂಡೂಕ ಉಪನಿಷತ್ತುಗಳ ಪಾಠವನ್ನು ಟೀಕಾಟಿಪ್ಪಣಿಗಳ ಸಮೇತ ಹೇಳಿದ್ದು ವಿಶೇಷವಾಗಿತ್ತು.

ಮಂಗಳಮಯವಾದ ಮಹಾಪರ್ವಕಾಲಕ್ಕಿಂತಲೂ ಅಧಿಕಪುಣ್ಯವನ್ನು ತಂದುಕೊಡುವ ಈ ಅಪರೂಪದ ಚಾತುರ್ಮಾಸ್ಯ ತನ್ನ ನೂರಾರು ವಿಶೇಷಗಳಿಂದ ಸಜ್ಜನರ ಮನಸ್ಸಿನಲ್ಲಿ ನೂರಾರು ವರ್ಷಗಳವರೆಗೆ ತನ್ನ ಗಾಢಚಿತ್ರವನ್ನು ಮೂಡಿಸುತ್ತದೆ. ಶ್ರೀಮೂಲರಾಮ-ಕೃಷ್ಣ-ಅನಂತೇಶ್ವರನ ಸನ್ನಿಧಾನದಲ್ಲಿ ನಡೆದ ಈ ಚಾತುರ್ಮಾಸ್ಯದಲ್ಲಿ ಭಾಗಿಯಾದವನ ಸೌಭಾಗ್ಯಕ್ಕೆ ಎಣೆಯೇ ಇಲ್ಲ.

ಪರ್ಯಾಯ ಶ್ರೀಪಾದಂಗಳವರ ಔದಾರ್ಯ, ಆತ್ಮೀಯತೆ, ವಿದ್ವತ್ಪಕ್ಷಪಾತ, ಅತಿಥಿ ಸತ್ಕಾರದಲ್ಲಿರುವ ದೀಕ್ಷೆ ಅಸದೃಶವಾದದ್ದು. ಅವರ ಪರಿವಾರದವರು ಮಾಡಿದ ಶ್ರೀಮಠದ ಹಾಗೂ ಶ್ರೀಮಠದ ಭಕ್ತರ ಸೇವೆ, ಅವರು ಒದಗಿಸಿದ ಸೌಲಭ್ಯಗಳಿಂದಾಗಿ ಕಾರ್ಯಕ್ರಮದ ಪ್ರತಿಹಂತವೂ ಯಶಸ್ವಿಯಾಗಿ ನಡೆಯಿತು. ಇದರಲ್ಲಿ ಪ್ರತ್ಯಕ್ಷ-ಪರೋಕ್ಷವಾಗಿ ಪರಿಶ್ರಮ ಪಟ್ಟ ನೂರಾರು ಕೈಗಳು, ಆಲೋಚಿಸಿದ ತಲೆಗಳು ನೂರಾರು. ಅವರೆಲ್ಲರಿಗೂ ನಮ್ಮ ವಂದನೆಗಳು.

ಈ ಮಹಾ ಸೌಭಾಗ್ಯವನ್ನು ಭಕ್ತರಿಗೆಲ್ಲಾ ಒದಸಿಕೊಟ್ಟ ಉತ್ತರಾದಿಮಠಾಧೀಶರಿಗೆ ಹಾಗೂ ಕಾಣಿಯೂರು ಮಠಾಧೀಶರಿಗೆ ಅನಂತಾನಂತ ಸಾಷ್ಟಾಂಗ ನಮನಗಳನ್ನಲ್ಲದೇ ಬೇರೆ ಏನನ್ನೂ ಅರ್ಪಿಸಲು ಸಾಧ್ಯವಿಲ್ಲ.

✍ **ಚಿ.ಮು.ಶ್ರೀ**

## ಆದೋನಿಯ ಶ್ರೀಮಠದಲ್ಲಿ ಸಂವತ್ಸರ ಪ್ರವಚನ ಮಾಲಿಕೆ

ಪರಮಪೂಜ್ಯ ಶ್ರೀಶ್ರೀಪಾದಂಗಳವರ ಆದೇಶಾನುಸಾರ ಆಂಧ್ರಪ್ರದೇಶದ ಆದೋನಿ ಪಟ್ಟಣದಲ್ಲಿ ಶ್ರೀಮಹಾಭಾರತ ತಾತ್ಪರ್ಯನಿರ್ಣಯದ ಸಂವತ್ಸರ ಪ್ರವಚನ ಮಾಲಿಕೆಯನ್ನು ದಿನಾಂಕ 17-08-2014 ರಂದು ಆರಂಭಿಸಲಾಯಿತು. ಈ ಕಾರ್ಯಕ್ರಮದ ಮೊದಲಮಾಲಿಕೆಯನ್ನು ಪಂ|| ಫಣೀಂದ್ರಾಚಾರ್ಯ ಹೊಸಪೇಟೆ ನಡೆಸಿಕೊಟ್ಟರು. ದಿನಾಂಕ 19-09-2014 ರಿಂದ 21-09-2014 ರವರೆಗೆ ಇದೇ ಪ್ರವಚನ ಮಾಲಿಕೆಯ ದ್ವಿತೀಯ ಮಾಲಿಕೆಯನ್ನು ಪಂ|| ಪುರಂದರಾಚಾರ್ಯ ಹಯಗ್ರೀವ ಇವರು ನಡೆಸಿಕೊಟ್ಟರು.

ಇದೇ ಸಂದರ್ಭದಲ್ಲಿ ಪರಮಪೂಜ್ಯ ಶ್ರೀ ಶ್ರೀಪಾದಂಗಳವರು ದಿಗ್ವಿಜಯವನ್ನು ಮಾಡಿ ಶ್ರೀಮಠದ ಸಂಸ್ಥಾನ ಪೂಜೆಯನ್ನು ನೆರವೇರಿಸಿ, ದ್ವಿತೀಯ ಪ್ರವಚನಮಾಲಿಕೆಯ ಮಂಗಳಕಾರ್ಯಕ್ರಮದ ಘನ ಅಧ್ಯಕ್ಷತೆಯನ್ನು ವಹಿಸಿ, ತಮ್ಮ ಅಮೃತೋಪದೇಶದ ಮೂಲಕ ನೆರೆದ ಸಕಲ ಸದ್ಭಕ್ತರನ್ನು ಅನುಗ್ರಹಿಸಿದ್ದು ವಿಶೇಷವಾಗಿತ್ತು.

## ಮಣ್ಣೂರಿನ ಶ್ರೀಉತ್ತರಾದಿಮಠದ ಕಟ್ಟಡಕ್ಕಾಗಿ ಮನವಿಪತ್ರ

ಮಣ್ಣೂರು ಪವಿತ್ರವಾದ ಕ್ಷೇತ್ರ. ಪಾವನ ಭೀಮಾತೀರ. ಧೃವಕರಾರ್ಚಿತ ಶ್ರೀಚನ್ನಕೇಶವನ ದಿವ್ಯ ಸನ್ನಿಧಾನ. ಶ್ರೀಮದಾಚಾರ್ಯರ ಸಾಕ್ಷಾತ್ ಶಿಷ್ಯರಾದ ಶ್ರೀಮದುತ್ತರಾದಿ ಮಠಾಧೀಶರಾದ ಶ್ರೀಮಾಧವತೀರ್ಥರು ನೆಲೆಸಿದ ಪುಣ್ಯಭೂಮಿ. ತಪಸ್ವಿಗಳೂ ಜ್ಞಾನಿಗಳೂ ಆದ ಶ್ರೀವಿದ್ಯಾನಿಧಿತೀರ್ಥರ, ಶ್ರೀರಘುನಾಥತೀರ್ಥರ, ಶ್ರೀರಘುವರ್ಯತೀರ್ಥರ ಸಾಧನಭೂಮಿ. ಅಸಂಖ್ಯ ಪಂಡಿತದಿಗ್ಗಜರನ್ನು ಸಿದ್ಧಪಡಿಸಿದ ಶ್ರೀರಘೂತ್ತಮತೀರ್ಥರು ನೆಲೆಸಿದ ನೆಲ. ದ್ವೈತಸಿದ್ಧಾಂತ ಮುಕುಟಮಣಿಗಳಾದ ಶ್ರೀವೇದೇಶತೀರ್ಥರ, ಶ್ರೀಯಾದವಾರ್ಯರ ಜನ್ಮಭೂಮಿ.

ಶ್ರೀರಘುನಾಥರು ಅನೇಕಾನೇಕ ವರ್ಷಗಳವರೆಗೆ ಇಲ್ಲಿ ವಿದ್ಯಾಪೀಠವನ್ನು ನಡೆಸಿದರು. ಶ್ರೀವೇದೇಶತೀರ್ಥರು ಶ್ರೀಯಾದವಾರ್ಯರನ್ನು ಅದ್ಭುತ ಪ್ರಕಾಂಡ ಪಂಡಿತರನ್ನಾಗಿ ಮಾಡಿ ಶ್ರೀಮದಾಚಾರ್ಯರ ಸೇವೆಗೆ ಸಮರ್ಪಿಸಲು ಅವಿರತವಾಗಿ ಪಾಠ-ಪ್ರವಚನ ನಡೆಸಿದರು. ಅನಂತರ ಕಾಲದಲ್ಲಿಯೂ ಲೆಕ್ಕವಿಲ್ಲದಷ್ಟು ವಿದ್ವಾಂಸರು ಇಲ್ಲಿ ನೆಲೆಸಿ ಪಾಠ-ಪ್ರವಚನಗಳಿಂದ ಈ ಭೂಮಿಯನ್ನು ಪುನೀತಗೊಳಿಸಿದ್ದಾರೆ.

1993ರಲ್ಲಿ ಪ್ರಾತಃಸ್ಮರಣೀಯರಾದ ಶ್ರೀ 1008 ಶ್ರೀ ಸತ್ಯಪ್ರಮೋದತೀರ್ಥ ಶ್ರೀಪಾದಂಗಳವರ ಅಮೃತಹಸ್ತದಿಂದ ಶ್ರೀವೇದೇಶತೀರ್ಥವಿದ್ಯಾಪೀಠವು ಸ್ಥಾಪಿತ ವಾಯಿತು. ಈ ವಿದ್ಯಾಪೀಠವು ಸ್ಥಾಪಿತವಾಗಿ ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರಿಂದ ಕೃಪಾಪೋಷಿತವಾಗಿ ಪಂ. ಅಕಮಂಚಿ ಅನಂತಾಚಾರ್ಯರ ನಿಸ್ಪೃಹ ಪ್ರಯತ್ನದಿಂದ ಬೆಳೆಯುತ್ತಲಿದೆ. 50ಕ್ಕೂ ಹೆಚ್ಚು ಜನ ವಿದ್ಯಾರ್ಥಿಗಳು ಇಲ್ಲಿ ಉಚಿತವಾಗಿ ವಸತಿ, ಊಟ, ಬಟ್ಟೆ ಮುಂತಾದವುಗಳನ್ನು ಪಡೆಯುವದಲ್ಲದೇ ಶ್ರೀಮನ್ನ್ಯಾಯಸುಧಾದಿ ಗ್ರಂಥಗಳನ್ನು ಅಧ್ಯಯನ ಮಾಡುತ್ತಿದ್ದಾರೆ.

ಈ ಸ್ಥಳದಲ್ಲಿ ಮಳೆ ಗಾಳಿ ಬಿಸಿಲು, ನದಿಯ ಮಹಾಪೂರಗಳಿಂದ ವಿದ್ಯಾರ್ಥಿಗಳಿಗೂ, ಬಂದ ಭಕ್ತರಿಗೂ ಅನೇಕ ಬಗೆಯ ತೊಂದರೆಗಳಾಗುತ್ತಿವೆ. ಅವುಗಳ ಪರಿಹಾರಕ್ಕಾಗಿ ಸುಭದ್ರವಾದ ಕಟ್ಟಡನಿರ್ಮಾಣ ಮಾಡಬೇಕೆಂದು ಶ್ರೀ 1008 ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರು ಸಂಕಲ್ಪಿಸಿದ್ದಾರೆ. ಆ ಕಟ್ಟಡನಿರ್ಮಾಣದ ಪ್ರಾರಂಭಕ್ಕಾಗಿ ಭೂಮಿಪೂಜೆ ನೆರವೇರಿಸಿದ್ದಾರೆ.

ಈ ಭವ್ಯಭವನದ ನಿರ್ಮಾಣಕ್ಕಾಗಿ ಸುಮಾರು 80 ಲಕ್ಷ ರೂಪಾಯಿಗಳು ವ್ಯಯವಾಗುವುದೆಂದು ಅಂದಾಜಿಸಲಾಗಿದೆ. ಈ ಪುಣ್ಯಕರ ಕಾರ್ಯಕ್ಕೆ ಎಲ್ಲ ಭಗವದ್ಭಕ್ತರು ಸೇವೆಯನ್ನು ಸಲ್ಲಿಸಿ ಶ್ರೀಹರಿವಾಯುಗುರುಗಳ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಸವಿನಯ ಪ್ರಾರ್ಥನೆ. ಈ ಕಟ್ಟಡನಿಧಿಗಾಗಿ ಸೇವೆ ಸಲ್ಲಿಸುವ ಭಕ್ತರು ಚೆಕ್, ಡಿಡಿ, ಎಂ.ಓ ಮುಖಾಂತರ ಹಣ ಕಳುಹಿಸಬಹುದು.

ವಿಳಾಸ : ಉತ್ತರಾದಿಮಠ. ಮಣ್ಣೂರು. ತಾ.ಅಫಜಲಪುರ. ಜಿ.ಗುಲಬರ್ಗಾ. 585217 ದೂರಧ್ವನಿ : 08471-230399/9448952626/9980302626

**A/C : Shree Uttaradimath Building Construction Fund**
**A/C No : 33543721747 IFSC Code : SBIN0005984**
State Bank Of India Mannur Branch Tq: Afazalpur
Dist : Gulbarga email - mannur1008@gmail.com



## ಪಂ. ಬಾಳಗಾರು ಶ್ರೀನಿವಾಸಾಚಾರ್ಯರು ಇನ್ನಿಲ್ಲ

ಸದಾಚಾರ ಹಾಗೂ ಸಿದ್ಧಾಂತಪ್ರಚಾರಕ್ಕೆ ಹೆಸರಾದ ಪಂ. ಬಾಳಗಾರು ಶ್ರೀನಿವಾಸಾಚಾರ್ಯರು ದಿ. 12-9-2014 ರಂದು ಕಣ್ಮರೆಯಾದರು. 1946ರಲ್ಲಿ ಜನಿಸಿದ ಇವರ ಜೀವನಶೈಲಿಯು ರೋಚಕಮಯ ವಾದದ್ದು. ಪ್ರಾತಃಸ್ಮರಣೀಯ ಶ್ರೀ ಶ್ರೀಸತ್ಯಧ್ಯಾನತೀರ್ಥರ ಶಿಷ್ಯರಾದ ಪಂ. ಜಾಲಿಹಾಳ ಶ್ರೀನಿವಾಸಾಚಾರ್ಯರಲ್ಲಿ ಇವರು ಸುಮಾರು ಹತ್ತುವರ್ಷಕಾಲ ನ್ಯಾಯ ವೇದಾಂತ ವ್ಯಾಸತ್ರಯ ಸುಧಾದಿಗ್ರಂಥಗಳ ಅಧ್ಯಯನವನ್ನು ನಡೆಸಿದರು. ಅದೇರೀತಿ ತಮ್ಮ ಜೀವನವನ್ನು ಪಾಠ-ಪ್ರವಚನಾದಿ ಗಳಿಗಾಗಿಯೇ ಮುಡುಪಾಗಿಟ್ಟರು.

1973 ರಲ್ಲಿ ಬೆಂಗಳೂರಿಗೆ ಬಂದ ಇವರು ಶ್ರೀಕುಂದಾಪುರಮಠದಲ್ಲಿ ಸುಮಾರು 9 ವರ್ಷಗಳವರೆಗೆ ಮಹಾಭಾರತ ಹೇಳಿ ಐತಿಹಾಸಿಕ ಮಂಗಳವನ್ನಾಚರಿಸಿದರು. ಇದರಂತೆ ಚಂದ್ರಿಕಾ, ಶ್ರೀಮನ್ನ್ಯಾಯಸುಧಾ ಮಂಗಳಗಳ ಸಂಭ್ರಮವನ್ನು ಇಲ್ಲಿಯ ಜನ ಮರೆತಿಲ್ಲ. ಇವರು ನಿರಂತರ ನಡೆಸಿದ ಪಾಠಪ್ರವಚನಾದಿಗಳು ಸಹಸ್ರಾರು ಜನರ ಪರಿವರ್ತನೆಗೆ ಕಾರಣವಾಯಿತು. ತಮ್ಮ ಮನೆಯಲ್ಲಿಯೇ ಶಿಷ್ಯರನ್ನು ಇಟ್ಟುಕೊಂಡು ಪಾಠ ಹೇಳಿ 12ಜನ ಸುಧಾಪಂಡಿತರನ್ನು ಸಿದ್ಧಪಡಿಸಿದರು. ಬೆಂಗಳೂರಿನ ಎನ್.ಆರ್. ಕಾಲೋನಿಯಲ್ಲಿ ಸುಮಾರು 30 ವರ್ಷಗಳ ಕಾಲ ಪಾಠ ಹೇಳಿ ನೂರಾರು ಗೃಹಸ್ಥಶಿಷ್ಯರನ್ನು ಪಾವನಗೊಳಿಸಿದರು. ಇವುಗಳ ಜೊತೆಯಲ್ಲಿ ಮಧ್ವಸ್ತುತಿ, ಸಭಾಸಾರವೈಭವ, ಮಣಿಮಂಜರೀವೈಭವ, ಬ್ರಹ್ಮಾನಂದೀಭಾವಪ್ರಕಾಶಿಕಾಖಂಡನ ಮೊದಲಾದ ಗ್ರಂಥಗಳೊಂದಿಗೆ ಅನೇಕ ಸ್ತೋತ್ರಗಳನ್ನೂ ರಚನೆ ಮಾಡಿರುವುದು ಇವರ ವಿಶೇಷ.

ಶ್ರೀನಿವಾಸಾಚಾರ್ಯರ 68 ವರ್ಷಗಳ ಸಾರ್ಥಕಜೀವನ ಸಜ್ಜನವರ್ಗಕ್ಕೆ ದಾರಿದೀಪವಾಗಿದೆ. ಅವರ ವಿದ್ವತ್ತು , ಆಚಾರನಿಷ್ಠೆ, ಧರ್ಮದೀಕ್ಷೆ, ಸಿದ್ಧಾಂತರತಿ, ಮೊದಲಾದವು ಅವರ ಎಲ್ಲ ಸಾಧನೆಗಳ ಮೂಲದಂತಿದ್ದವು. ಇಂತಹ ಶ್ರೀನಿವಾಸಾಚಾರ್ಯರ ವಿರಹ ಮಾಧ್ವಸಮಾಜಕ್ಕೆ ತುಂಬಲಾರದ ಹಾನಿಯಾಗಿದೆ.

ಶ್ರೀಪಾದಂಗಳವರು ಇವರ ನಿಧನವಾರ್ತೆಗೆ ತೀವ್ರ ಶೋಕವನ್ನು ಸೂಚಿಸಿತ್ತಾ ಈ ಸಚ್ಚೇತನಕ್ಕೆ ದೇವರು ಸದ್ಗತಿಯನ್ನು ಕೊಡಲಿ ಎಂದು ತಮ್ಮ ಉಪಾಸ್ಯಮೂರ್ತಿಗಳಾದ ಶ್ರೀಮೂಲಸೀತಾಸಮೇತ-ಶ್ರೀಮೂಲರಾಮ, ದಿಗ್ವಿಜಯರಾಮ, ವೇದವ್ಯಾಸದೇವರಲ್ಲಿ ಪ್ರಾರ್ಥಿಸಿದರು.

- ಶ್ರೀ ದಿವಾನರು ಉತ್ತರಾದಿಮಠ

## ವರಬೇಕಾಗಿದೆ

1 ಗೋತ್ರ : ಹರಿತಸ ನಕ್ಷತ್ರ : ಮೃಗಶಿರಾ 4 ವಯಸ್ಸು : 23 ಎತ್ತರ : 5.3 ಪದವಿ : ಎಂ.ಎಸ್.ಸಿ, ಬಯೋಕೆಮೇಸ್ಟ್ರಿ, ನೌಕರಿ : ಇನ್ನೂ ಇಲ್ಲ ಅಪೇಕ್ಷೆ : ಬಿ.ಇ, ಎಂ.ಎಸ್.ಸಿ, ಲೆಕ್ಚರರ್, ಸೂಕ್ತವರ ಬೇಕಾಗಿದೆ. ಸಂಪರ್ಕ: ಹೆಚ್.ಬಿ.ಕುಲಕರ್ಣಿ ದೂ: 9538156997 /9739147971

2 ಗೋತ್ರ : ಭಾರದ್ವಜ ನಕ್ಷತ್ರ : ಪೂರ್ವಾಷಾಡ 4 ವಯಸ್ಸು : 26 ಎತ್ತರ : 5.3 ಪದವಿ : ಎಂ.ಸಿ.ಎ ನೌಕರಿ : ಮುಂಬೈಯಲ್ಲಿ ಕೆಲಸ ಮಾಡುತ್ತಿರುವ ಶಿವಮೊಗ್ಗ ಮೂಲದ ವಧುವಿಗೆ ಅಪೇಕ್ಷೆ : ಉನ್ನತ ಶಿಕ್ಷಣದ ವರ ಬೇಕಾಗಿದೆ ಸಂಪರ್ಕ: ರಮಾಮಣಿ (ಮಂಜುನಾಥ) ದೂ: 09867240299

3 ಗೋತ್ರ : ಮೌನಭಾರ್ಗವ ನಕ್ಷತ್ರ : ರೋಹಿಣಿ 2 ವಯಸ್ಸು : 30 ಎತ್ತರ : 5 ಪದವಿ : ಬಿ.ಇ ನೌಕರಿ : ವಿಪ್ರೋದಲ್ಲಿ ಸಾ.ವೆ.ಇಂಜನೀಯರ ಅಪೇಕ್ಷೆ : ಬಿ.ಇ/ಎಂ.ಬಿ.ಎ/ ಎಂ.ಸಿ.ಎ/ಎಂ.ಟೆಕ್ ಆಗಿರುವ ಬೆಂಗಳೂರು/ಪುಣೆಯಲ್ಲಿ ಕೆಲಸ ಮಾಡುತ್ತಿರುವ ವರ ಬೇಕಾಗಿದೆ. ಸಂಪರ್ಕ: ಕೃಷ್ಣಮೂರ್ತಿ ಗುತ್ತಲ ದೂ: 9449070646

4 ಗೋತ್ರ : ಕಶ್ಯಪ ನಕ್ಷತ್ರ : ವಿಶಾಖ 1 ವಯಸ್ಸು : 29 ಎತ್ತರ : 5.3 ಪದವಿ : ಕಂ.ಸೈ.ಬಿ.ಇ, ನೌಕರಿ : ಎಸ್.ಇ/ಇ.ಎಂ.ಸಿ 2 ಕಂಪನಿ ಬೆಂಗಳೂರಿನಲ್ಲಿ ಅಪೇಕ್ಷೆ : ಬಿ.ಇ/ಎಂ.ಟೆಕ್/ಎಂ.ಎಸ್/ತತ್ಸಮಾನ ವಿದ್ಯಾರ್ಹತೆ ಇದ್ದು ಉತ್ತಮ ನೌಕರಿ ಸುಸಂಸ್ಕೃತ ಉತ್ತರ ಕರ್ನಾಟಕದವರಿಗೆ ಆದ್ಯತೆ ಸಂಪರ್ಕ: ವಿ.ಕೆ ದೇಶಪಾಂಡೆ ದೂ: 08362747779/9448126309

5 ಗೋತ್ರ : ಅತ್ರಿ ನಕ್ಷತ್ರ : ಪುನರ್ವಸು 2 ವಯಸ್ಸು : 24 ಎತ್ತರ : 5.1 ಪದವಿ : ನೌಕರಿ : ಅಪೇಕ್ಷೆ : ಬಿ.ಕಾಂ/ಎಂ.ಬಿ.ಎ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ವರ ಬೇಕಾಗಿದೆ ಉತ್ತರಕರ್ನಾಟದವರಿಗೆ ಆದ್ಯತೆ ಸಂಪರ್ಕ: ನಾಗರಾಜ ಕೌಜಲಗಿ ದೂ: 09765402083/08026725949

6 ಗೋತ್ರ : ವಿಶ್ವಾಮಿತ್ರ ನಕ್ಷತ್ರ : ವಿಶಾಖಾ 1 ವಯಸ್ಸು : 26 ಎತ್ತರ : 4.9 ಪದವಿ : ಬಿ.ಇ ನೌಕರಿ : ಲಿಮಿಟೆಡ್ ಕಂಪನಿ ಪೂಣೆಯಲ್ಲಿ ಅಪೇಕ್ಷೆ : ಎಂ.ಟೆಕ್/ಎಂ.ಬಿ.ಎ ಒಳ್ಳೆ ಉದ್ಯೋಗದಲ್ಲಿರುವ ವರ ಬೇಕಾಗಿದೆ. ಸಂಪರ್ಕ: ವೆಂಕಟೇಶ ವರಖೇಡಿ ದೂ: 09960446734

7 ಗೋತ್ರ : ಜಮದಗ್ನಿ ನಕ್ಷತ್ರ : ಪುಷ್ಯ 2 ವಯಸ್ಸು : 23 ಎತ್ತರ : 5.4 ಪದವಿ : ಎಂ.ಟೆಕ್ ನೌಕರಿ : ಮೈಸೂರಿನಲ್ಲಿ ಸಹಾಯಕ ಪ್ರಾಧ್ಯಾಪಕಿ ಅಪೇಕ್ಷೆ : ಒಳ್ಳೆಯ ಉದ್ಯೋಗವುಳ್ಳ 30ವರ್ಷದೊಳಗಿನ ವೈಷ್ಣವ ದಕ್ಷಿಣಕರ್ನಾಟಕದವರಿಗೆ ಆದ್ಯತೆ ಸಂಪರ್ಕ: ನಾಗರಾಜರಾವ್ ದೂ: 08212340367/9738411412

8 ಗೋತ್ರ : ಅಗಸ್ತ್ಯ ನಕ್ಷತ್ರ : ವೃಶ್ಚಿಕ 4 ವಯಸ್ಸು : 26 ಎತ್ತರ : 5.4 ಪದವಿ : ಬಿ.ಇ(ಸಿವಿಲ್) ನೌಕರಿ : ಅಪೇಕ್ಷೆ : ಬಿ.ಇ/ಎಂ.ಬಿ.ಬಿ.ಎಸ್/ತತ್ಸಮಾನ ಇಂಜನಿಯರ್ /ಡಾಕ್ಟರ್ ವಯಸ್ಸಿನ ಅಂತರ 5ವರ್ಷ ಮೀರಬಾರದು ಸಂಪರ್ಕ: ಸಾರಂಗ ಪಾಣಿರಾವ್ ದೂ: 9902891957/08023246050

9 ಗೋತ್ರ : ಗಾರ್ಗಿ ನಕ್ಷತ್ರ : ಅನುರಾಧಾ 2 ವಯಸ್ಸು : 29 ಎತ್ತರ : 5.1 ಪದವಿ : ಎಂ.ಎ ನೌಕರಿ : ಅಪೇಕ್ಷೆ : ಬಿ.ಇ/ಎಂ.ಬಿ.ಎ/ಎಂ.ಸಿ.ಎ ಉನ್ನತ ಶಿಕ್ಷಣಹೊಂದಿದ್ದು ಬೆಂಗಳೂರಿನಲ್ಲಿ ವಾಸಿಸುತ್ತಿರುವ ವರ ಬೇಕಾಗಿದೆ. ಸಂಪರ್ಕ: ಸೋನಾಲಿ ಕುಲಕರ್ಣಿ ದೂ: 9620802734

10 ಗೋತ್ರ : ಭಾರದ್ವಾಜ ನಕ್ಷತ್ರ : ಪೂರ್ವಾಷಾಡ 4 ವಯಸ್ಸು : 25 ಎತ್ತರ : 5.3 ಪದವಿ : ಮುಂಬೈಯಲ್ಲಿ ಎಂ.ಸಿ.ಎ ನೌಕರಿ : ಸೇಫ್ ಜೇಮಿನಿ ಕಂಪನಿ ಅಪೇಕ್ಷೆ : ಸುಶಿಕ್ಷಿತ ಒಳ್ಳೆಯ ಸುಂದರ ವರಬೇಕಾಗಿದೆ ಸಂಪರ್ಕ: ಉಷಾ ದೂ: 09867240299

11 ಗೋತ್ರ : ವರ ಬೇಕಾಗಿದೆ ಗೌತಮ ನಕ್ಷತ್ರ : ಮಘಾ 4 ವಯಸ್ಸು : 28 ಎತ್ತರ : 5.4 ಪದವಿ : ಬಿ.ಇ ನೌಕರಿ : ಆಯ್.ಬಿ.ಎಂ (ಬೆಂಗಳೂರಿನಲ್ಲಿ) ಅಪೇಕ್ಷೆ : ಬಿ.ಇ/ಮೇಲ್ಪಟ್ಟು ಓದಿರುವ ಬೆಂಗಳೂರಿನಲ್ಲಿ ನೆಲೆಸಿರುವ ಸೂಕ್ತ ವರ ಬೇಕಾಗಿದೆ. ಸಂಪರ್ಕ: ಶ್ರೀಮತಿ ನಂದಾ ಕೆ.ಆರ್ ದೂ: 9844496910/9480730054

12 ಗೋತ್ರ : ಶ್ರೀವತ್ಸ ನಕ್ಷತ್ರ : ವಿಶಾಖಾ 4 ವಯಸ್ಸು : 24 ಎತ್ತರ : 5.7 ಪದವಿ : ಬಿ.ಇ (ಕಂ.ಸೈ) ನೌಕರಿ : ಸಾಫ್ಟವೇರ್ ಇಂಜಿನೀಯರ್ ಕ್ಯಾಪ್ ಜಮಿನಿ ಬೆಂಗಳೂರಿನಲ್ಲಿ ಅಪೇಕ್ಷೆ : ಮಾಧ್ವ ಬಿ.ಇ/ಎಂ.ಬಿ.ಬಿ.ಎಸ್/ಸಿ.ಎ ಪದವೀಧರ ಇದ್ದು ಬೆಂಗಳೂರಿನಲ್ಲಿ ಇರಬೇಕು 5.9 ಕ್ಕಿಂತ ಹೆಚ್ಚು ಎತ್ತರ ಇರಬೇಕು ಸಂಪರ್ಕ: ಕೆ ಎಲ್ ರಾಘವೇಂದ್ರ ದೂ: 9448106632/080 26768955

13 ಗೋತ್ರ : ಕಾಶ್ಯಪ ನಕ್ಷತ್ರ : ಅನುರಾಧಾ ವಯಸ್ಸು : 32 ಎತ್ತರ : 5.3 ಪದವಿ : ಬಿ.ಇ (ಇ-ಸಿ) ನೌಕರಿ : ಬೆಂಗಳೂರಿನಲ್ಲಿ ಲಾಜಿಕಾ ಸಾಫ್ಟವೇರ್ ಅಪೇಕ್ಷೆ : ಬಿ.ಇ/ಎಂ.ಬಿ.ಎ (ಉತ್ತರಕರ್ನಾಟಕದವರಿಗೆ ಆದ್ಯತೆ) ಸಂಪರ್ಕ: ಪಿ.ಕೆ.ದೇಶಪಾಂಡೆ ದೂ: 9901101943/080 23329848

14 ಗೋತ್ರ : ವಶಿಷ್ಠ ನಕ್ಷತ್ರ : ಜೇಷ್ಠ ವಯಸ್ಸು : 22 ಎತ್ತರ : 5.5 ಪದವಿ : ಡಿಪ್ಲೋಮಾ ಬಿ.ಸಿ.ಎ ಅಪೇಕ್ಷೆ : ಆಚಾರವಿಚಾರವಂತರು 25-26 ವರ್ಷದವರಾಗಿರಬೇಕು ಸಂಪರ್ಕ: ಸಾವಿತ್ರಿ ದೂ: 9632136320

**ವಧು ಬೇಕಾಗಿದೆ**

1 ಗೋತ್ರ : ಅತ್ರಿ ನಕ್ಷತ್ರ : ಉ.ಭಾದ್ರಪದ 4 ವಯಸ್ಸು : 27 ಎತ್ತರ : 5.7 ಪದವಿ : ಬಿ.ಇ/ಎಂ.ಎಸ್ ನೌಕರಿ : ಯು.ಎಸ್.ಎಯಲ್ಲಿ ಅಪೇಕ್ಷೆ : ತೆಳ್ಳಗಿರುವ ಸುಂದರ ವಧು ಯು.ಎಸ್.ಎ ಯಲ್ಲಿಯೇ ಇರುವ/ಓದುತ್ತಿರುವ ವಧು ಬೇಕಾಗಿದೆ ಸಂಪರ್ಕ: ಶಾಲಿನಿ ಅತ್ರೆ ದೂ: 0989106593

2 ಗೋತ್ರ : ಜಮದಗ್ನಿ ನಕ್ಷತ್ರ : ವಿಶಾಖಾ 2 ವಯಸ್ಸು : 27 ಎತ್ತರ : 6 ಪದವಿ : ಬಿ.ಇ ನೌಕರಿ : ಸಾಫ್ಟವೇರ್ ಇಂಜಿನಿಯರ್ ಇನ್‌ಫೋಸಿಸ್ ಚಂದಿಗಡ್ ಅಪೇಕ್ಷೆ : ಬಿ.ಇ/ ಎಂ.ಟೆಕ್/ಎಂ.ಸಿ.ಎ/ಎಂ.ಬಿ.ಎ ಉದ್ಯೋಗದಲ್ಲಿರುವ ವಧು ಉತ್ತರಕರ್ನಾಟಕದವರಿಗೆ ಆದ್ಯತೆ ಸಂಪರ್ಕ: ಜಿ.ಎನ್ ಕಾಶಿಕರ್ ದೂ: 9449187099/9480990466

3 ಗೋತ್ರ : ಗೌತಮ ನಕ್ಷತ್ರ : ಹಸ್ತಾ ವಯಸ್ಸು : 32 ಎತ್ತರ : 5.6 ಪದವಿ : ನೌಕರಿ : ಪತ್ರಿಕೋದ್ಯಮ ಹಾಗೂ ಹೊಸದಿಂಗತ ಮುಖ್ಯ ಸಂಪಾದಕ ಅಪೇಕ್ಷೆ : ಸುಸಂಸ್ಕೃತ ವಧು ಬೇಕಾಗಿದೆ. ಸಂಪರ್ಕ: ಎ.ಆರ್ ರಘುರಾಮ್ ದೂ: 9916022982

4 ಗೋತ್ರ : ಕೌಶಿಕ ನಕ್ಷತ್ರ : ಹಸ್ತಾ 2 ವಯಸ್ಸು : 28 ಎತ್ತರ : 5.7 ಪದವಿ : ಬಿ.ಇ (ಇ-ಇ) ನೌಕರಿ : ಪ್ರೋಜೆಕ್ಟ್ ಲೀಡರ್ ಚೆನ್ನೈನಲ್ಲಿ, ಎಂ.ಎನ್.ಸಿ.ಯಲ್ಲಿ ಅಪೇಕ್ಷೆ : ಉದ್ಯೋಗಸ್ಥ ಉದ್ಯೋಗ ಇಲ್ಲದಿರುವ ಸುಸಂಸ್ಕೃತ ಕನ್ಯೆ ಬೇಕಾಗಿದೆ. (ಬಿ.ಇ/ತತ್ಸಮಾನ ಶಿಕ್ಷಣ ಹೊಂದಿರುವ ಹಾಗೂ 5.2ರಿಂದ 5.6ರವರೆಗೆ ಎತ್ತರ ಇರಬೇಕು) ಸಂಪರ್ಕಃ ಎಸ್.ಗಿರಿಧರ ದೂಃ 09885906774/08985596547

5 ಗೋತ್ರ : ವಿಷ್ಣುವರ್ಧನ ನಕ್ಷತ್ರ : ಅನುರಾಧಾ 4 ವಯಸ್ಸು : 33 ಎತ್ತರ : 5.6 ಪದವಿ : ಬಿ.ಎಸ್.ಸಿ. ನೌಕರಿ : ಎಂ.ಎನ್.ಸಿ ಬೆಂಗಳೂರಿನಲ್ಲಿ ಅಪೇಕ್ಷೆ : ಪದವಿಧರೆಯಾದ ಸೂಕ್ತ ವಧು ಬೇಕಾಗಿದೆ ಸಂಪರ್ಕಃ ರಾಮಮೂರ್ತಿ ಹೆಚ್ ಎಸ್ ದೂಃ 9986877994/ 08026601840

6 ಗೋತ್ರ : ವಿಶ್ವಾಮಿತ್ರ ನಕ್ಷತ್ರ : ಕೃತ್ತಿಕಾ ವಯಸ್ಸು : 28 ಎತ್ತರ : 5.10 ಪದವಿ : ಬಿ.ಇ(ಕಂ.ಸೈ) ನೌಕರಿ : ಕ್ಯಾಪ್ ಜೆಮಿನಿ (ಬೆಂಗಳೂರು) ಅಪೇಕ್ಷೆ : ಬಿ.ಸಿ.ಎ/ ಬಿ.ಎಸ್.ಸಿ/ಎಂ.ಸಿ.ಎ ಯಾವುದೇ ಪದವಿ (ಬಿ.ಎ ಬಿಟ್ಟು) ಸಂಪರ್ಕಃ ಸತ್ಯಬೋಧ ಕುಸನೂರು ದೂಃ 9886384660/9986162454

7 ಗೋತ್ರ : ಹರಿತಸ ನಕ್ಷತ್ರ : ಹಸ್ತಾ 3 ವಯಸ್ಸು : 30 ಎತ್ತರ : 5.7 ಪದವಿ : ಡಿಪ್ಲೋಮಾ ಅಟೋಮೊಬೈಲ್ಸ ನೌಕರಿ : ಬಿ.ಪಿ.ಸಿ.ಎಲ್ (ಧಾರವಾಡ) ಅಪೇಕ್ಷೆ : ಸುಶಿಕ್ಷಿತ ಸೂಕ್ತ ವಧು ಬೇಕಾಗಿದೆ ಸಂಪರ್ಕಃ ಪವನಕುಮಾರ ದೂಃ 9980518500/ 9902918500

8 ಗೋತ್ರ : ಕಾಶ್ಯಪ ನಕ್ಷತ್ರ : ರೋಹಿಣಿ 1 ವಯಸ್ಸು : 30 ಎತ್ತರ : 5.3 ಪದವಿ : ಬಿ.ಇ ನೌಕರಿ : ರಾಬರ್ಟ ಭಾಷ್ ಬೆಂಗಳೂರು ಅಪೇಕ್ಷೆ : ಸೂಕ್ತ ವಧು ಬೇಕಾಗಿದೆ ಸಂಪರ್ಕಃ ರಾಜೇಶ್ ಕುಲಕರ್ಣಿ ದೂಃ 9980513622

9 ಗೋತ್ರ : ಹರಿತಸ ನಕ್ಷತ್ರ : ಅನುರಾಧಾ 4 ವಯಸ್ಸು : 33 ಎತ್ತರ : 5.9 ಪದವಿ : ಬಿ.ಎ ನೌಕರಿ : ಕಾಲೇಜನಲ್ಲಿ ಅಡ್ಮಿನಿಸ್ಟ್ರೇಟರ್ ಅಪೇಕ್ಷೆ : ಸೂಕ್ತ ವಧು ಬೇಕಾಗಿದೆ ಸಂಪರ್ಕಃ ಎಂ ವಾಸುದೇವರಾವ್ ದೂಃ 9481166732/7204425008

10 ಗೋತ್ರ : ಶ್ರೀವತ್ಸ, ನಕ್ಷತ್ರ : ಮೂಲಾ-1, ವಯಸ್ಸು : 31, ಎತ್ತರ 5.11, ಪದವಿ : ಬಿ.ಇ. ನೌಕರಿ, ಎಂ.ಎನ್.ಸಿ. ಬೆಂಗಳೂರಿನಲ್ಲಿ ಅಪೇಕ್ಷೆ : ಸೂಕ್ತ ಕನ್ಯೆಬೇಕಾಗಿದ್ದಾರೆ. ನೌಕರಿಯಲ್ಲಿ ಇರುವವರಿಗೆ ಆದ್ಯತೆ. ಸಂಪರ್ಕ : ಸುಧೀಂದ್ರ ಕುಮಾರ್ : 080-26393072/9449067272.

11 ಗೋತ್ರ : ಆತ್ರೇಯ ನಕ್ಷತ್ರ : ಚಿತ್ತಾ1 ವಯಸ್ಸು : 34 ಎತ್ತರ : 5.9 ಪದವಿ : ಡಿಪ್ಲೊಮಾ ಇನ್ ಮೆಕ್ಯಾನಿಕ್ ಇಂಜಿನಿಯರಿಂಗ್ ನೌಕರಿ : ಅಸಿಸ್ಟಂಟ್ ಮ್ಯಾನೇಜರ್ ವಿಪ್ರೋದಲ್ಲಿ ಅಪೇಕ್ಷೆ : ಸೂಕ್ತ ವಧು ಬೇಕಾಗಿದೆ. ಸಂಪರ್ಕ : ಜಿ. ನಾಗರಾಜ್ ದೂ. 9945419346

12 ಗೋತ್ರ : ವಶಿಷ್ಠ ನಕ್ಷತ್ರ : ಮೃಗಶಿರ 2 ವಯಸ್ಸು : 29 ಎತ್ತರ : 5.7 ಪದವಿ : ಬಿ.ಇ(ಇ-ಸಿ) ನೌಕರಿ : ಹೊಂಡಾ ಕಂಪನಿ ಬೆಂಗಳೂರಿನಲ್ಲಿ ಅಪೇಕ್ಷೆ : ಬಿ.ಇ ಅಥವಾ ತತ್ಸಮಾನ ಪದವಿ ಮಾಧ್ವ /ಸ್ಮಾರ್ತ ಸುಸಂಸ್ಕೃತ ವಧು ಬೇಕಾಗಿದೆ ಸಂಪರ್ಕಃ ಪುಷ್ಪಾ/ ಸುಬ್ಬಾರಾವ್ ದೂಃ 9901909743/8123481658

13 ಗೋತ್ರ : ಗೌತಮ ನಕ್ಷತ್ರ : ಮಘಾ 4 ವಯಸ್ಸು : 30 ಎತ್ತರ : 5.5 ಪದವಿ : ಬಿ.ಇ(ಆಯ್.ಎಸ್) ನೌಕರಿ : ವಿಪ್ರೋದಲ್ಲಿ ಕೆಲಸಮಾಡುತ್ತಿದ್ದಾರೆ ಅಪೇಕ್ಷೆ : ಉನ್ನತ ಪದವಿ ಹೊಂದಿದ್ದು ಉದ್ಯೋಗದಲ್ಲಿರುವ/ಇಲ್ಲದಿರುವ ಮಾಧ್ವ ಕನ್ಯೆ ಬೇಕಾಗಿದ್ದಾರೆ. ಸಂಪರ್ಕಃ ನಂದಗೋಪಾಲ ಹಲಗೇರಿ ದೂಃ 9986132082

14 ಗೋತ್ರ : ಕಾಶ್ಯಪ ನಕ್ಷತ್ರ : ಉತ್ತರಾ 2 ವಯಸ್ಸು : 41 ಎತ್ತರ : 5.6 ಪದವಿ : ಎಂ.ಕಾಂ. ನೌಕರಿ : ಸಿನಿಯರ್ ಅಕೌಂಟ್ಸ್ ಆಫೀಸರ್ (ಬೆಂಗಳೂರು) ಅಪೇಕ್ಷೆ : ಸೂಕ್ತವಧು ಬೇಕಾಗಿದ್ದಾರೆ ಸಂಪರ್ಕಃ ರಾಘವೇಂದ್ರರಾವ್ ಆರ್ ದೂಃ 9844235853/080 23591151

15 ಗೋತ್ರ : ವಿಶ್ವಾಮಿತ್ರ ನಕ್ಷತ್ರ : ಮಘಾ 4 ವಯಸ್ಸು : 33 ಎತ್ತರ : 5.10 ಪದವಿ : ಡಿಪ್ಲೋಮಾ ಕಂಪ್ಯೂಟರ್ ಹಾರ್ಡವೇರ್ ನೌಕರಿ : ಸೀನಿಯರ್ ಸಿಸ್ಟಮ್ ಅಡ್ಮಿನ್ - ಆಯ್.ಟಿ ಬೆಂಗಳೂರಿನಲ್ಲಿ ಅಪೇಕ್ಷೆ : ಮಾಧ್ವ/ಸ್ಮಾರ್ಥ ಸುಸಂಸ್ಕೃತ ಕನ್ಯೆ ಬೇಕಾಗಿದ್ದಾರೆ. ಸಂಪರ್ಕಃ ವಂಸತಾ ಬಾಲಾಜಿ ದೂಃ 26850245/9880643519

16 ಗೋತ್ರ : ಕೌಶಿಕ ನಕ್ಷತ್ರ : ಅನುರಾಧಾ ವಯಸ್ಸು : 28 ಎತ್ತರ : 5.11 ಪದವಿ : ಬಿ.ಇ ( ಸೀನಿಯರ್ ಸಾಫ್ಟವೇರ್ ಇಂಜಿನಿಯರ್) ನೌಕರಿ : ಆಯ್.ಟಿ.ಸಿ. ಇನ್‌ಫೋಟೆಕ್ ಬೆಂಗಳೂರು ಅಪೇಕ್ಷೆ : ಬಿ.ಇ ಬೆಂಗಳೂರಿನಲ್ಲಿ ಕೆಲಸ ಮಾಡುವ ಸೂಕ್ತ ವಧು ಬೇಕಾಗಿದೆ ಸಂಪರ್ಕಃ ಗಿರಿಧರ ದೂಃ 9448960908/9986450212

17 ಗೋತ್ರ : ಕೌಂಡಿಣ್ಯ ನಕ್ಷತ್ರ : ಉತ್ತರಾಷಾಢ 4 ವಯಸ್ಸು : 31 ಎತ್ತರ : 5.4 ಪದವಿ : (ಕಂ.ಸೈ) ನೌಕರಿ : ಸಾಫ್ಟವೇರ್ ಇಂಜನೀಯರ್ ಮುಂಬೈನಲ್ಲಿ ಅಪೇಕ್ಷೆ : ಪದವಿ/ಪೋಸ್ಟಗ್ರ್ಯಾಜ್ಯುವೇಟ್ ಒಳ್ಳೆಯ ನೌಕರಿ ಇರುವ (ಮುಂಬೈ/ಬೆಂಗಳೂರಿನಲ್ಲಿರುವ) ವಧು ಬೇಕಾಗಿದ್ದಾರೆ. ಸಂಪರ್ಕಃ ಕೆ.ಶ್ರೀಧರ ದೂಃ 9916071677/08392 268287

18 ಗೋತ್ರ : ಆತ್ರೇಯ ನಕ್ಷತ್ರ : ಭರಣಿ 1 ವಯಸ್ಸು : 40 ಎತ್ತರ : 5.7 ಪದವಿ : ಡಿಪ್ಲೋಮಾ (ಇ-ಸಿ) ನೌಕರಿ : ಎಂ.ಎನ್.ಸಿಯಲ್ಲಿ ಪ್ರೋಜೆಕ್ಟ್ ಮ್ಯಾನೇಜರ್ ಅಪೇಕ್ಷೆ : ಸೂಕ್ತವಧು ಬೇಕಾಗಿದೆ ಸಂಪರ್ಕಃ ಜಿ ನಾಗರಾಜ ದೂಃ 9945419346


**ಪದ್ಮ-ನಾಗ್ ವಧು-ವರಾನ್ವೇಷಣ ಕೇಂದ್ರ**

ನಿಮಗೆ ತಕ್ಕ ಎಲ್ಲಾ ತರಹದ ಬ್ರಾಹ್ಮಣ ವಧು-ವರರಿಗಾಗಿ ಫೋಟೋ ಮತ್ತು ಜಾತಕದೊಂದಿಗೆ
**ಸಂಪರ್ಕಿಸಿ - ಡಿ. ನಾಗರಾಜ್‌ರಾವ್ : ದೂರವಾಣಿ : 9243101883**
**240/2, ಮೊದಲನೇ ಮಹಡಿ, 2ನೇ ಮೈನ್, 2ನೇ ಬ್ಲಾಕ್, ತ್ಯಾಗರಾಜನಗರ, ಬೆಂಗಳೂರು 28**
**ಸಮಯ :- ಸಾಯಂ 5 ರಿಂದ 7. ಭಾನುವಾರ 11.30 ರಿಂದ 2 ಮತ್ತು 5 ರಿಂದ 7**
email.padmanagdnrao1@gmail.com

**ಕಲ್ಯಾಣ ಬ್ರಾಹ್ಮಣರ ವಧು-ವರಾನ್ವೇಷಣ ಕೇಂದ್ರ**

ಮಂಗಳವಾರ ರಜಾದಿನ

ಬ್ರಾಹ್ಮಣ ವಧು-ವರರಿಗಾಗಿ
**ಸಂಪರ್ಕಿಸಿ - ಸುಧಾ ಅನಿಲ್ : ದೂರವಾಣಿ : 7204322403**

ಮಂಗಳವಾರ ರಜಾದಿನ

**ನಂ. 9,1ನೇ ಮಹಡಿ, ಬಿಲ್ಡಿಂಗ್ ನಂ 12, ಟೆಲಿಫೋನ್ ಎಕ್ಸ್‌ಚೇಂಜ್ ಪಕ್ಕ ಕೊತ್ತನೂರದಿಣ್ಣೆ ಮುಖ್ಯರಸ್ತೆ 7ನೇ ಹಂತ, ಜೆ.ಪಿ.ನಗರ, ಬೆಂಗಳೂರು 76**
**ಸಮಯ : ಪ್ರತಿ ದಿನ ಸಂಜೆ 5.30 ರಿಂದ 8.00 ಭಾನುವಾರ 11.30 ರಿಂದ 1.00**

# ತ್ರಿವೇಣೀ ಟೂರ್ಸ್ ಹೈದ್ರಾಬಾದ್

## ಸಂಪೂರ್ಣ ದಕ್ಷಿಣಭಾರತ ರಾಮೇಶ್ವರ ಯಾತ್ರೆ

### ಅನುಭವಿಕ ವ್ಯವಸ್ಥಾಪಕರಿಂದ ಬ್ರಾಹ್ಮಣಜನರಿಗಾಗಿ ಉತ್ತರ ಭಾರತ ಯಾತ್ರೆ

**1. ದಿ. 09-11-2014 ರಿಂದ 25-11-2014ರವರೆಗೆ**

**2. ದಿ. 26-12-2014 ರಿಂದ 11-01-2015ರವರೆಗೆ**

**3. ದಿ. 26-01-2015 ರಿಂದ 11-02-2015ರವರೆಗೆ**

ಹೈದ್ರಾಬಾದಿನಿಂದ 2+2 ಲಗ್ಜುರಿ ಬಸ್ಸಿನಲ್ಲಿ 17ದಿಗಳ ಸಕಲ ಸೌಕರ್ಯಯುಕ್ತ ಸುಖ ಪ್ರವಾಸ ಪ್ರತಿನಿತ್ಯ ದೇವರ ಪೂಜೆ, ನೈವೇದ್ಯ, ಮಡಿಯಿಂದ ಊಟದ ವ್ಯವಸ್ಥೆ ಇರುತ್ತದೆ.

ಸ್ಥಳಗಳು : ಶ್ರೀಶೈಲಂ ಅಹೋಬಲ, ಕಾಳಹಸ್ತಿ, ಕಪಿಲತೀರ್ಥ, ತಿರುಪತಿ, ಗೋಪಿಂದರಾಜಪಟ್ಟಣ, ಮಂಗಾಪುರ, ಶಿವಕಂಚಿ, ವಿಷ್ಣುಕಂಚಿ, ತಿರುಕೋಯಲೂರು, ಚೋಳಪುರಂ, ಚಿದಂಬರಂ, ಕುಂಭಕೋಣ, ತಂಜಾವೂರು, ತಿರುಚನಾಪಲ್ಲಿ, ಶ್ರೀರಂಗ, ಮಧುರೈ, ರಾಮೇಶ್ವರ ಕನ್ಯಾಕುಮಾರಿ, ಸುಚೀಂದ್ರ, ಕಾಲಡಿ, ತಿರುವನಂತಪುರ, ಅನಂತಶಯನ, ಭುವನಗಿರಿ, ಶ್ರೀಮುಷ್ಣಂ, ಗುರುವಾಯೂರು, ಸುಬ್ರಹ್ಮಣ್ಯ, ಧರ್ಮಸ್ಥಳ, ಹೊರನಾಡು, ಶೃಂಗೇರಿ, ಉಡುಪಿ, ಪಾಜಕ, ದುರ್ಗಾಬೆಟ್ಟ, ಗೋಕರ್ಣ, ಸ್ವಾದಿ, ಶಿರಸಿ, ಹೊಸರಿತ್ತಿ, ಮಾದನೂರು ನವವೃಂದಾವನ, ಸವಣೂರು, ಮಂತ್ರಾಲಯ

**ಸೀಟು ಒಂದಕ್ಕೆ ರೂ 13,900/- ರೂ.ಗಳು ಮಾತ್ರ**

**MRS. KANCHANA JOSHI** 2-4-1113/69/B/2, "Balaji Nivas"
Nimboli adda, Kachiguda, Hydarabad-27 Ph. (Resi)040 24652913 - Cell. 09441481302, 09014781978/09440667385

# ಶ್ರೀ ಪವಮಾನ ಟೂರ್ಸ್, ಹೈದ್ರಾಬಾದ್

**ಹೈದರಾಬಾದಿನಿಂದ ಸಿಮಿಲಗ್ಜುರಿ ಬಸ್ಸಿನಲ್ಲಿ ಬಹಳ ಕಡಿಮೆ ಖರ್ಚಿನಲ್ಲಿ 18 ದಿನಗಳ ಪ್ರವಾಸ ಕಡಿಮೆ ಖರ್ಚಿನಲ್ಲಿ ಉತ್ತಮ ಪ್ರವಾಸ ಎಲ್ಲ ಯತಿಗಳ ಆಶೀರ್ವಾದ ಪಡೆದ ಪ್ರವಾಸ. ಪ್ರವಾಸ ಸುಖವಾಗಿರಲು ನಮ್ಮಲ್ಲಿ ವಿಚಾರಿ.**

## ದಕ್ಷಿಣ ಭಾರತ ತೀರ್ಥಕ್ಷೇತ್ರಗಳ ಪ್ರವಾಸ

**ದಿನಾಂಕ 08-11-2014 ರಿಂದ 18 ದಿನಗಳ ವರೆಗೆ**

**ಯಾತ್ರಾಸ್ಥಳಗಳು :** ಶ್ರೀಶೈಲಂ, ಅಹೋಬಲ, ತಿರುಪತಿ, ಕಾಂಚಿಪುರಂ, ತಿರುಕೋಯಲೂರ, ಕುಂಭಕೋಣಂ, ತಂಜಾವೂರು, ಶ್ರೀರಂಗ, ಮಧುರೈ, ರಾಮೇಶ್ವರ, ಕನ್ಯಾಕುಮಾರಿ, ತ್ರಿವೇಂದ್ರಂ, ಸುಚಿಂದ್ರ, ಗುರುವಾಯೂರ, ಉಡುಪಿ, ಪಾಜಕ, ಗೋಕರ್ಣ, ಸ್ವಾದಿ, ಸವಣೂರು, ಮಂತ್ರಾಲಯ (ಈ ಸುದೀರ್ಘ ಪ್ರವಾಸದಲ್ಲಿ ಪ್ರತಿನಿತ್ಯ ದೇವರ ಪೂಜೆ, ತೀರ್ಥಪ್ರಸಾದ, ಕಾಫಿ/ಚಹ, ಸಾಯಂಕಾಲ ಪೂರ್ತಿ ಫಲಾಹಾರ ಹಾಗೂ ವಸತಿಸೇರಿದೆ.

**ಸೀಟು ಒಂದಕ್ಕೆ ರೂ. 12,500/- ಮಾತ್ರ**

**ಇಂದೇ ಸೀಟೊಂದಕ್ಕೆ ರೂ. 3,000/- ಕಳಿಸಿ ನಿಮ್ಮ ಸೀಟು ರಿಜರ್ವ್ ಮಾಡಿಸಿ,**

ವ್ಯವಸ್ಥಾಪಕರು : **K.Balaramachar** H.No. 3-2-692, Chappal Bazaar
Near Manjira Hotel, Kachiguda, Hyderabad - 27(AP)
Phone : 040 - 2461 1635 Cell : 094409 29567

ಶ್ರೀ ಮಾರ್ಕೆಟಿಂಗ್ ಮಡಿ ಕುಕ್ಕರ

ಶುದ್ಧ ತೀರ್ಥ

## ಶ್ರೀ ಸರಸ್ವತಿ ಟೂರ್ಸ್ ಅಂಡ್ ಟ್ರಾವೆಲ್ಸ್ (Regd.)

ಶ್ರೀ ಬದರೀನಾರಾಯಣನ ಅನುಗ್ರಹದೊಂದಿಗೆ 2014 ರಲ್ಲಿ ಕೆಳಗಿನ ತೀರ್ಥ ಯಾತ್ರಾ ಪ್ರವಾಸಗಳನ್ನು ಚೆನ್ನೈಯಿಂದ ವ್ಯವಸ್ಥೆಮಾಡಲಾಗಿದೆ : ಕರ್ನಾಟಕದ ಯಾತ್ರಿಗಳಿಗೆ ಪ್ರವಾಸ 1, ಪ್ರವಾಸ 2, ಮತ್ತು ಪ್ರವಾಸ 3 ಅವರ ವಾಸಸ್ಥಳದಿಂದ ಹೋಗಿ ಬರುವ ರೇಲ್ವೆ 2nd sitting class ticket ವೆಚ್ಚವೂ ಸೇರಿದೆ.

1. ಪ್ರವಾಸ 16-10-2014 ರಿಂದ 10 ದಿನಗಳು -ಒಬ್ಬರಿಗೆ ರೂ. 11,100/-
ಕಾಶಿ/ಗಯಾ ಯಾತ್ರಾ ದೀಪಾವಳಿ ಸ್ಪೆಷಲ್
ಸ್ಥಳಗಳು : ಪುರಿ, ಕೋನಾರ್ಕ, ಭುವನೇಶ್ವರ, ಧವಳಗಿರಿ, ಗಯಾ ವಾರಣಾಸಿ, ಅಯೋಧ್ಯಾ ಮತ್ತು ಅಲಹಾಬಾದ್

2. ಪ್ರವಾಸ : 10.11.2014 ರಿಂದ 14 ದಿನಗಳು
ನವದ್ವಾರಕ ಮತ್ತು ಮಾತೃಗಯಾ ಯಾತ್ರಾ - ಒಬ್ಬರಿಗೆ ರೂ. 16,800/
ಸ್ಥಳಗಳು : ಅಹಮದಾಬಾದ್, ದ್ವಾರಕ, ಭೇಟ್‌ದ್ವಾರಕ, ಮೂಲದ್ವಾರಕ, ಪೋರಬಂದರ್, ಸೋಮನಾಥ (ಪ್ರಭಾಸ), ಶಾಮ್ಲಜಿ, ಉದಯಪುರ, ಶ್ರೀನಾಥದ್ವಾರಕ, ಕಂಗ್ರೋಲಿದ್ವಾರಕ, ಪುಷ್ಕರ, ಅಂಬಾಜಿ ಮತ್ತು ಮಾತೃಗಯಾ.

3 ಪ್ರವಾಸ : 12.02.2014 ರಿಂದ 10 ದಿನಗಳು - ಒಬ್ಬರಿಗೆ ರೂ. 11,100/
ಕಾಶಿ/ಗಯಾ ಯಾತ್ರಾ ಮಹಾಶಿವರಾತ್ರಿ ಸ್ಪೆಷಲ್
ಸ್ಥಳಗಳು : ಪುರಿ, ಕೋನಾರ್ಕ, ಭುವನೇಶ್ವರ, ಧವಳಗಿರಿ, ಗಯಾ ವಾರಣಾಸಿ, ಅಯೋಧ್ಯಾ ಮತ್ತು ಅಲಹಾಬಾದ್

ಇಂದೇ ಸೀಟೊಂದಕ್ಕೆ ರೂ. 5,000/ ಕಳಿಸಿ ನಿಮ್ಮ ಸೀಟು ರಿಜರ್ವ್ ಮಾಡಿಸಿಕೊಳ್ಳಿ.
ಸೂಚನೆ : ಮೇಲೆ ತಿಳಿಸಿದ ದರಗಳಲ್ಲಿ ಎರಡನೆ ದರ್ಜೆಯಲ್ಲಿ ರೈಲ್ವೇ ಸ್ಲೀಪರ್ ಚಾರ್ಜ್ ಮತ್ತು ಬದರಿ ತಲುಪುವ ಬಸ್ ಚಾರ್ಜು ಸ್ಥಳೀಯವೀಕ್ಷಣೆ ಖರ್ಚು ಮತ್ತು ಪ್ರತಿದಿನ 2 ಹೊತ್ತಿನ, ಕಾಫಿ /ಟಿ, ಊಟದ ದರ ಹಾಗೂ ವಸತಿಯ ಖರ್ಚುಗಳೆಲ್ಲವೂ ಸೇರಿವೆ. ಪ್ರತಿದಿನ ಮಾಧ್ವ ಬ್ರಾಹ್ಮಣರಿಂದ ಅಡುಗೆ ತಯಾರಿಕೆಗಳನ್ನು ವ್ಯವಸ್ಥೆ ಮಾಡಲಾಗಿದೆ .

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ [09.00 Am to 01.00 Pm] [02.00 Pm to 07.00 Pm] :
**R. Prasad / R. Prabhakar** #2, Agasthiar Street, Tambaram East,
Chennai - 600 059. Ph No : 044 - 2239 0890. Mobile - 094440 87901.

## ಶ್ರೀರಾಘವೇಂದ್ರ ಟೂರ್ಸ ಆಂಡ್ ಟ್ರಾವೆಲ್ಸ್

ಮಾಧ್ವಜನರ ಮೆಚ್ಚುಗೆ ಪಡೆದಿರುವ ಉತ್ತರಭಾರತ(ಬದರಿ)ಯಾತ್ರೆ . ಒಂದು ಸ್ಲೀಪರ್ ಕೋಚ್‌ನಲ್ಲಿ 28 ದಿನಗಳವರೆಗೆ. ಪ್ರತಿದಿನ ದೇವರ ಪೂಜೆ, ನೈವೇದ್ಯ , ತೀರ್ಥಪ್ರಸಾದ ಮಡಿಯಿಂದ ಊಟದ ವ್ಯವಸ್ಥೆ

**ದಿನಾಂಕ - 26-12-2014 ರಿಂದ 19-01-2015 ರವರೆಗೆ**

ಯಾತ್ರಾಸ್ಥಳಗಳು : ಪುರಿ ಕೋನಾರ್ಕ, ಭುವನೇಶ್ವರ, ಧವಳಗಿರಿ, ಸಾಕ್ಷಿಗೋಪಾಲ, ಗಯಾ, ಬುದ್ಧಗಯಾ, ಕಾಶಿ, ಅಲಹಾಬಾದ್(ಪ್ರಯಾಗ) ಅಯೋಧ್ಯ, ನೈಮಿಷಾರಣ್ಯ , ಹರಿದ್ವಾರ, ಋಷಿಕೇಶ, ಬದರೀನಾಥ, ದೇಹಲಿ, ಮಥುರಾ, ಬೃಂದಾವನ, ಆಗ್ರಾ , ಪುಷ್ಕರ್ ಅಹಮದಾಬಾದ್, ಮಾತೃಗಯಾ, ಅಜಮೀರ್, ದ್ವಾರಕಾ, ಬೇಟ್‌ದ್ವಾರಕ, ನಾಗನಾಥ, ಪ್ರಬಾಸ್, ಸೋಮನಾಥ ಇತ್ಯಾದಿ

**ಪ್ರತಿ ಸೀಟು ಒಂದಕ್ಕೆ 17,500/-**

(ಈ ಸುಧೀರ್ಘ ಪ್ರವಾಸದಲ್ಲಿ ಎರಡು ಹೊತ್ತು ಚಾಹಾ/ಕಾಫಿ, ಒಂದು ಊಟ, ಸಾಯಂಕಾಲ ಉಪಹಾರ, ವಸತಿ ಸೌಕರ್ಯ, ಟಾಂಗಾಖರ್ಚು, ಬದರಿಗೆ ಹೋಗಿಬರುವ ಬಸ್‌ಚಾರ್ಜಸೇರಿದೆ)
ಇಂದೇ ಸೀಟು ಒಂದಕ್ಕೆ 2,000/- ಮುಂಗಡ ಹಣವನ್ನು ಕೊಟ್ಟು ನಿಮ್ಮ ಸೀಟನ್ನು ಕಾದಿರಿಸಿರಿ.

ಸಂಪರ್ಕ : **Venkateshachar Joshi** S/o Praneshachar Joshi
H.No.3-4-5/2/1A, Dr.Bhoomanna Lane Kachiguda, Hyderabad,
500027 Phone : 040 - 27567608 / 9394767608

# ಶ್ರೀ ಬದರಿನಾಥಟೂರ್ಸ್ ಮತ್ತು ಟ್ರಾವೇಲ್ಸ್

## ದಕ್ಷಿಣಭಾರತ ಯಾತ್ರೆ

ರಾತ್ರಿಪ್ರವಾಸರಹಿತ 2+2 ಪುಶ್ಯಬ್ಯಾಕ್ ಎಸ್.ಆರ್.ಎಸ್ ಲಕ್ಜರಿ ಬಸ್‌ನಲ್ಲಿ ಪ್ರಯಾಣ

**ದಿ.8-12-2014 ರಿಂದ 21-12-2014ರವರೆಗೆ 14 ದಿನಗಳು**

**ಸೀಟು ಒಂದಕ್ಕೆ ರೂ 15,500/-**

ಬೆಳಗಾವಿಯಿಂದ ತಿರುವಣ್ಣಾಮಲೈ, ಶಿವಕಂಚಿ, ವಿಷ್ಣುಕಂಚಿ, ತಿರುಕೊಯಿಲೂರು, ವಿಳ್ಳಿಪುರಂ, ಶ್ರೀಮುಷ್ಣಂ ಚಿದಂಬರಮ್, ಕುಂಭಕೋಣಮ್, ತಂಜಾವೂರು, ಶ್ರೀರಂಗಮ್, ಮಧುರೈ, ರಾಮೇಶ್ವರ, ಕನ್ಯಾಕುಮಾರಿ, ಸುಚೀಂದ್ರ, ತಿರುವನಂತಪುರ, ಗುರುವಾಯೂರ, ಉಡುಪಿ, ಸ್ವಾದಿ, ಬೆಳಗಾವಿ

ಈ ಅಲ್ಪಾವಧಿ ಪ್ರವಾಸದಲ್ಲಿ ಪ್ರತಿದಿನ ಎರಡು ವೇಳೆ ಚಹಾ-ಕಾಫಿ, ಮಧ್ಯಾಹ್ನಊಟ, ಸಂಜೆ ಪೂರ್ಣ ಫಲಾಹಾರ/ಊಟ, ದರ್ಶನದ ವ್ಯವಸ್ಥೆ, ವಸತಿ ಸೌಕರ್ಯ ಇರುತ್ತದೆ. ಪ್ರತಿಸೀಟಿಗೆ ರೂ 4,000ಗಳನ್ನು ಮುಂಗಡವಾಗಿ ಕೊಟ್ಟು ಸೀಟನ್ನು ಕಾಯ್ದಿರಿಸಬೇಕು. (ಸೂಚನೆ : ಸಮಯಸಿಕ್ಕರೆ ಹೆಚ್ಚಿನ ಕ್ಷೇತ್ರಗಳ ದರ್ಶನ ಮಾಡಿಸಲಾಗುವುದು)

**ವ್ಯವಸ್ಥಾಪಕರು : ರಾಜೀವ ಜೋಶಿ (ಸತ್ತಿ) ಬೆಳಗಾವಿ 09448347054**

# ಅನಂತಪದ್ಮನಾಭ ಟೂರ್ಸ್ & ಟ್ರಾವಲ್ಸ್

## ದಕ್ಷಿಣಭಾರತ (ರಾಮೇಶ್ವರ, ಉಡುಪಿ) ಯಾತ್ರೆ

**ದಿನಾಂಕ 26-12-2014 ರಿಂದ 14-01-2015 ರವರೆಗೆ**

ಪ್ರತಿನಿತ್ಯ ದೇವರಪೂಜೆ, ಮಡಿಯಿಂದ ಊಟದ ವ್ಯವಸ್ಥೆ, ರಾತ್ರಿಗೆ ಫಲಹಾರ, 2 ಟೀ/ಕಾಫಿ, ವಸತಿ ಸೌಕರ್ಯ, ಬಸ್ಸು ಚಾರ್ಜುಗಳು ಸೇರಿವೆ. ತಿರಕೋಯಿಲುರಿನಲ್ಲಿ ಶ್ರೀ ರಘೂತ್ತಮ ತೀರ್ಥರ ಮೂಲ ವೃಂದಾವನ ಆರಾಧನಾ ಮಹೋತ್ಸವದಲ್ಲಿ ಭಾಗವಹಿಸುವುದು.

**ಯಾತ್ರಾಸ್ಥಳಗಳು :** ಶ್ರೀಶೈಲ, ಅಹೋಬಿಲ, ತಿರುಮಲ ತಿರುಪತಿ, ಕಂಚಿ, ತಿರುಕೋಯಿಲುರು, ಶ್ರೀಮುಷ್ಣಂ, ಕುಂಭಕೋಣಂ, ತಂಜಾವೂರು, ಶ್ರೀರಂಗಂ, ಮಧುರೈ, ರಾಮೇಶ್ವರ, ಕನ್ಯಾಕುಮಾರಿ, ತಿರುವನಂತಪುರಂ, ಗುರುವಾಯೂರು, ಸುಬ್ರಹ್ಮಣ್ಯ, ಧರ್ಮಸ್ಥಳ, ಉಡುಪಿ, ಪಾಜಕಕ್ಷೇತ್ರ, ದುರ್ಗಾಬೆಟ್ಟ, ಗೋಕರ್ಣ, ಸ್ವಾದಿ ಸವಣೂರು, ಮಂತ್ರಾಲಯ ಇತ್ಯಾದಿ.

**ಸೀಟು ಒಂದಕ್ಕೆ ರೂ. 13,200/- ಮಾತ್ರ**

**ಇಂದೇ ಸೀಟೊಂದಕ್ಕೆ ರೂ. 3,000/- ಮುಂಗಡ ಹಣವನ್ನು ಕಳಿಸಿ ನಿಮ್ಮ ಸೀಟನ್ನು ರಿಜರ್ವ್ ಮಾಡಿಸಿಕೊಳ್ಳಿ.**

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :**

ವ್ಯವಸ್ಥಾಪಕರು : **D.VIJAYENDRACHARYA** C/o D Vasudeva Chary Plot - 12 Road No 4 Anandnagarg, Bandlaguda, Nagole, Hyderabad. 500063, Ph : 09440702447, 09866305191

**ಸೂ :- 09-04-15 ರಿಂದ 15 ದಿನಗಳ ನೇಪಾಳ (ಮುಕ್ತಿನಾಥ) ವೈಷ್ಣವದೇವಿಯಾತ್ರೆ, ಸೀಟು ಒಂದಕ್ಕೆ ರೂ 13,500/- ಮಾತ್ರ**